

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 14 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 178 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಪ್ರಧಾನಿ ಮೋದಿಯವರೇ ಅಭ್ಯರ್ಥಿಗಳ ಆಯ್ಕೆ ಮಾಡ್ತಾರೆ...

ಗರಿಗರಿ ಬಟ್ಟೆ ಹಾಕಿಕೊಂಡು ನಾಯಕರ ಮನೆ ಸುತ್ತುವವರಿಗೆ ಟಿಕೆಟ್ ಸಿಕ್ಕಲ್ಲ; ಜನಮನ್ನಣೆ ಇರುವವರಿಗಷ್ಟೇ ಟಿಕೆಟ್: ಮಾಜಿ ಸಿಎಂ ಯಡಿಯೂರಪ್ಪ ಸ್ಪಷ್ಟನೆ





ಬೆಂಗಳೂರು, ಅ.13(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆಯನ್ನು ಪ್ರಧಾನಿ ನರೇಂದ್ರ ಮೋದಿಯವರೇ ಮಾಡಲಿದ್ದಾರೆ ಎಂದು ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯರೂ ಆದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಗೆ ಈಗಾಗಲೇ ವರಿಷ್ಠರು ಕಸರತ್ತು ನಡೆಸಿದ್ದಾರೆ. ಪಕ್ಷಕ್ಕಾಗಿ ದುಡಿದ ಹಾಗೂ ಕ್ಷೇತ್ರದಲ್ಲಿ ಜನರ ಜೊತೆ ಸಂಪರ್ಕ ಇರುವವರಿಗಷ್ಟೇ ಪಕ್ಷದ ಟಿಕೆಟ್ ದೊರೆಯುತ್ತದೆ. ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ನೇತೃತ್ವದ ಚುನಾವಣಾ ರಾಜಕೀಯ ತಂತ್ರದಿಂದಲೇ ನಾವು ಕೇಂದ್ರದಲ್ಲಿ ಸತತವಾಗಿ ಅಧಿಕಾರಕ್ಕೆ ಬಂದಿರುವುದಲ್ಲದೆ, ಬಹುತೇಕ ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದೇವೆ.

ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಮಾತ್ರ ಬಿಜೆಪಿ ಖಾತೆ ತೆರೆದಿದೆ. ಅಧಿಕಾರದಲ್ಲಿರುವ ನಮ್ಮ ರಾಜ್ಯವನ್ನು ಬೇರೆ ಪಕ್ಷಗಳಿಗೆ ಯಾವುದೇ ಕಾರಣಕ್ಕೂ ವರಿಷ್ಠರು ಬಿಟ್ಟುಕೊಡುವುದಿಲ್ಲ.

ವಿಧಾನಸಭಾ ಚುನಾವಣೆಗೆ ಇನ್ನೂ ಆರೇಳು ತಿಂಗಳು ಇರುವಾಗಲೇ ಗೌಪ್ಯವಾಗಿ ಅಭ್ಯರ್ಥಿಗಳು ಯಾರಾಗಬೇಕೆಂಬುದರ ವಿಚಾರದಲ್ಲಿ ಸಮೀಕ್ಷೆಗಳನ್ನು ಮೋದಿಯವರೇ ಮಾಡಿಸುತ್ತಿದ್ದಾರೆ. ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಸಮೀಕ್ಷೆಗಳು ನಡೆಯುತ್ತಿವೆ. ಇದನ್ನು ಅರ್ಥ ಮಾಡಿಕೊಂಡು ಮುಖಂಡರು ಮತ್ತು ಕಾರ್ಯಕರ್ತರು ಪಕ್ಷ ಸಂಘಟನೆ ಮತ್ತು ಜನರ ಜೊತೆ ಬೆರೆಯಬೇಕು. ಇಸ್ತ್ರಿ ಬಟ್ಟೆ ಹಾಕಿಕೊಂಡು ನಾಯಕರ ಮನೆ ಸುತ್ತಿದರೆ ಟಿಕೆಟ್ ದೊರೆಯುವುದಿಲ್ಲ. ಜನಮನ್ನಣೆ ಇರುವವರಿಗೆ ಮಾತ್ರ ಟಿಕೆಟ್. ವರಿಷ್ಠರ ಬಳಿ ಯಾರ ಪ್ರಭಾವವೂ ನಡೆಯುವುದಿಲ್ಲ. ಇದನ್ನು ಅರ್ಥ ▶ 8ನೇ ಪುಟಕ್ಕೆ

ಮಳವಳ್ಳಿಯಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ, ಹತ್ಯೆ ಪ್ರಕರಣ; ವೈದ್ಯಕೀಯ ವರದಿ ಆಧರಿಸಿ

ಟ್ಯೂಷನ್ ಟೀಚರ್ ಕಾಂತರಾಜು ಬಂಧನ



ಮಳವಳ್ಳಿ, ಅ.13–ನಾಪತ್ತೆಯಾಗಿದ್ದ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿ ನಿರ್ಮಾಣ ಹಂತದ ಕಟ್ಟಡದಲ್ಲಿರುವ ಸಂಪ್‌ನಲ್ಲಿ ಶವವಾಗಿ ಪತ್ತೆಯಾದ ಪ್ರಕರಣಕ್ಕೆ ತಿರುವು ದೊರೆತಿದ್ದು, ಟ್ಯೂಷನ್ ಟೀಚರ್, ಅತ್ಯಾಚಾರವೆಸಗಿ ಕೊಲೆ ಮಾಡಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಟ್ಯೂಷನ್ ಟೀಚರ್ ಕಾಂತರಾಜು, 10 ವರ್ಷದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿ, ಹತ್ಯೆ ಮಾಡಿದ ಕಾಮುಕನಾಗಿದ್ದು, ಈತನನ್ನು ಬಂಧಿಸಿರುವ ಮಳವಳ್ಳಿ ಟೌನ್ ಠಾಣೆ ಪೊಲೀಸರು ಕೊಲೆ, ಸಾಕ್ಷ್ಯ ನಾಶ, ಅತ್ಯಾಚಾರ ಮತ್ತು ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಿದ್ದಾರೆ.

ವಿವರ: ಮಳವಳ್ಳಿ ಪಟ್ಟಣದ ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 10 ವರ್ಷದ ವಿದ್ಯಾರ್ಥಿನಿ ಅ.11ರಂದು ಬೆಳಗ್ಗೆ 10.30ರ ವೇಳೆಯಲ್ಲಿ ಟ್ಯೂಷನ್ ಸೆಂಟರ್ ಹತ್ತಿರ ಹೋಗಿ ಎಷ್ಟು ಗಂಟೆಗೆ ಟ್ಯೂಷನ್ ಇದೆ ಎಂದು ಕೇಳಿಕೊಂಡು ಬರುವುದಾಗಿ ತಿಳಿಸಿ ಮನೆಯಿಂದ ಹೋದವಳು ಮಧ್ಯಾಹ್ನ 1 ಗಂಟೆಯಾದರೂ ವಾಪಸ್ಸಾಗಿರಲಿಲ್ಲ. ಈಕೆಯ ತಾತ ಟ್ಯೂಷನ್ ಸೆಂಟರ್ ಬಳಿ ತೆರಳಿ ಟ್ಯೂಷನ್ ಟೀಚರ್ ಕಾಂತರಾಜು ಅವರನ್ನು ವಿಚಾರಿಸಿದಾಗ ಅವರು ನಿಮ್ಮ ಮೊಮ್ಮಗಳು ಸೆಂಟರ್‌ಗೆ ಬಂದಿದ್ದಳು. ಆದರೆ ಪುಸ್ತಕ ತಂದಿರಲಿಲ್ಲ. ಹೀಗಾಗಿ ಪುಸ್ತಕ ತರುವಂತೆ ಹೇಳಿ ಕಳುಹಿಸಿದೆ ಎಂದು ತಿಳಿಸಿದ್ದಲ್ಲದೇ, ಇನ್ನೂ ನಿಮ್ಮ ▶ 8ನೇ ಪುಟಕ್ಕೆ

ಟ್ಯೂಷನ್ ಟೀಚರ್ ಕಾಂತರಾಜು ವರ್ತನೆ ಮತ್ತು ಬೇಕರಿಯಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದ ಕೆಲವು ದೃಶ್ಯಗಳನ್ನಾಧರಿಸಿ ಅನುಮಾನಗೊಂಡ ಪೊಲೀಸರು ಆತನನ್ನು ವಶಕ್ಕೆ ಪಡೆದು ತೀವ್ರವಾಗಿ ವಿಚಾರಣೆಗೊಳಪಡಿಸಿದಾಗ ಆತನೇ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿ, ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ನಿರ್ಮಾಣ ಹಂತದ ಕಟ್ಟಡದ ಸಂಪ್‌ನಲ್ಲಿ ಶವವನ್ನು ಹಾಕಿದ್ದ. ತನ್ನ ಮೇಲೆ ಅನುಮಾನ ಬಾರದಿರಲಿ ಎಂದು ವಿದ್ಯಾರ್ಥಿನಿಯ ತಾತನ ಜೊತೆ ಸೇರಿ ಆಕೆಯನ್ನು ಹುಡುಕಾಡಿದ್ದ ಎಂಬುದು ಬಯಲಾಗಿದೆ.













ಇಂದಿನಿಂದ ಕುರುಬಾರಹಳ್ಳಿ ಗ್ರಾಮಸ್ಥರ ಆರಾಧ್ಯ ದೇವತೆಗಳಾದ

ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ, ಶ್ರೀ ಮಾಲಮ್ಮ ಜಾತ್ರಾ ಮಹೋತ್ಸವ

ಮೈಸೂರು, ಅ.13– ಮೈಸೂರು ಸಿದ್ದಾರ್ಥನಗರ ಕುರುಬಾರಹಳ್ಳಿ ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಶ್ರೀ ಆಯರಳ್ಳಿ ಮಾಕಮ್ಮನವರ ದೇವಸ್ಥಾನ ಟ್ರಸ್ಟ್ ವತಿಯಿಂದ ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ಜಾತ್ರಾ ಮಹೋತ್ಸವವನ್ನು ಕುರುಬಾರಹಳ್ಳಿ ಗ್ರಾಮಸ್ಥರು ನಾಳೆ (ಶುಕ್ರವಾರ) ಯಿಂದ 3 ದಿನಗಳ ಕಾಲ ಆಚರಿಸುತ್ತಿದ್ದಾರೆ. ಅ.14ರ ಶುಕ್ರವಾರ ರಾತ್ರಿ 7 ಗಂಟೆಗೆ ಘಟೆ ಪೂಜೆ, ಅ.15ರ ಶನಿವಾರ ಸಂಜೆ 4 ಗಂಟೆಗೆ ಮಜ್ಜಣ ಪೂಜೆ ಹಾಗೂ ಅ.16ರ ಭಾನುವಾರ ಬೆಳಗ್ಗೆ 9 ಗಂಟೆಗೆ ವಾಹನೋತ್ಸವ ಪೂಜೆ ಏರ್ಪಡಿಸಲಾಗಿದೆ. ಈ ಪೂಜಾ ಉತ್ಸವದಲ್ಲಿ ಮೈಸೂರು ನಗರವೂ ಸೇರಿದಂತೆ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್.ನಗರ, ತಿ. ನರಸೀಪುರ ಹಾಗೂ ಗರ್ಗೇಶ್ವರಿ, ಮಂಟಿಕೊಪ್ಪಲು, ರಾವಂದೂರು, ಯಾಂದಳ್ಳಿ, ನಾಡನಹಳ್ಳಿ, ಮಲ್ಲರಾಜಯ್ಯನ ಹುಂಡಿ, ತಮ್ಮಡಳ್ಳಿ ಸೇರಿದಂತೆ 40 ಗ್ರಾಮಗಳಿಂದ ಭಕ್ತಾದಿಗಳು ಪಾಲ್ಗೊಳ್ಳುವ ಪದ್ಧತಿಯಿದೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕರಾದ ಎಸ್.ಎ.ರಾಮದಾಸ್, ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ವಾಸು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆ.ಆರ್. ನಗರ ಕಾಂಗ್ರೆಸ್ ಮುಖಂಡ ರವಿಶಂಕರ್ ಸೇರಿದಂತೆ ಎಲ್ಲಾ ಪಕ್ಷಗಳ ನಾಯಕರು ಈ ಜಾತ್ರೆಗೆ ಆಗಮಿಸಲಿದ್ದು, ಈ ಧಾರ್ಮಿಕ ಉತ್ಸವದಲ್ಲಿ ಸಕಲರು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಟ್ರಸ್ಟ್‌ನ ಅಧ್ಯಕ್ಷರಾದ ಅಪ್ಪುಗೌಡ, ಉಪಾಧ್ಯಕ್ಷರಾದ ಪರಮೇಶ್, ವೈ.ಎಂ.ಗೌಡ, ಕಾರ್ಯದರ್ಶಿ ಕೆ.ಜವರಾಜು, ಖಜಾಂಚಿ ಕ್ಯಾಂಟಿನ್ ನಾಗರಾಜು, ಸಂಘಟನಾ ಕಾರ್ಯದರ್ಶಿ ಜೆ.ಪ್ರಕಾಶ್, ಟ್ರಸ್ಟಿಗಳಾದ ಮಹದೇವಯ್ಯ, ನಾಗಣ್ಣ, ಎಸ್.ಶಿವಣ್ಣ, ಬೀರಪ್ಪ, ಬಿ.ಶಿವಶಂಕರ್, ಕ್ಯಾಂಟಿನ್ ರವಿಕುಮಾರ್, ಟಿ.ಮಂಜುನಾಥ್, ಬಸವರಾಜು, ಎಂ.ದೇವರಾಜು, ಎಂ.ಶಿವಣ್ಣ, ಎಂ.ಚಂದ್ರು, ಶಿವಶಂಕರ್, ಎಸ್.ರಮೇಶ್, ಎಂ.ಜೆ.ರವಿಕುಮಾರ್ ಮತ್ತು ಎ.ಧನಂಜಯ ಕೋರಿದ್ದಾರೆ.

ಆರ್.ಲಿಂಗಪ್ಪ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ



ಮೈಸೂರು, ಅ.13(ಆರ್‌ಕೆ)–ಮಾಜಿ ಮೇಯರ್ ಆರ್.ಲಿಂಗಪ್ಪ ಅವರನ್ನು ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ)ದ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ತಿಳಿಸಿದ್ದಾರೆ. ಇತ್ತೀಚೆಗೆ ಮೈಸೂರಿಗೆ ಆಗಮಿಸಿದ್ದ ಜೆಡಿಎಸ್ ನಾಯಕರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಆರ್.ಲಿಂಗಪ್ಪ ಅವರಿಗೆ ನೇಮಕಾತಿ ಆದೇಶ ಪತ್ರ ನೀಡಿದರು.

ಅ.16ರಿಂದ ಯೋಗ, ಪರಿಸರ ರಕ್ಷಣೆಗಾಗಿ ಏಕಾಂಗಿ ಪಾದಯಾತ್ರೆ



ಮೈಸೂರು,ಅ.13(ಆರ್‌ಕೆಬಿ)–ಮೈಸೂರು ತಾಲೂಕಿನ ಜಯಪುರ ಹೋಬಳಿ ಉದ್ಬೂರು ಗ್ರಾಮದ ತಾವು ಯೋಗದ ಮಹತ್ವ ತಿಳಿಸುವು ದರೊಡನೆ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಬೀಜದ ಉಂಡೆ (ಸೀಡ್ ಬಾಲ್) ಹಾಕುವ ಉದ್ದೇಶದಿಂದ ದೇಶಾದ್ಯಂತ ಪಾದಯಾತ್ರೆ ಅಭಿಯಾನ ಹಮ್ಮಿಕೊಂಡಿರುವುದಾಗಿ ಕೃಷ್ಣನಾಯಕ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.16ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಬಳಿಯಿಂದ ನನ್ನ ಏಕಾಂಗಿ ಪಾದಯಾತ್ರೆ ಆರಂಭವಾಗಲಿದ್ದು, ಹುಣಸೂರು, ಕುಶಾಲನಗರ, ಮಡಿಕೇರಿ, ಕಾಸರಗೂಡು ಮೂಲಕ ಕೇರಳ ಪ್ರವೇಶಿಸಲಾಗುವುದು. ಬಳಿಕ ತಮಿಳುನಾಡು, ಆಂಧ್ರಪ್ರದೇಶ, ನವದೆಹಲಿ, ಜಮ್ಮು ಮತ್ತು ಕಾಶ್ಮೀರಕ್ಕೆ ಪ್ರಯಾಣಿಸಲಿದೆ. ಎರಡು ವರ್ಷಗಳ ಕಾಲ ಪಾದಯಾತ್ರೆ ನಡೆಯಲಿದೆ ಎಂದರು. ಮಾರ್ಗಮಧ್ಯೆ ನಗರ, ಪಟ್ಟಣಗಳಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಯೋಗ ಹಾಗೂ ಪರಿಸರ ಸಂರಕ್ಷಣೆಯ ಮಾಹಿತಿ ನೀಡುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಉದ್ಬೂರು ಗ್ರಾಪಂ ಅಧ್ಯಕ್ಷ ಕೃಷ್ಣ, ಡಾ.ಪ್ರಶಾಂತ್, ರಂಗಸ್ವಾಮಿ, ದಯಾಕರ್ ಉಪಸ್ಥಿತರಿದ್ದರು.



ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗಾನ ಭಾರತಿ ವೇದಿಕೆಯಲ್ಲಿ ಮೇಲುಕೋಟೆ ಎಂ.ಎಸ್.ರಮ್ಯಶ್ರೀ(ಸ್ಯಾಕ್ಸೋಫೋನ್), ಎಂ.ಎಸ್.ಸಾಗರ್ (ಸ್ಯಾಕ್ಸೋಫೋನ್), ಅರಮನೆ ಆಸ್ಥಾನ್ ವಿದ್ವಾನ್ ಎಂ.ಎನ್. ಶ್ರೀನಿವಾಸ್ (ಡೋಲ್), ಚಂದು (ಡೋಲ್), ವಿಜಯ್ ಸೂರ್ಯ (ಫ್ಲೂಟ್), ಪ್ರೇರಣ (ಪಿಟೀಲು) ಕಾರ್ಯಕ್ರಮ ನೀಡಿ, ಸಂಗೀತ ಪ್ರಿಯರ ಪ್ರಶಂಸೆಗೆ ಪಾತ್ರರಾದರು.

ನಾಳೆ ಕಲಾಭೂಮಿ ಪ್ರತಿಷ್ಠಾನದ ಉದ್ಘಾಟನೆ

ಮೈಸೂರು, ಅ.13(ಆರ್‌ಕೆಬಿ)– ತಾವು ಆರಂಭಿಸಿರುವ ಸಿನಿಮಾ, ನಾಟಕ ಹಾಗೂ ಲಲಿತ ಕಲೆ ಕುರಿತ ಕಲಾಭೂಮಿ ಪ್ರತಿಷ್ಠಾನದ ಉದ್ಘಾಟನಾ ಸಮಾರಂಭ ಅ.15ರಂದು ಸಂಜೆ 4 ಗಂಟೆಗೆ ವಿಜಯನಗರ ಒಂದನೇ ಹಂತದಲ್ಲಿನ ಕನ್ನಡ ಸಾಹಿತ್ಯ ಭವನದಲ್ಲಿ ನಡೆಯಲಿದೆ ಎಂದು ಸಂಸ್ಥಾಪಕ ಆಸ್ಕರ್ ಕೃಷ್ಣ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚಲನಚಿತ್ರ, ನಾಟಕ, ನೃತ್ಯ, ಚಿತ್ರ ಸಾಹಿತ್ಯ, ಅಭಿನಯ, ನಿರ್ದೇಶನ ಮೊದಲಾದ ವಿಷಯ ತರಬೇತಿ ಸಂಸ್ಥೆ ಉದ್ದೇಶವಾಗಿದೆ. ಮೇಯರ್ ಶಿವಕುಮಾರ್ ಉದ್ಘಾಟಿಸುವರು. ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ.ಹರೀಶ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಚಿತ್ರನಟರಾದ ಜೈಜಗದೀಶ್, ಸುಂದರರಾಜ್ ಇನ್ನಿತರರು ಭಾಗವಹಿಸುವರು. ಇದೇ ಸಂದರ್ಭದಲ್ಲಿ ಮೈಸೂರು ವಿಭಾಗದಲ್ಲಿ ಸಾಹಿತ್ಯ, ಸಮಾಜಸೇವೆ, ಸಿನಿಮಾ ಹಾಗೂ ರಂಗಭೂಮಿಯಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವವರನ್ನು ಸನ್ಮಾನಿಸಲಾಗುವುದು ಎಂದರು. ಡಾ. ಕೃಷ್ಣಮೂರ್ತಿ ಚಮರಂ, ಪ್ರಧಾನ್ ಗೋಷ್ಠಿಯಲ್ಲಿ ಹಾಜರಿದ್ದರು.

ಜಾಹೀರಾತು ಫಲಕದ ಕಂಬಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಮೈಸೂರು,ಅ.13(ಆರ್‌ಕೆ)–ಜಾಹೀರಾತು ಫಲಕದ ಕಂಬಕ್ಕೆ ಬಜಾಜ್ ಪಲ್ಸರ್ ಬೈಕ್ ಡಿಕ್ಕಿ ಹೊಡೆದು ಸವಾರ ಸಾವನ್ನಪ್ಪಿದ್ದಾನೆ. ಈ ದುರಂತ ಮೈಸೂರಿನ ಅಗ್ರಹಾರ ಸರ್ಕಲ್ ಸಮೀಪ ಜೆಎಸ್‌ಎಸ್ ಆಸ್ಪತ್ರೆ ಬಳಿ ಕಳೆದ ಮಧ್ಯರಾತ್ರಿ ಸಂಭವಿಸಿದೆ.

ಮೂಲತಃ ನಂಜನಗೂಡು ತಾಲೂಕು ಆಲತ್ತೂರು ಗ್ರಾಮದ, ಮೈಸೂರಿನ ದಟ್ಟಗಳ್ಳಿ ನಿವಾಸಿ ರಾಜಶೇಖರ್ ಮಗ ಎ.ಆರ್.ಸತೀಶ್(46) ದುರಂತದಲ್ಲಿ ಬಲಿಯಾಗಿದ್ದಾರೆ. ಅಗ್ರಹಾರ ಸರ್ಕಲ್ ಕಡೆಯಿಂದ ಪಲ್ಸರ್ ಬೈಕ್ (ಕೆಎ–09–ಜೆಎ–5779)ನಲ್ಲಿ ನಂಜನಗೂಡು ರಸ್ತೆ ಕಡೆಗೆ ಹೋಗುತ್ತಿದ್ದಾಗ ನಿಯಂತ್ರಣ ತಪ್ಪಿ ಜೆಎಸ್‌ಎಸ್ ಆಸ್ಪತ್ರೆ ಸರ್ಕಲ್‌ನ ಜಾಹೀರಾತು ಫಲಕದ ಕಂಬಕ್ಕೆ ಬುಧವಾರ ಮಧ್ಯರಾತ್ರಿ ಎಂ.ಜಿ. ರಸ್ತೆಯಲ್ಲಿ ಬೈಕ್ ಡಿಕ್ಕಿ ಹೊಡೆದಿದೆ. ತೀವ್ರ ರಕ್ತಸ್ರಾವದಿಂದ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಸತೀಶ್‌ನನ್ನು ಕೆ.ಆರ್. ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಆತ ಮಾರ್ಗ ಮಧ್ಯೆ ಅಸುನೀಗಿದ್ದಾರೆಂದು ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್. ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ. ಇಂದು ಬೆಳಗ್ಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಅ.13–ತಿ.ನರಸೀಪುರ ಪುರಸಭೆ ವತಿಯಿಂದ ಶೇ.24.10, 7.25, 5% ಯೋಜನೆಯಡಿ ವಿವಿಧ ಸೌಲಭ್ಯಗಳಿಗೆ ಫಲಾನುಭವಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. 2022–23 ನೇ ಸಾಲಿನ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನ್ಸಿಪಾಲಿಟಿ) ಯೋಜನೆ ಹಂತ–4ರಡಿ ಶೇ.24.10, ಶೇ.7.25 ಹಾಗೂ ಶೇ.5ರಡಿ ಹಮ್ಮಿಕೊಂಡ ವೈಯಕ್ತಿಕ ಕಾರ್ಯಕ್ರಮಗಳಿಗೆ ಕಾಯ್ದಿರಿಸಿದ ಅನುದಾನಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ತಿ.ನರಸೀಪುರ ಪುರಸಭೆ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಕಾರ್ಪೋರೇಟ್ ಸಂಸ್ಥೆಗಳೂ ಈಗ ಮಕ್ಕಳ ಪಾಲನಾ ಕೇಂದ್ರಗಳನ್ನು ದತ್ತು ಪಡೆಯಬಹುದು

'ಅಡಾಪ್ಟ್ ಎ ಹೋಮ್' ಯೋಜನೆಯಡಿ ಅವಕಾಶ ವಂಚಿತ ಮಕ್ಕಳಿಗೆ ಆಸರೆ ಭರವಸೆ



ಡಾ.ಬಗಾದಿ ಗೌತಮ್



ಮೈಸೂರು, ಅ.13(ಆರ್‌ಕೆ)–ಸಿಎಸ್‌ಆರ್ ಯೋಜನೆಯಡಿ 'ಅಡಾಪ್ಟ್ ಎ ಹೋಮ್' ಮೂಲಕ ಕಾರ್ಪೋರೇಟ್ ಸಂಸ್ಥೆಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳೂ ಮಕ್ಕಳ ಪಾಲನಾ ಕೇಂದ್ರ ಅಥವಾ ಚಿಲ್ಡ್ರನ್ಸ್ ಹೋಮ್‌ಗಳನ್ನು ದತ್ತು ಪಡೆಯಬಹುದಾಗಿದೆ.

ಅಂತಹ ಕೇಂದ್ರಗಳಲ್ಲಿ ಆಶ್ರಯ ಪಡೆದಿರುವ ಮಕ್ಕಳ ಬಗ್ಗೆ ಪ್ರೀತಿ, ಭ್ರಾತೃತ್ವ ಹೊಂದಿರುವ ಕಾರ್ಪೋರೇಟ್ ಕಂಪನಿಗಳು, ಉದ್ಯಮ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಂದ ಮಕ್ಕಳ ಪಾಲನಾ ಕೇಂದ್ರಗಳನ್ನು ದತ್ತು ಪಡೆಯಲು ಮೈಸೂರು ಜಿಲ್ಲಾಡಳಿತವು ಅರ್ಜಿ ಆಹ್ವಾನಿಸಿದೆ. ಮಕ್ಕಳು ಹಾಗೂ ಅವರ ಕುಟುಂಬದೊಂದಿಗೆ ಅತೀವ ಭಾವನಾತ್ಮಕ ಸಂಬಂಧ ಬೆಸೆದು ಆಸರೆಯಾಗುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.

ತಂದೆ–ತಾಯಿಯರು, ಸಂಬಂಧಿಕರಿಂದ ಬೇರ್ಪಟ್ಟು ಪ್ರೀತಿ ಕಳೆದುಕೊಂಡ ನತದೃಷ್ಟ ಮಕ್ಕಳಿಗೆ ಮನೆಯ ಪಾಲನಾ ವಾತಾವರಣ ನಿರ್ಮಿಸಿ, ಅವರ ಬೆಳವಣಿಗೆ ಮತ್ತು ಭವಿಷ್ಯದ ಭದ್ರತೆ ಒದಗಿಸಲು ಸರ್ಕಾರ 'ಅಡಾಪ್ಟ್ ಎ ಹೋಮ್' ಯೋಜನೆಯನ್ನು ಜಾರಿಗೆ ತಂದಿದೆ.

ಕಟ್ಟಡ ದುರಸ್ತಿ, ಹೊಸ ಕೊಠಡಿಗಳು, ಹೊರಾಂಗಣ ಕ್ರೀಡಾಂಗಣ ನಿರ್ಮಾಣ ಹಾಗೂ ಸಂಗೀತ ಉಪಕರಣಗಳಂತಹ ಮೂಲಭೂತ ಸೌಕರ್ಯ ಒದಗಿಸುವ ಮೂಲಕ ಸರ್ಕಾರದ ಚೈಲ್ಡ್ ಕೇರ್ ಸೆಂಟರ್‌ಗಳ ಸಮಗ್ರ ಅಭಿವೃದ್ಧಿಗೆ ಕಾರ್ಪೋರೇಟ್ ಕಂಪನಿಗಳು ಸಹಾಯ ನೀಡಲು ಈ ಯೋಜನೆ ಅವಕಾಶ ಕಲ್ಪಿಸಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ಮುಖ್ಯಸ್ಥರಾದ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ತಿಳಿಸಿದ್ದಾರೆ.

ಜೊತೆಗೆ ಕಲೆ, ಸಂಗೀತ, ಯೋಗ ಶಿಕ್ಷಕರಿಗೆ ಅನುದಾನ, ಶಿಕ್ಷಕರ ನೇಮಕ, ಶೈಕ್ಷಣಿಕ ಚಟುವಟಿಕೆಗೆ ಸಾಮಗ್ರಿಗಳನ್ನು ಪೂರೈಸುವ ಮೂಲಕ ಮಕ್ಕಳ ದೈಹಿಕ, ಭಾವನಾತ್ಮಕ, ಸಾಮಾಜಿಕ ಹಾಗೂ ನೈತಿಕ ಸಾಮರ್ಥ್ಯ ಅಭಿವೃದ್ಧಿಯಾಗಲಿದೆ ಎಂದಿರುವ ಜಿಲ್ಲಾಧಿಕಾರಿಗಳು, ಇದರಿಂದ ನಿರ್ಲಕ್ಷ್ಯಕ್ಕೊಳಗಾದ ಮಕ್ಕಳ ಸುರಕ್ಷತೆಗೂ ಸಹಕಾರಿಯಾಗಲಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಅದರೊಟ್ಟಿಗೆ ಉದ್ಯಮ ಸಂಸ್ಥೆಗಳು ಸಿಎಸ್‌ಆರ್ ಸಂಪನ್ಮೂಲವನ್ನು ಸಮಾಜದ ಅಭಿವೃದ್ಧಿಗೆ ಸದ್ಬಳಕೆ ಮಾಡಲು ಉತ್ತಮ ಅವಕಾಶ ಲಭ್ಯವಾದಂತಾಗಲಿದೆಯಲ್ಲದೆ, ಮಕ್ಕಳ ಭವಿಷ್ಯಕ್ಕೆ ಆಸರೆಯಾದಂತಾಗಿದೆ ಎಂದಿರುವ ಜಿಲ್ಲಾಧಿಕಾರಿಗಳು, ಆಸಕ್ತರು ಸರ್ಕಾರ ಅನುಮೋದಿಸಿರುವ ಒಪ್ಪಂದ ಪತ್ರ (MOU)ಕ್ಕೆ ಸಹಿ ಮಾಡಿ ಚಟುವಟಿಕೆ ಆರಂಭಿಸಬಹುದೆಂದು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ವಿಜಯನಗರ 4ನೇ ಹಂತ, 2ನೇ ಘಟ್ಟದ ಅಂಜನಾದ್ರಿ ಮುಖ್ಯ ರಸ್ತೆಯಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಖುದ್ದಾಗಿ ಅಥವಾ ಸ್ಥಿರ ದೂ.ಸಂಖ್ಯೆ 0821–2543003 ಮೂಲಕ ಸಂಪರ್ಕಿಸಬಹುದೆಂದು ಡಾ. ಬಗಾದಿ ಗೌತಮ್ ತಿಳಿಸಿದ್ದಾರೆ.

ಇಂದು ಭೀಮಾ ಜ್ಯುವೆಲ್ಸ್‌ನ ನವೀಕೃತ ಮಳಿಗೆ ಉದ್ಘಾಟನೆ



ಮೈಸೂರು,ಅ.13–ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಭೀಮಾ ಜ್ಯುವೆಲ್ಸ್‌ನ ನವೀಕೃತಗೊಂಡಿರುವ ಮಳಿಗೆಯು ಗ್ರಾಹಕರಿಗೆ ಸಕಲ ಸೌಕರ್ಯದೊಂದಿಗೆ ಉತ್ಕೃಷ್ಟ ಸೇವೆಯನ್ನು ಒದಗಿಸುವ ಸಲುವಾಗಿ ಮಳಿಗೆ ಉದ್ಘಾಟನಾ ಸಮಾರಂಭ ಮತ್ತು ಭೀಮಾ ಸೂಪರ್ ಸಪ್ಲೈಸ್‌ನ 98ನೇ ವಾರ್ಷಿಕೋತ್ಸವ ಆಚರಣೆಯನ್ನು ನಾಳೆ (ಅ.14) ಮಧ್ಯಾಹ್ನ 12 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಚಲನಚಿತ್ರ ನಟಿ ರಚಿತಾ ರಾಮ್, ಮೇಯರ್ ಶಿವಕುಮಾರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಮೈಸೂರಲ್ಲಿ ಎನ್‌ಇಪಿ ಕುರಿತು ಕಾರ್ಯಾಗಾರ



ಮೈಸೂರು, ಅ.13 (ಆರ್‌ಕೆಬಿ)– ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತಂತೆ ಕಾಲೇಜು ವಿದ್ಯಾರ್ಥಿಗಳು ಮಾತ್ರವಲ್ಲದೆ ಪ್ರಾಚಾರ್ಯರಲ್ಲಿಯೂ ಗೊಂದಲವಿದೆ. ಹೀಗಾಗಿ ಈ ಶಿಕ್ಷಣ ನೀತಿಯ ಉಪಯೋಗ ಹಾಗೂ ನ್ಯೂನತೆಗಳ ಬಗ್ಗೆ ಚರ್ಚಿಸಿ, ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಅ.15 ರಂದು ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿಯೂ ಕಳೆದ ವರ್ಷ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಂಡಿದೆ. ಪದವಿ ಪಡೆಯಬೇಕಾದ ಅವಧಿಯನ್ನೂ ಬದಲಿಸಲಾಗಿದೆ. ಆದರೆ ಈ ಶಿಕ್ಷಣ ನೀತಿಯಲ್ಲಿ ಹಲವಾರು ಲೋಪಗಳಿವೆ. ಕ್ರೆಡಿಟ್ ವಿಷಯದಲ್ಲಿ ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲದೆ, ಪ್ರಾಚಾರ್ಯರಲ್ಲಿಯೂ ಗೊಂದಲವಿದೆ. ಇದನ್ನು ನಿವಾರಿಸದೇ ಹೋದಲ್ಲಿ ಅವರ ಒಂದು ವರ್ಷದ ವಿದ್ಯಾಭ್ಯಾಸ ಹಾಗೂ ಮುಂದಿನ ವರ್ಷದ ಕಲಿಕೆಯಲ್ಲಿ ಹಿಂದುಳಿಯಬೇಕಾಗುತ್ತದೆ. ಆದ್ದರಿಂದ ಈ ವಿಷಯ ಕುರಿತು ಆಯ್ಕೆಯಾದ ಪ್ರತಿ ಕಾಲೇಜಿನಿಂದ ಮೂವರು ವಿದ್ಯಾರ್ಥಿಗಳು ಹಾಗೂ ಬೋಧಕರನ್ನು ಆಹ್ವಾನಿಸಿ ಅವರಿಗೆ ಮಾಹಿತಿ ನೀಡಲಾಗುವುದು. ಜೊತೆಗೆ ಚರ್ಚೆಯಾದ ಹಾಗೂ ಕಂಡು ಬಂದ ಲೋಪಗಳ ಬಗೆಗಿನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದರು.

ವೇದಿಕೆ ಅಧ್ಯಕ್ಷ ಪ್ರೊ.ಕೆ.ಎಸ್.ರಂಗಪ್ಪ, ಪ್ರೊ.ಶ್ರೀಕಂಠಸ್ವಾಮಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಅರಸು ಬೋರ್ಡಿಂಗ್ ಶಾಲಾ ಆವರಣದಲ್ಲಿ ಹುಂಡೈ ಮೆಗಾ ಎಕ್ಸ್‌ಚೇಂಜ್ ಮತ್ತು ಯೂಸ್ಡ್ ಕಾರ್ ಮೇಳವನ್ನು ಹುಂಡೈ ಕರ್ನಾಟಕದ ಮಾರ್ಕೆಟಿಂಗ್ ಮ್ಯಾನೇಜರ್ ಬೆನ್ನೆಟ್ ಗುರುವಾರ ಉದ್ಘಾಟಿಸಿದರು. ಈ ವೇಳೆ ಅದ್ವೈತ್ ಹುಂಡೈ ಸೇಲ್ಸ್ ಮುಖ್ಯಸ್ಥ ಕೆ.ಸಿ.ಪ್ರಮೋದ್, ಸ್ಟಾರ್ ಹುಂಡೈ ಸೇಲ್ಸ್ ಮುಖ್ಯಸ್ಥ ಎನ್.ವಿ.ನಾಗೇಶ್ ಇತರರು ಉಪಸ್ಥಿತರಿದ್ದಾರೆ. ಅ.15ರವರೆಗೆ ಈ ಮೇಳ ಏರ್ಪಡಿಸಿದ್ದು, ಇಲ್ಲಿ ಟೆಸ್ಟ್ ಡ್ರೈವ್ ಲಭ್ಯವಿದೆ. ಹಳೆಯ ಕಾರುಗಳ ವಿನಿಮಯದೊಂದಿಗೆ ಹೊಸ ಕಾರುಗಳ ಬುಕ್ಕಿಂಗ್ ಅವಕಾಶವಿದೆ. ಸಿಎನ್‌ಜಿ ಕಾರುಗಳು ಮತ್ತು 30+ ಕ್ವಾಲಿಟಿ ಯೂಸ್ಡ್ ಕಾರುಗಳನ್ನು ಪ್ರದರ್ಶಿಸಲಾಗಿದೆ.

ಪಡಿತರ ಅಂಗಡಿ ಅಕ್ರಮ ಬಯಲಿಗೆಳೆಯುವ ಕಾರ್ಯಕ್ರಮ

ಮೈಸೂರು, ಅ.13(ಆರ್‌ಕೆಬಿ)– ಪಡಿತರ ವ್ಯವಸ್ಥೆ ಅಕ್ರಮ ಕುರಿತಂತೆ ತಾವು ಕೈಗೊಂಡಿದ್ದ ಹೋರಾಟಕ್ಕೆ ಅಧಿಕಾರಿಗಳು ಸ್ಪಂದಿಸಲಿಲ್ಲ ಎಂಬ ಕಾರಣದಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡ ದಾವಣಗೆರೆ ಭಾಗದ ಸಾಲುಮರದ ವೀರಾಚಾರಿ ಅವರ ಸ್ಮರಣಾರ್ಥ ಅ.10ರಿಂದ ಕರ್ನಾಟಕ ರಾಷ್ಟ್ರ ನಿರ್ಮಾಣ ಸಮಿತಿ ಪಕ್ಷದ ವತಿಯಿಂದ ರಾಜ್ಯಾದ್ಯಂತ ಪಡಿತರ ಅಂಗಡಿ ಅಕ್ರಮ ಬಯಲಿಗೆಳೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಆದರ್ಶ ಅರಸ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಕ್ರಮ ಮತ್ತು ವಂಚನೆಗೆ ಕುಖ್ಯಾತಿ ಪಡೆದಿದ್ದ ನ್ಯಾಯಬೆಲೆ ಅಂಗಡಿ ವಿರುದ್ಧ ವೀರಾಚಾರಿ ನಿರಂತರ ಹೋರಾಟ ನಡೆಸಿದರು. ಇದರಿಂದಾಗಿ ಅಂಗಡಿಯ ಪರವಾನಗಿಯನ್ನು ರದ್ದುಪಡಿಸಲಾಗಿತ್ತು. ಆದರೆ ನಂತರದ ಬೆಳವಣಿಗೆಗಳಿಂದ ಬೇಸತ್ತ ವೀರಾಚಾರಿ ತಮ್ಮೂರಿನ ನಡುರಸ್ತೆಯಲ್ಲಿ ಮರವೊಂದಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಹೀಗಾಗಿ ಇವರ ನೆನಪಿನಲ್ಲಿ ತಮ್ಮ ಪಕ್ಷದ ಕಾರ್ಯಕರ್ತರು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ, ಅಲ್ಲಿ ಅಗತ್ಯ ಮಾಹಿತಿ ಫಲಕ ಹಾಕಲಾಗಿದೆಯೇ, ಬಯೋಮೆಟ್ರಿಕ್‌ಗೆ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿದ್ದಾರೆಯೇ, ತೂಕದಲ್ಲಿ ವಂಚನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ, ಒಂದು ವೇಳೆ ಲೋಪವಿದ್ದಲ್ಲಿ ಸಂಬಂಧಿತ ಅಧಿಕಾರಿಗಳಿಗೆ ಮಾಹಿತಿ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಪದಾಧಿಕಾರಿಗಳಾದ ವಿಜಯಕುಮಾರ್, ಆರ್.ನಾಗರಾಜು, ಮ.ಸ.ಪ್ರವೀಣ್ ಉಪಸ್ಥಿತರಿದ್ದರು.



ಮೈಸೂರು ವಿಜಯನಗರ 1ನೇ ಹಂತದ ವ್ಯಾಪ್ತಿಯಲ್ಲಿ ಮುಡಾದಿಂದ 2.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುರುವಾರ ಶಾಸಕ ಎಲ್.ನಾಗೇಂದ್ರ ಹಾಗೂ ವಾರ್ಡ್ ನಂ.20ರ ನಗರಪಾಲಿಕೆ ಸದಸ್ಯ ಸುಬ್ಬಯ್ಯ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಉಪಾಧ್ಯಕ್ಷರಾದ ಸತೀಶ್, ಜಯಣ್ಣ, ಪ್ರಧಾನ ಕಾರ್ಯದರ್ಶಿ ಪುನೀತ್ ಗೌಡ, ವಾರ್ಡ್ ಅಧ್ಯಕ್ಷ ವಸಂತ್ ಕುಮಾರ್, ಬಿ.ಎಲ್.ಎ –1 ದಿನೇಶ್‌ಗೌಡ, ಮುಖಂಡರಾದ ದಶರಥ, ಅವಿನಾಶ್, ಶಿವರಾಂ, ಅಭಿಷೇಕ್, ಮೂರ್ತಿ, ಕಾಳಿಂಗು, ಪ್ರಕಾಶ್, ಶಿವಕುಮಾರ್, ಅಶೋಕ, ಸುಬ್ರಮಣ್ಯ, ಶ್ರೀಮತಿ ಮಂಜುಳ, ಅನುಪಮ, ಶುಭಮಣಿ, ಕೃಷ್ಣವೇಣಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಕನ್ನಡ, ಹಿಂದಿ ಚಲನಚಿತ್ರ ಗೀತೆ ಗಾಯನ



ಮೈಸೂರು, ಅ.13(ಆರ್‌ಕೆಬಿ)– ಸ್ವರಧಾರ ಕಲಾಸಂಗಮ ಸಂಸ್ಥೆ ವತಿಯಿಂದ ಅ.15ರಂದು ಸಂಜೆ 5 ಗಂಟೆಗೆ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಹಳೆಯ ಸುಮಧುರ ಕನ್ನಡ ಮತ್ತು ಹಿಂದಿ ಚಲನ ಚಿತ್ರಗೀತೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಆಯೋಜಕಿ ಕವಿತಾ ಕಾಮತ್ ತಿಳಿಸಿದರು.


ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ 60, 70 ಹಾಗೂ 80ರ ದಶಕದ ಸುಮಾರು 30 ಸುಮಧುರ ಕನ್ನಡ ಹಾಗೂ ಹಿಂದಿ ಚಲನ ಚಿತ್ರಗೀತೆಗಳನ್ನು ಹಿರಿಯ ಹಾಗೂ ನುರಿತ ಗಾಯಕರು ಹಾಡಲಿದ್ದಾರೆ ಎಂದರು.

ಇತ್ತೀಚಿನ ದಿನಗಳಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸುವವರು ನೀವು ಸೆಲೆಬ್ರಿಟಿಯೇ, ಯಾವುದಾದರೂ ಶೋಗಳಲ್ಲಿ ಪಾಲ್ಗೊಂಡಿರುವಿರಾ ಎಂಬಿತ್ಯಾದಿ ಪ್ರಶ್ನೆ ಕೇಳಿ, ಒಂದೊಂದು ಹಾಡಿಗೂ ಇಂತಿಷ್ಟು ಎಂದು ಹಣ ಪಡೆದು ಹಾಡಿಸುತ್ತಿದ್ದಾರೆ. ಹೀಗಾಗಿ ಹಳೆಯ ಗಾಯಕರಿಗೆ ಅವಕಾಶ ದೊರೆಯುತ್ತಿಲ್ಲ. ಈ ಕಾರಣದಿಂದ ಇದಕ್ಕೆ ಹೊರತಾಗಿ ತಮ್ಮ ಕಾರ್ಯಕ್ರಮ ಆಯೋಜಿಸಲಾಗಿದ್ದು, ಉಚಿತ ಪ್ರವೇಶವಿದೆ ಎಂದರು. ಗೋಷ್ಠಿಯಲ್ಲಿ ನಿತ್ಯಾನಂದ ಕಾಮತ್, ಶ್ರೀಕಂಠರಾವ್, ಸದಾಶಿವ ಶೆಣೈ ಉಪಸ್ಥಿತರಿದ್ದರು.



ಕನ್ನಡ ಸಾಹಿತ್ಯ ಪರಿಷತ್‌ನ ಮೈಸೂರು ನಗರ ಅಧ್ಯಕ್ಷರಾಗಿ ನೇಮಕಗೊಂಡಿರುವ ಕೆ.ಎಸ್.ಶಿವರಾಮು ಅವರಿಗೆ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ನೇಮಕಾತಿ ಪತ್ರ ವಿತರಿಸಿದರು. ಈ ವೇಳೆ ಹಿರಿಯ ಸಾಹಿತಿ ಸಿಪಿಕೆ, ಪ್ರೊ.ವೆಂಕಟಾಚಲಶಾಸ್ತ್ರಿ, ಪರಿಷತ್‌ನ ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ಡಾ.ಸಿ.ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.10.2022 ಶುಕ್ರವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ : ರೋಹಿಣಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ಮಧುಮೇಹ ತೊಂದರೆ' ಇರುವ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆಯಿಂದಲೂ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಗೊಂಬೆಗಳ ಪ್ರದರ್ಶನ :** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ, ಎರಡನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ :** ಡ್ರಾಫ್ಟಿಂಗ್ ರಿಸರ್ಚ್ ರಿಪೋರ್ಟ್ಸ್ : ಅಪ್ಲಿಕೇಷನ್ ಆಫ್ ಟೂಲ್ಸ್ ಅಂಡ್ ಟೆಕ್ನಿಕ್ಸ್ ಕುರಿತು ಕಾರ್ಯಾಗಾರ, ಉಪಸ್ಥಿತರು : ಡಾ. ವಿ. ಮಂಜುನಾಥ್, ಪ್ರೊ. ಎನ್.ಎಸ್. ಹರಿನಾರಾಯಣ, ಪ್ರೊ. ಮಹೇಶ್, ಡಾ. ಸಿ.ಪಿ. ರಾಮಶೇಷ್, ಅಧ್ಯಕ್ಷತೆ : ಭೂ ವಿಜ್ಞಾನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಬಾಲಸುಬ್ರಮಣ್ಯಂ, ಸ್ಥಳ: ಮಾನಸ ಮೀಡಿಯಾ ಸಭಾಂಗಣ, ಬೆಳಿಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** 66ನೇ ಧಮ್ಮ ದೀಕ್ಷಾ ದಿನಾಚರಣೆ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ಪ್ರೊ. ಬಿ. ರಮೇಶ್ ಅವರಿಂದ 66ವರ್ಷಗಳ ಧಮ್ಮ ದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಬೈಲುಕುಪ್ಪೆ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯ ಅನುವಾದ ವಿಭಾಗದ ನಿರ್ದೇಶಕ ಬಿಕ್ಕು ಲೋಬ್‌ಸಂಗ್ ದೋರ್‌ಜಿ ಪಾಲ್‌ಜೋರ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜಾ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಭೀಮಾ ಜ್ಯುವೆಲ್ಸ್ :** ನವೀಕೃತ ಮಳಿಗೆಯ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಖ್ಯಾತ ಕನ್ನಡ ಚಲನಚಿತ್ರ ನಟಿ ರಚಿತಾರಾಮ್, ಮೇಯರ್ ಶಿವಕುಮಾರ್, ಸ್ಥಳ: ಬಿ.ಎನ್. ರಸ್ತೆ, ಮಧ್ಯಾಹ್ನ 12ಕ್ಕೆ.

■ **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ :** ನೃತ್ಯ ಸಪ್ತಾಹ, ಬೆಳ್ಳಿ ಹಬ್ಬದ ಸಂಭ್ರಮ–ಗುರುವಂದನಾ ಕಾರ್ಯಕ್ರಮ, ಕುಮಾರಿ ರಾಧಾ ಎಂ. ಅವರಿಂದ ಗುರುವಂದನಾ ಕಾರ್ಯಕ್ರಮ, ಅಧ್ಯಕ್ಷತೆ : ರಾಷ್ಟ್ರೋತ್ಥಾನ ಪರಿಷತ್ ಉಪಾಧ್ಯಕ್ಷ ಎ.ಆರ್. ದ್ವಾರಕನಾಥ್, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಸಮೂಹ ಸಂಸ್ಥೆಗಳ ನಿರ್ದೇಶಕ ಡಿ. ಶ್ರೀಹರಿ, ವೈದಿಕ ಜ್ಯೋತಿಷಿ ಡಾ. ವಿದ್ವಾನ್ ಶ್ರೀಹರ್ಷ ಸಿ.ಎಸ್., ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಮಾನದಂಡಗಳ ದಿನ ಆಚರಣೆ, ಭಾಷಣಕಾರರು : ನಿವೃತ್ತ ವಿಜ್ಞಾನಿ ಜಗನ್ನಾಥ ವೆಂಕಟರಾಮಯ್ಯ, ಬಿಇಎಂಎಲ್ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಎಸ್. ಸುಧಾಕರ್, ಅಧ್ಯಕ್ಷತೆ : ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ–ಪ್ರೊ.ಎನ್.ವೆಂಕೋಬರಾವ್, 6.40 ಅರಿವಿನ ಶಿಖರ, 7.15 ಪ್ರಾಯೋಜಿತ ಕಾರ್ಯಕ್ರಮ 'ಸರ್ವ ಶಿಕ್ಷಣ ಸಂಚಲನ', 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಡಾ.ಎನ್.ರಮಣಿ – ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ– ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ಸಖೀಪದ ಪ್ರಸ್ತುತಿ–ಕೆ.ಬಿ.ಮೀನಾ, ಕೈಗನ್ನಡಿ, ಪ್ರಸ್ತುತಿ–ನಿಶಿತಾ ಕೃಷ್ಣಮೂರ್ತಿ, 4.30 ವೃತ್ತಿ ಮಾರ್ಗದರ್ಶನ–ಹೋಟೆಲ್ ಮ್ಯಾನೇಜ್‌ಮೆಂಟ್ ಡಿಪ್ಲೊಮಾ, ಕ್ರಾಫ್ಟ್‌ಮೆನ್‌ಶಿಪ್ ಮತ್ತು ಕೌಶಲ್ಯ ತರಬೇತಿ ಅವಕಾಶಗಳು ಕುರಿತು ರಂಗಾರೆಡ್ಡಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಕೃಷಿಯಲ್ಲಿ ಕಂಡ ಯಶಸ್ಸು ಕುರಿತು ಇಂದ್ರಮ್ಮ ಅವರೊಡನೆ ಸಂದರ್ಶನ, 9.00 ಕನ್ನಡ ಭಾರತಿ, ಕಥಾ ವಿಹಾರ–ಭಾಸ್ಕರ ಕೊತ್ತತ್ತಿ ಅವರಿಂದ ಸಣ್ಣಕಥೆ ಮಹದೇವಪ್ಪನ ಮೌನದ ಮೆರವಣಿಗೆ, ಕಾವ್ಯಧಾರೆ–ಮಹದೇವ ಶಂಕನಪುರ ಅವರಿಂದ, 10.30 ಸವಿನೆನಪು



ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ ಡಾ.ವೀರೇಂದ್ರ ಹೆಗ್ಗಡೆ ಅವರು ಗುರುವಾರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರನ್ನು ಬೆಂಗಳೂರಿನ ಪದ್ಮನಾಭನಗರದ ಅವರ ನಿವಾಸದಲ್ಲಿ ಭೇಟಿಯಾಗಿ ಕುಶಲೋಪರಿ ನಡೆಸಿದರು. ಈ ಸಂದರ್ಭದಲ್ಲಿ ವೀರೇಂದ್ರ ಹೆಗ್ಗಡೆ ಅವರ ಸಹೋದರರಾದ ಸುರೇಂದ್ರಕುಮಾರ್ ಹೆಗ್ಗಡೆ ಉಪಸ್ಥಿತರಿದ್ದರು.

ಗೋಪಾಲಗೌಡ ನ್ಯೂರೋಜೋನ್‌ನಿಂದ ಉಚಿತ ಆರೋಗ್ಯ ತಪಾಸಣೆ: ಧನ್ಯಾ ಸುಶ್ರುತ



ಮೈಸೂರು,ಅ.13–ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ನ್ಯೂರೋಜೋನ್ ವತಿಯಿಂದ ನಗರದ ಕೇಂದ್ರ ಗ್ರಂಥಾಲಯದಲ್ಲಿ 280 ಜನರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು ಎಂದು ನ್ಯೂರೋಜೋನ್‌ನ ಆಡಳಿತಾಧಿಕಾರಿ ಧನ್ಯಾಸುಶ್ರುತ ತಿಳಿಸಿದ್ದಾರೆ.

ನಗರದ ಕೇಂದ್ರ ಗ್ರಂಥಾಲಯದ ಸಿಬ್ಬಂದಿ, ಅವರ ಕುಟುಂಬದವರು ಹಾಗೂ ಸಾರ್ವಜನಿಕರಿಗೆ ಏರ್ಪಡಿಸಿದ್ದ ಈ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ನ್ಯೂರೋಜೋನ್ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಪ್ರಖ್ಯಾತ ನರರೋಗ ತಜ್ಞ ಡಾ.ಹೆಚ್.ವಿ.ಸುಶ್ರುತ್ ಅವರ ಮಾರ್ಗದರ್ಶನದಂತೆ ಥಾರ್ ಯೋಜನೆಯಡಿಯಲ್ಲಿ ಇದುವರೆಗೆ ಮೈಸೂರು ಮತ್ತು ಕೊಡಗು ಜಿಲ್ಲೆಯ ಗ್ರಾಮೀಣ ಪ್ರದೇಶಗಳು ಸೇರಿದಂತೆ 14 ಕ್ಯಾಂಪ್‌ಗಳನ್ನು ನಡೆಸಿ 3780 ಜನರಿಗೆ ಉಚಿತ ಚಿಕಿತ್ಸೆ, ಸಲಹೆಗಳನ್ನು ನೀಡಿದ್ದೇವೆ. ಉಚಿತ ಸಮಾಲೋಚನಾ ತಂಡದಲ್ಲಿ ನುರಿತ ವೈದ್ಯರು, ಶಸ್ತ್ರ ಚಿಕಿತ್ಸಕರು, ಹೃದ್ರೋಗ ತಜ್ಞರು, ಸ್ತ್ರೀರೋಗ ತಜ್ಞರು, ಮೂತ್ರಪಿಂಡ ತಜ್ಞರು, ನೇತ್ರ ತಜ್ಞರು, ಮನೋವೈದ್ಯರು, ನರರೋಗ ತಜ್ಞರು, ಮಕ್ಕಳ ತಜ್ಞರು ಇರುತ್ತಾರೆ. ಎಲ್ಲಾ ಕಾಯಿಲೆಗಳಿಗೆ ಫೋನ್‌ನ ಮೂಲಕ ಉಚಿತ ಸಲಹೆ ಮತ್ತು ಚಿಕಿತ್ಸೆಯನ್ನು ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ನಗರ ಗ್ರಂಥಾಲಯ ಅಧಿಕಾರಿ ಮಂಜುನಾಥ್ ಉಪಸ್ಥಿತರಿದ್ದರು.

ಖಾಸಗಿ ಫೈನಾನ್ಸ್ ಎದುರು ರಾಜ್ಯ ರೈತ ಸಂಘ ಪ್ರತಿಭಟನೆ



ಮೈಸೂರು, ಅ.13(ಪಿಎಂ)–ಸಾಲಕ್ಕೆ ಸಂಬಂಧಿಸಿದಂತೆ ರೈತರೊಬ್ಬರ ಟಿಪ್ಪರ್ ವಶಕ್ಕೆ ಪಡೆದು, ಸಾಲ ವಜಾಗೊಂಡಿದೆ ಎಂದಿದ್ದ ಖಾಸಗಿ ಪೈನಾನ್ಸ್‌ನವರು ಇದೀಗ 6 ಲಕ್ಷ ರೂ. ಸಾಲ ಪಾವತಿಸಲು ಒತ್ತಡ ಹಾಕುತ್ತಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ದೊಡ್ಡ ಗಡಿಯಾರ ಸಮೀಪದ ಹಿಂದುಜಾ ಲೇಲ್ಯಾಂಡ್ ಫೈನಾನ್ಸ್ ಕಚೇರಿ ಇರುವ ಕಾಂಪ್ಲೆಕ್ಸ್ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಯಾವುದೇ ನೋಟಿಸ್ ನೀಡದೇ ಸದರಿ ಫೈನಾನ್ಸ್‌ನವರು ಲಾರಿಯನ್ನು ಕಾನೂನುಬಾಹಿರವಾಗಿ ಮಾರಾಟ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದ ಟಿ.ವಿ.ಅಶೋಕ್, ಸದರಿ ಫೈನಾನ್ಸ್ ಸಂಸ್ಥೆಯಲ್ಲಿ 2016ರಲ್ಲಿ ಸಾಲ ಪಡೆದು ಅಶೋಕ ಲೇಲ್ಯಾಂಡ್ ಟಿಪ್ಪರ್ (ಕೆಎ–11, ಬಿ–0557) ಖರೀದಿಸಿ ವರ್ಷ ಕಾಲ ಸಾಲ ಮರುಪಾವತಿ (ಇಎಂಐ) ಮಾಡಿದ್ದರು. ಈ ನಡುವೆ ವೈಯಕ್ತಿಕ ಕಾರಣಗಳಿಂದ ಟಿ.ವಿ.ಅಶೋಕ್, 2017ರ ಜ.5ರಂದು ಕ್ಯಾತಘಟ್ಟ ಗ್ರಾಮದ ಶರತ್ ಎಂಬುವವರಿಗೆ ಟಿಪ್ಪರ್ ಮಾರಾಟ ಮಾಡಬೇಕಾಯಿತು. ಆದರೆ ಫೈನಾನ್ಸ್‌ನವರು ಶರತ್ ಅವರಿಂದ ಕಾನೂನುಬಾಹಿರವಾಗಿ ಟಿಪ್ಪರ್ ವಶಕ್ಕೆ ಪಡೆದು, ಹರಾಜಿನಲ್ಲಿ ಮಾರಾಟ ಮಾಡಿದ್ದಾರೆ ಎಂದು ದೂರಿದರು.

ವಿವಿಧ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಅ.13–ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆ ವತಿಯಿಂದ 2022–23ನೇ ಸಾಲಿನಲ್ಲಿ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಒಳನಾಡು ಮೀನುಗಾರಿಕೆಗೆ ಸಂಬಂಧಿಸಿದಂತೆ ಹಲವಾರು ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಸಿಹಿನೀರಿನ ಬಯೋಫ್ಲಾಕ್ ಕೊಳಗಳ ನಿರ್ಮಾಣ (ಹೂಡಿಕೆ ವೆಚ್ಚ ಸೇರಿದಂತೆ) ಘಟಕ ಸ್ಥಾಪನೆಗೆ ಸಹಾಯಧನ, ಮೀನು ಸಾಕಾಣಿಕೆ ಕೊಳಗಳ ನಿರ್ಮಾಣಕ್ಕೆ ಸಹಾಯಧನ, ಸಿಹಿನೀರು ಮೀನು ಮತ್ತು ಸ್ಕ್ಯಾಂಪಿ ಸಾಕಾಣಿಕೆಗೆ ಹೂಡಿಕೆ ವೆಚ್ಚಕ್ಕೆ ಸಹಾಯಧನ, ಬೃಹತ್ ಆರ್.ಎ.ಎಸ್ /ಬಯೋಫ್ಲ್ಯಾಕ್ ಘಟಕ ಸ್ಥಾಪನೆಗೆ ಸಹಾಯಧನ, ಮಧ್ಯಮ ಆರ್.ಎ.ಎಸ್ /ಬಯೋಫ್ಲಾಕ್ ಘಟಕ ಸ್ಥಾಪನೆಗೆ ಸಹಾಯಧನ, ಸಣ್ಣ ಆರ್.ಎ.ಎಸ್ /ಬಯೋಫ್ಲಾಕ್ ಘಟಕ ಸ್ಥಾಪನೆಗೆ ಸಹಾಯಧನ, ಇನ್ಸುಲೇಟೆಡ್ ವಾಹನ ಖರೀದಿಗೆ ಸಹಾಯಧನ, ದ್ವಿಚಕ್ರ ವಾಹನ ಜೊತೆಗೆ ಐಸ್ ಬಾಕ್ಸ್ ಖರೀದಿಗೆ ಸಹಾಯಧನ, 3 ಚಕ್ರದ ಎಲೆಕ್ಟ್ರಿಕ್ ಮೀನು ಮಾರಾಟ ವಾಹನ ಖರೀದಿಗೆ ಸಹಾಯಧನ, ಜೀವಂತ ಮೀನು ಮಾರಾಟ ಕೇಂದ್ರದ ಸ್ಥಾಪನೆಗೆ ಸಹಾಯಧನಕ್ಕೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಆಯಾ ತಾಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಿ.

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ

ನಾಡಪ್ರಭು ಕೆಂಪೇಗೌಡರ 108 ಅಡಿ ಕಂಚಿನ ಪ್ರತಿಮೆ ಅನಾವರಣ ಐತಿಹಾಸಿಕವಾಗಿಸೋಣ

- ಆದಿಚುಂಚನಗಿರಿ ಮಠದಲ್ಲಿ ನಡೆದ ಮುಖಂಡರ ಸಭೆಯಲ್ಲಿ ಶಾಸಕ ಎಲ್.ನಾಗೇಂದ್ರ ಮನವಿ
- ನ.10ರಂದು ಪ್ರಧಾನಿ ಮೋದಿ ಅವರಿಂದ ನಾಡಪ್ರಭು ಪ್ರತಿಮೆ, ಥೀಮ್ ಪಾರ್ಕ್ ಉದ್ಘಾಟನೆ

ಮೈಸೂರು, ಅ.13(ಎಸ್‌ಬಿಡಿ)– ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಾಡಪ್ರಭು ಕೆಂಪೇಗೌಡರ 108 ಅಡಿ ಕಂಚಿನ ಪ್ರತಿಮೆ ಅನಾವರಣ ಹಾಗೂ ಥೀಮ್ ಪಾರ್ಕ್ ಉದ್ಘಾಟನಾ ಸಮಾರಂಭವನ್ನು ಐತಿಹಾಸಿಕಗೊಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಹಕರಿಸಬೇಕೆಂದು ಶಾಸಕ ಎಲ್.ನಾಗೇಂದ್ರ ಮನವಿ ಮಾಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಆವರಣದಲ್ಲಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನಿಧ್ಯದಲ್ಲಿ ಕೆಂಪೇಗೌಡರ ಪ್ರತಿಮೆ ಅನಾವರಣ ಸಂಬಂಧ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ 108 ಅಡಿ 'ಪ್ರಗತಿ ಪ್ರತಿಮೆ' ಹಾಗೂ ವಿಶಾಲವಾದ 'ಥೀಮ್ ಪಾರ್ಕ್' ನಿರ್ಮಿಸುತ್ತಿರುವುದು ಬಿಜೆಪಿ ಸರ್ಕಾರದ ಹೆಗ್ಗಳಿಕೆಯಾಗಿದೆ. ಭೈರವೈಕ್ಯ ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಆಶೀರ್ವಾದದ ಶಕ್ತಿಯಿಂದಲೇ ಇಂತಹ ಸತ್ಕಾರ್ಯಗಳಾಗುತ್ತಿವೆ. ನ.10ರಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಮೆ ಅನಾವರಣ ಮಾಡಲಿದ್ದು, ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ಎಲ್ಲರೂ ಭಾಗಿಯಾಗುವ ಮೂಲಕ ಆ ಕ್ಷಣವನ್ನು ಐತಿಹಾಸಿಕಗೊಳಿಸೋಣ ಎಂದರು.

ಮಾಜಿ ಶಾಸಕ ವಾಸು ಮಾತನಾಡಿ, ಕೆಂಪೇಗೌಡರ ಪ್ರತಿಮೆ ಅನಾವರಣ ಕಾರ್ಯಕ್ರಮ ಯಶಸ್ವಿಯಾದರೆ ನಾವೆಲ್ಲಾ ಗೆಲುವು ಸಾಧಿಸಿದಂತೆ. ಇದೊಂದು ಪಕ್ಷಾತೀತ ಸಮಾರಂಭವಾಗಿದ್ದು ನಾವೆಲ್ಲರೂ ಅತ್ಯುತ್ಸಾಹದಿಂದ ಭಾಗಿಯಾಗಿ, ಯಶಸ್ವಿಗೊಳಿಸೋಣ ಎಂದು ಕರೆ ನೀಡಿದರು.

ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ 'ನಾಡಪ್ರಭು ಕೆಂಪೇಗೌಡರ ಪ್ರತಿಮೆ ಹಾಗೂ ಅವರ ಸ್ಮರಣಾರ್ಥ ನಿರ್ಮಾಣವಾಗುತ್ತಿರುವ ಥೀಮ್ ಪಾರ್ಕ್ ಉದ್ಘಾಟನಾ ಸಮಾರಂಭದ ಗೆಲುವಿಗೆ ನಾವೆಲ್ಲರೂ ಸಂಕಲ್ಪ ಮಾಡೋಣ' ಎಂದರು.

ಒಕ್ಕಲಿಗ ಮುಖಂಡ ಬೀಡನಹಳ್ಳಿ ಸತೀಶ್‌ಗೌಡ ಮಾತನಾಡಿ, ಭಾರತದ ಬೃಹತ್ ಮಹಾನಗರಗಳ ಪೈಕಿ ಸ್ಥಳೀಯ ರಾಜರಿಂದ ನಿರ್ಮಿತವಾದ ಏಕ ಮಾತ್ರ ನಗರ ಬೆಂಗಳೂರು. ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ ಬೃಹತ್ ಪ್ರತಿಮೆ ನಿರ್ಮಿಸುವಂತೆ ವಿಧಾನಪರಿಷತ್ ಸದಸ್ಯ ಆ.ದೇವೇಗೌಡ ಅವರು 2019ರಲ್ಲಿ ಅಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿ, ಒತ್ತಾಯಿಸಿದ್ದರು. ಆದರೆ ರಾಜಕೀಯ ಬದಲಾವಣೆಯಿಂದ ಸರ್ಕಾರ ಪತನವಾಯಿತು. ನಂತರ ಮುಖ್ಯಮಂತ್ರಿಯಾದ ಬಿ.ಎಸ್.ಯಡಿಯೂರಪ್ಪನವರಿಗೂ ಮನವಿ ಸಲ್ಲಿಸಲಾಗಿತ್ತು. ಸಚಿವ ಡಾ.ಅಶ್ವಥ್ ನಾರಾಯಣ್ ಅವರು ಕೆಂಪೇಗೌಡ ಪ್ರತಿಮೆ ಜೊತೆಗೆ 'ಥೀಮ್ ಪಾರ್ಕ್' ಯೋಜನೆ ಜೋಡಿಸಿ ಸರ್ಕಾರದ ಅನುಮೋದನೆ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಈ ಸತ್ಕಾರ್ಯಕ್ಕೆ ಕಾರಣವಾಗಿರುವ ಎಲ್ಲರಿಗೂ ಅಭಿನಂದನೆಗಳು ಎಂದರು. ಸಭೆಯಲ್ಲಿ ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಉಪಾಧ್ಯಕ್ಷ ರವಿ ರಾಜಕೀಯ, ಮುಖಂಡ ಕವೀಶ್‌ಗೌಡ, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಮಹಾನಗರಪಾಲಿಕೆ ಸದಸ್ಯರಾದ ಪ್ರೇಮ ಶಂಕರೇಗೌಡ, ಅಶ್ವಿನಿ ಅನಂತು, ಪೈ.ಶ್ರೀನಿವಾಸ್, ಮಾಜಿ ಸದಸ್ಯ ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.



ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನ.10ರಂದು ಕೆಂಪೇಗೌಡರ ಬೃಹತ್ ಪ್ರತಿಮೆ ಅನಾವರಣ ಹಾಗೂ ಥೀಮ್ ಪಾರ್ಕ್ ಉದ್ಘಾಟನೆ ನೆರವೇರಲಿರುವ ಹಿನ್ನೆಲೆಯಲ್ಲಿ ಮೈಸೂರಿನ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಆವರಣದಲ್ಲಿ ಗುರುವಾರ ನಡೆದ ಸಭೆಯಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಮಾತನಾಡಿದರು.

ಅ.22ರಿಂದ ರಥಯಾತ್ರೆ

ಥೀಮ್ ಪಾರ್ಕ್ ನಿರ್ಮಾಣಕ್ಕೆ ಪ್ರತಿ ಹಳ್ಳಿಯಿಂದ ಮಣ್ಣು ಮತ್ತು ನೀರು ಸಂಗ್ರಹಿಸುವುದರ ಜೊತೆಗೆ ಕೆಂಪೇಗೌಡರ ಕಾರ್ಯಕ್ಷಮತೆ ಸಾರುವ ಉದ್ದೇಶದೊಂದಿಗೆ ಅ.22ರಿಂದ 10 ದಿನಗಳ ಕಾಲ ಮೈಸೂರು ಜಿಲ್ಲೆಯಲ್ಲಿ ರಥಯಾತ್ರೆ ನಡೆಯಲಿದೆ. ನ.10ರಂದು ನಡೆಯಲಿರುವ ಕೆಂಪೇಗೌಡರ ಪ್ರತಿಮೆ ಅನಾವರಣ ಹಾಗೂ ಥೀಮ್ ಪಾರ್ಕ್ ಉದ್ಘಾಟನೆ ಕಾರ್ಯಕ್ರಮ ಯಶಸ್ಸಿಗೆ ಪ್ರತಿಯೊಬ್ಬರೂ ಸಹಕರಿಸಬೇಕು.
–ಶ್ರೀ ಸೋಮೇಶ್ವರನಾಥ ಸ್ವಾಮೀಜಿ

ಅಪರಾಧ ಹಿನ್ನೆಲೆಯುಳ್ಳ ಯುವಕನ ಬರ್ಬರ ಹತ್ಯೆ

- ಮೈಸೂರು ಬೋಟಿ ಬಜಾರ್‌ನಲ್ಲಿ ಘಟನೆ
- ನಾಲ್ವರಿದ್ದ ತಂಡದಿಂದ ದುಷ್ಕೃತ್ಯ ಶಂಕೆ

ಮೈಸೂರು, ಅ.13(ಆರ್‌ಕೆ)– ಕಳವು ಹಾಗೂ ಸುಲಿಗೆ ಪ್ರಕರಣಗಳ ಆರೋಪಿಯೋರ್ವನನ್ನು ದುಷ್ಕರ್ಮಿಗಳ ತಂಡ ಚಾಕುವಿನಿಂದ ಇರಿದು ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಈ ಘಟನೆ ಮೈಸೂರಿನ ದೇವರಾಜ ಮಾರುಕಟ್ಟೆಯ ಬೋಟಿ ಬಜಾರ್‌ನಲ್ಲಿ ಬುಧವಾರ ರಾತ್ರಿ ನಡೆದಿದೆ.

ಕುಂಬಾರಕೊಪ್ಪಲು ನಿವಾಸಿ ಸುನೀಲ್ ಅಲಿಯಾಸ್ ದತ್ತು (25) ಹತ್ಯೆಗೀಡಾದವನಾಗಿದ್ದು, ಹತ್ಯೆಗೂ ಮುನ್ನ ಈತನಿಗೂ ನಾಲ್ಕೈದು ಯುವಕರಿದ್ದ ತಂಡಕ್ಕೂ ಹೋಟೆಲ್‌ವೊಂದರ ಮುಂದೆ ಘರ್ಷಣೆ ನಡೆದಿದ್ದು, ಆ ವೇಳೆ ಗಸ್ತಿನಲ್ಲಿದ್ದ ಪೊಲೀಸರು ಗುಂಪನ್ನು ಚದುರಿಸಿದ್ದರು ಎಂದು ಮೂಲಗಳು ತಿಳಿಸಿವೆ. ನಂತರ ಬೋಟಿ ಬಜಾರ್‌ನಲ್ಲಿ ನಾಲ್ಕೈದು ಮಂದಿಯಿದ್ದ ದುಷ್ಕರ್ಮಿಗಳ ತಂಡ ಈತನನ್ನು ಚಾಕುವಿನಿಂದ ಇರಿದು ಬರ್ಬರವಾಗಿ ಹತ್ಯೆ ಮಾಡಿದೆ. ತಪ್ಪಿಸಿಕೊಳ್ಳಲು ಯತ್ನಿಸಿದ ಸುನೀಲ್‌ನನ್ನು ದುಷ್ಕರ್ಮಿಗಳು ಅಟ್ಟಾಡಿಸಿಕೊಂಡು ಹೋಗಿ ಹತ್ಯೆ ಮಾಡಿದ್ದಾರೆ ಎಂಬುದಕ್ಕೆ ಘಟನೆ ನಡೆದ ರಸ್ತೆಯಲ್ಲಿ ಕುರುಹುಗಳು ಕಂಡು ಬಂದಿದೆ.

ದುಷ್ಕರ್ಮಿಗಳಲ್ಲಿ ಓರ್ವ ಚಾಕುವನ್ನು ರಸ್ತೆಯಲ್ಲೇ ಬಿಸಾಡಿ ಹೋಗಿದ್ದು, ರಕ್ತಸಿಕ್ತವಾಗಿದ್ದ ಚಾಕುವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ರಾತ್ರಿ ಸುಮಾರು 11.30ರಲ್ಲಿ ಹತ್ಯೆ ನಡೆದಿದ್ದು, ಘಟನೆ ನಡೆದ ಸ್ಥಳದಿಂದ ಅನತಿ ದೂರದಲ್ಲಿರುವ ದೇವರಾಜ ಠಾಣೆ ಪೊಲೀಸರಿಗೆ ವಿಷಯ ತಿಳಿದು ತಕ್ಷಣವೇ ಸ್ಥಳಕ್ಕೆ ಧಾವಿಸಿ, ರಕ್ತದ ಮಡುವಿನಲ್ಲಿ ಬಿದ್ದಿದ್ದ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ರವಾನಿಸಿದ್ದಾರೆ.

ಹತ್ಯೆಗೀಡಾದ ಸುನೀಲ್ ಹಲವಾರು ಕಳವು ಹಾಗೂ ಸುಲಿಗೆ ಪ್ರಕರಣಗಳ ಆರೋಪಿಯಾಗಿದ್ದು, ಈತನ ವಿರುದ್ಧ ಹೆಚ್ಚಿನ ಪ್ರಕರಣಗಳು ದೇವರಾಜ ಠಾಣೆಯಲ್ಲೇ ದಾಖಲಾಗಿವೆ ಎಂದು ಹೇಳಲಾಗಿದೆ. ಕೆ.ಆರ್.ಆಸ್ಪತ್ರೆಗೆ ಆಗಮಿಸುವ ರೋಗಿಗಳ ಸಂಬಂಧಿಕರನ್ನು ರಾತ್ರಿ ವೇಳೆ ಚಾಕು ತೋರಿಸಿ, ಬೆದರಿಸಿ ಸುಲಿಗೆ ಮಾಡುತ್ತಿದ್ದ ಪ್ರಕರಣಗಳು ಕೂಡ ಈತನ ಮೇಲಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿದ್ದ ಈತ ಇತ್ತೀಚೆಗಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದಾನೆ. ನಿನ್ನೆ ರಾತ್ರಿ ಹೋಟೆಲ್ ಮುಂಭಾಗ ಈತನ ಜೊತೆ ಘರ್ಷಣೆಗಿಳಿದಿದ್ದ ತಂಡದವರೇ ಹತ್ಯೆ ಮಾಡಿರ ಬಹುದು ಎಂದು ಪೊಲೀಸರು ಶಂಕಿಸಿದ್ದು, ಹೋಟೆಲ್‌ನ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿ ಆರೋಪಿಗಳ ಬಂಧನಕ್ಕಾಗಿ ಬಲೆ ಬೀಸಿದ್ದಾರೆ ಎಂದು ಹೇಳಲಾಗಿದೆ. ಈ ಮಧ್ಯೆ ಓರ್ವನನ್ನು ವಶಕ್ಕೆ ತೆಗೆದುಕೊಂಡಿರುವ ಪೊಲೀಸರು ಆತನನ್ನು ವಿಚಾರಣೆಗೊಳಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್‌ಎಸ್‌ಎಲ್‌ಸಿ–ಪಿಯುಸಿ ಮಂಡಳಿ ವಿಲೀನ; ಕೆಎಸ್‌ಇಎಬಿ ಎಂದು ಮರುನಾಮಕರಣ

ಒಂದೇ ಸೂರಿನಡಿ ಎರಡು ಪರೀಕ್ಷೆಗಳು

ಬೆಂಗಳೂರು: ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (KSEEB) ಅನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ (KSEAB) ಎಂದು ಮರುನಾಮಕರಣ ಮಾಡಲಾಗಿದೆ, ಹೀಗಾಗಿ ಇನ್ನು ಮುಂದೆ ಪಿಯು ಬೋರ್ಡ್ ಪರೀಕ್ಷೆಗಳು ಮತ್ತು ಎಸ್ ಎಸ್ ಎಲ್ ಸಿ ಬೋರ್ಡ್ ಪರೀಕ್ಷೆಗಳನ್ನು ಒಂದೇ ಅಧಿಕಾರದ ಅಡಿಯಲ್ಲಿ ಬರಲಿದೆ.

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ವಿಲೀನಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಂಕಿತ ಹಾಕಿದ್ದಾರೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ವಿಲೀನಕ್ಕೆ ಅವಕಾಶ ಕಲ್ಪಿಸುವ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ವಿಧೇಯಕ–2022 ವಿಧಾನಸಭೆಯಲ್ಲಿ ಅನುಮೋದನೆಗೊಂಡಿತ್ತು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ವಿಧೇಯಕ ಉದ್ದೇಶಗಳನ್ನು ವಿವರಿಸಿ ಅಂಗೀಕಾರ ಪಡೆದುಕೊಂಡಿದ್ದರು.



ಹೊಸ ಶಿಕ್ಷಣ ನೀತಿ (ಎನ್‌ಇಪಿ) ಅನ್ವಯ ಎರಡು ಪರೀಕ್ಷಾ ಮಂಡಳಿಯನ್ನು ವಿಲೀನಗೊಳಿಸಿ ಕರ್ನಾಟಕ ಶಾಲಾ ಪರೀಕ್ಷಾ ಮೌಲ್ಯನಿರ್ಣಯ ಮಂಡಳಿ ಎಂದು ನಾಮಕರಣ ಮಾಡಲಾಗಿದೆ. 2022–23ನೇ ಸಾಲಿನಿಂದಲೇ ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಪರೀಕ್ಷೆಗಳು ಒಂದೇ ಮಂಡಳಿಯಡಿ ನಡೆಯುತ್ತವೆ. ಐಎಎಸ್ ಶ್ರೇಣಿಯ ಅಧಿಕಾರಿಯನ್ನು ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪಿಯು ಇಲಾಖೆಯಿಂದ ಜಂಟಿ ನಿರ್ದೇಶಕ ಶ್ರೇಣಿಗಿಂತ ಕೆಳಗಿನವರಲ್ಲದ ತಲಾ ಒಬ್ಬರಂತೆ ನಿರ್ದೇಶಕರು ಮತ್ತು ಕಾರ್ಯದರ್ಶಿಗಳು ಇರಲಿದ್ದಾರೆ.

ಹೊಸ ಶಿಕ್ಷಣ ನೀತಿಯ ಅನ್ವಯ ಈ ವಿಧೇಯಕವನ್ನು ತರಲಾಗಿದೆ. ಪಿಯುಸಿ ನಿರ್ದೇಶಕರಿಗೆ ಪರೀಕ್ಷೆ ಕಡೆ ಗಮನಹರಿಸಿಕೊಂಡು ಆಡಳಿತ ಮತ್ತು ಶೈಕ್ಷಣಿಕ ಚಟುವಟಿಕೆಗಳ ಕಡೆಯೂ ನೋಡಬೇಕಿದೆ. ಇದರಿಂದ ಗುಣಮಟ್ಟದ ಶಿಕ್ಷಣ ನೀಡಲು ಕಷ್ಟಕರವಾಗಿದೆ. ಹೀಗಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿ ಮತ್ತು ಪದವಿ ಪೂರ್ವ ಶಿಕ್ಷಣ ಪರೀಕ್ಷಾ ಮಂಡಳಿಯನ್ನು ಒಗ್ಗೂಡಿಸಿ ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ ಎಂದು ಮಾಡಲಾಗಿದೆ. ಏತನ್ಮಧ್ಯೆ, ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ 5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗೆ ಮೌಲ್ಯಮಾಪನಗಳನ್ನು ಪರಿಚಯಿಸುವ ಸಾಧ್ಯತೆಯ ಬಗ್ಗೆ ಚರ್ಚಿಸಲು ಸಚಿವರು ಗುರುವಾರ ಸಭೆ ಕರೆಯಲಿದ್ದಾರೆ. 5+3+3+4 ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಸ್ತಾಪಿಸಲಾದ ಮಗುವಿನ ಪ್ರತಿಯೊಂದು ಶಿಕ್ಷಣದಲ್ಲಿ ಮೌಲ್ಯ ಮಾಪನದ ರೂಪವನ್ನು ಜಾರಿಗೊಳಿಸಲು ಇಲಾಖೆ ಬಯಸುತ್ತದೆ ಎಂದು ಮೂಲಗಳು ತಿಳಿಸಿವೆ.

ಬೈಕ್ ನಿಯಂತ್ರಣ ಕಳೆದುಕೊಂಡು ಕೆರೆಗೆ ಬಿದ್ದ ದಂಪತಿ: ಗರ್ಭಿಣಿ ನೀರುಪಾಲು, ಪತಿ ಪಾರು

ನಂಜನಗೂಡು ಬಳಿ ದುರಂತ

ಮಲ್ಲುಂಡಿ, ಅ.13– ದಂಪತಿ ತೆರಳುತ್ತಿದ್ದ ಬೈಕ್ ನಿಯಂತ್ರಣ ತಪ್ಪಿ ಕೆರೆಗೆ ಬಿದ್ದ ಪರಿಣಾಮ ಗರ್ಭಿಣಿ ಸಾವನ್ನಪ್ಪಿ, ಪತಿ ಪ್ರಾಣಾಪಾಯದಿಂದ ಪಾರಾದ ಘಟನೆ ನಂಜನಗೂಡು ತಾಲೂಕಿನ ಕೂಗಲೂರು ಬಳಿ ಸಂಭವಿಸಿದೆ.



ತಾಲೂಕಿನ ದೇವನೂರು ಗ್ರಾಮದ ನವೀನ ಅಲಿಯಾಸ್ ದಕ್ಷಿಣಮೂರ್ತಿ ಅವರ ಪತ್ನಿ ಯಮುನಾ (26) ದುರಂತದಲ್ಲಿ ಸಾವನ್ನಪ್ಪಿದವರು. ದಕ್ಷಿಣಮೂರ್ತಿಯನ್ನು ಸ್ಥಳೀಯ ಗ್ರಾಮಸ್ಥರು ರಕ್ಷಣೆ ಮಾಡಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿವರ: ಕಳೆದ ಎರಡು ವರ್ಷಗಳ ಹಿಂದೆ ತಾಲೂಕಿನ ಸಿದ್ದಯ್ಯನಹುಂಡಿ ಗ್ರಾಮದ ಚಂದ್ರಪ್ಪ ಎಂಬುವರ ಪುತ್ರಿ ಯಮುನಾಳನ್ನು ದೇವನೂರು ಗ್ರಾಮದ ದಕ್ಷಿಣಮೂರ್ತಿ ಅವರಿಗೆ ವಿವಾಹ ಮಾಡಿಕೊಡಲಾಗಿತ್ತು. ಯಮುನಾ 3 ತಿಂಗಳ ಗರ್ಭಿಣಿಯಾಗಿದ್ದರು. ದಂಪತಿ ನಗರದ ರಾಮಸ್ವಾಮಿ ಬಡಾವಣೆಯ ವಿಶ್ವಜ್ಯೋತಿ ಶಾಲೆಯ ಬಳಿ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದು, ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದರು.

ದಂಪತಿ, ಬುಧವಾರ ಸಂಜೆ ಹೊಸ ಟಿವಿ ಖರೀದಿಸಿ ತಮ್ಮ ಹೊಂಡಾ ಶೈನ್ ಬೈಕ್‌ನಲ್ಲಿ ಎಲಚಗೆರೆ–ಕಸುವಿನಹಳ್ಳಿ ಮಾರ್ಗವಾಗಿ ತಾಲೂಕಿನ ಸಿದ್ದಯ್ಯನಹುಂಡಿ ಗ್ರಾಮಕ್ಕೆ ತೆರಳುತ್ತಿದ್ದರು. ಹೊಸ ಟಿವಿಯನ್ನು ಬೈಕ್ ಮುಂದೆ ಇಟ್ಟುಕೊಂಡು ಚಾಲನೆ ಮಾಡುತ್ತಿದ್ದ ದಕ್ಷಿಣಮೂರ್ತಿ, ಕೂಗಲೂರು ಕೆರೆ ಏರಿ ತಿರುವಿನಲ್ಲಿ ಬೈಕ್ ನಿಯಂತ್ರಣ ತಪ್ಪಿದೆ. ಈ ವೇಳೆ ಮುಂದೆ ಟಿವಿ ಇದ್ದ ಕಾರಣ ನಿಯಂತ್ರಿಸಲು ಸಾಧ್ಯವಾಗದೇ ಬೈಕ್ ಸಮೇತ ದಂಪತಿ ಕೆರೆಗೆ ಉರುಳಿ ಬಿದ್ದಿದ್ದಾರೆ. ಯಮುನಾ ನೀರಿನಲ್ಲಿ ಮುಳುಗಿ ದ್ದಾರೆ. ದಕ್ಷಿಣ ಮೂರ್ತಿ ಸಹಾಯಕ್ಕಾಗಿ ಕೂಗುತ್ತಿದ್ದನ್ನು ಕೇಳಿಸಿಕೊಂಡ ಗ್ರಾಮಸ್ಥರು ಧಾವಿಸಿ ಬಂದು ರಕ್ಷಣೆ ಮಾಡಿದ್ದಾರೆ. ಹುಡುಕಿದರೂ ಯಮುನಾ ಸುಳಿವೇ ಸಿಕ್ಕಿರಲಿಲ್ಲ. ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಗುರುವಾರ ಬೆಳಗ್ಗೆ 10 ಗಂಟೆ ವೇಳೆಗೆ ಕೆರೆಯಿಂದ ಯಮುನಾ ಶವ ಹೊರ ತೆಗೆದಿದ್ದಾರೆ. ಈ ಸಂಬಂಧ ಯಮುನಾಳ ತಂದೆ ಚಂದ್ರಪ್ಪ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಯಾಸ್ಮೀನ್ ತಾಜ್ ಭೇಟಿ ನೀಡಿ ಪರಿಶೀಲಿಸಿದರು. ಶವದ ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಾಳೆ ವಿದ್ಯುತ್ ಅದಾಲತ್

ಮೈಸೂರು,ಅ.13–ಚೆಸ್ಕಾಂ ವತಿಯಿಂದ ವಿ.ವಿ ಮೊಹಲ್ಲಾ ವ್ಯಾಪ್ತಿಯ ಚಾ.ವಿ.ಸ.ನಿ.ನಿ ಉಪವಿಭಾಗಗಳಾದ ಉಪವಿಭಾಗಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಹೂಟಗಳ್ಳಿ ಉಪವಿಭಾಗದ ಚುಂಚರಾಯನಹುಂಡಿ ಗ್ರಾಮ, ರಾಮಕೃಷ್ಣನಗರದ ಮೂಗನಹುಂಡಿ, ಚಿಕ್ಕಹುಯಿಲಾಳು, ವಿ.ವಿ. ಮೊಹಲ್ಲಾದ ವಿ.ವಿ.ಮೊಹಲ್ಲಾ ಉಪವಿಭಾಗ ಕಚೇರಿ, ಕುವೆಂಪುನಗರದ ಕುವೆಂಪುನಗರ ಉಪವಿಭಾಗ ಕಚೇರಿಗಳಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆ ಹಾಗೂ ಗ್ರಾಹಕರಿಗೆ ವಿದ್ಯುತ್ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಅ.15ರ ಬೆಳಿಗ್ಗೆ 11 ಗಂಟೆಗೆ 'ವಿದ್ಯುತ್ ಅದಾಲತ್' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆಯಾ ಉಪವಿಭಾಗ ಕಚೇರಿ ಯಲ್ಲಿ ಅಥವಾ ಗ್ರಾಮಗಳಲ್ಲಿ ನಡೆಯುವ ವಿದ್ಯುತ್ ಅದಾಲತ್ ಸಭೆಗೆ ಭಾಗವಹಿಸಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ, ಲಿಖಿತ ಅರ್ಜಿಗಳನ್ನು ಸಲ್ಲಿಸಿ ವಿದ್ಯುತ್ ಸಮಸ್ಯೆ ಹಾಗೂ ವಿದ್ಯುತ್ ಸುರಕ್ಷತಾ ಜಾಗೃತಿಯ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಬಗೆಹರಿಸಿಕೊಳ್ಳಬಹುದು ಎಂದು ವಿ.ವಿ ಮೊಹಲ್ಲಾದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತಾಪಿ ವರ್ಗದಲ್ಲಿ ಆತಂಕ ಮೂಡಿಸಿರುವ ಜಾನುವಾರುಗಳ ಚರ್ಮಗಂಟು ರೋಗ

- ಈಗಾಗಲೇ ಮೈಸೂರು ಜಿಲ್ಲೆಯಲ್ಲಿ 87 ಪ್ರಕರಣ ಪತ್ತೆ
- ವ್ಯಾಪಕ ಮುನ್ನೆಚ್ಚರಿಕೆಗೆ ಪಶು ವೈದ್ಯಕೀಯ ಇಲಾಖೆ ಸೂಚನೆ

ಮೈಸೂರು, ಅ.13(ಎಸ್‌ಬಿಡಿ)– ಜಾನುವಾರುಗಳಲ್ಲಿ ಚರ್ಮಗಂಟು ರೋಗ ಎಲ್ಲೆಡೆ ಉಲ್ಬಣಿಸಿದ್ದು, ಮೈಸೂರು ಜಿಲ್ಲೆಯಲ್ಲಿ ಈವರೆಗೆ 87 ಪ್ರಕರಣ ಪತ್ತೆಯಾಗಿವೆ.

ಮೈಸೂರು ತಾಲೂಕಿನ ಕೆಲ ಭಾಗ, ಕೆ.ಆರ್.ನಗರ, ಸರಗೂರು ಹಾಗೂ ತಿ.ನರಸೀಪುರ ತಾಲೂಕುಗಳಲ್ಲಿ ಚರ್ಮಗಂಟು ರೋಗ ಪತ್ತೆಯಾಗಿದ್ದು, ಉಳಿದ ತಾಲೂಕುಗಳಲ್ಲಿ ಈವರೆಗೆ ವರದಿಯಾಗಿಲ್ಲ. ಈ ರೋಗದಿಂದ ಕೆ.ಆರ್.ನಗರ ತಾಲೂಕಿನಲ್ಲಿ ಒಂದು ಹಸು ಸಾವನ್ನಪ್ಪಿದೆ. ರೋಗದ ತೀವ್ರತೆ ಹೆಚ್ಚಿರುವ ಭಾಗದಲ್ಲಿ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಜಾನುವಾರುಗಳಿಗೆ ಲಸಿಕೆ ನೀಡಲಾಗುತ್ತಿದ್ದು, ಸದ್ಯ ಜಿಲ್ಲೆಯಲ್ಲಿ ರೋಗ ನಿಯಂತ್ರಣದಲ್ಲಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ.ಷಡಕ್ಷರಿ ಮೂರ್ತಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಲಸಿಕೆ–ಚಿಕಿತ್ಸೆ: ಚರ್ಮಗಂಟು ರೋಗದಿಂದ ಉತ್ತರ ಭಾರತದಲ್ಲಿ ಲಕ್ಷಾಂತರ ಜಾನುವಾರುಗಳು ಸಾವನ್ನಪ್ಪಿವೆ. ಆದರೆ ಮುಂಜಾಗ್ರತಾ ಕ್ರಮ, ಚಿಕಿತ್ಸೆ ಹಾಗೂ ಆರೈಕೆಯಿಂದ ಜಾನುವಾರುಗಳ ಜೀವರಕ್ಷಣೆ ಮಾಡಬಹುದು. ಈ ಹಿನ್ನೆಲೆಯಲ್ಲಿ ಚರ್ಮಗಂಟು ರೋಗಕ್ಕೆ ತುತ್ತಾಗುವುದನ್ನು ತಪ್ಪಿಸುವ ಉದ್ದೇಶದಿಂದ ಜಾನುವಾರುಗಳಿಗೆ ಲಸಿಕೆ ನೀಡಲಾಗುವುದು. ಈಗಾಗಲೇ ನಮ್ಮ ತಂಡ ಕೆ.ಆರ್.ನಗರ ತಾಲೂಕಿನಲ್ಲಿ ಲಸಿಕೆ ಕಾರ್ಯ ನಡೆಸುತ್ತಿದ್ದು, ಆದ್ಯತೆ ಮೇರೆಗೆ ಮುಂದುವರೆಸಲಾಗುತ್ತದೆ. ಪ್ರಕರಣ ಕಾಣಿಸಿಕೊಂಡ ಸುತ್ತಲಿನ 5 ಕಿ.ಮೀ. ಪ್ರದೇಶದ ಎಲ್ಲಾ ಜಾನುವಾರುಗಳಿಗೆ ಲಸಿಕೆ ನೀಡಲಾಗುತ್ತಿದೆ. ರೋಗಕ್ಕೆ ತುತ್ತಾದ ಜಾನುವಾರುವಿಗೆ ಸೂಕ್ತ ಚಿಕಿತ್ಸೆಯನ್ನು ಇಲಾಖೆಯಿಂದಲೇ ನೀಡಲಾಗುತ್ತದೆ ಎಂದು ಡಾ.ಷಡಕ್ಷರಿ ಮೂರ್ತಿ ಹೇಳಿದ್ದಾರೆ.



ಪಾಲಕರ ಜವಾಬ್ದಾರಿ: ಚರ್ಮಗಂಟು ರೋಗ ನಿಯಂತ್ರಿಸುವಲ್ಲಿ ಇಲಾಖೆ ಜೊತೆಗೆ ಜಾನುವಾರು ಪಾಲಕರ ಸಹಕಾರವೂ ಬಹಳ ಮುಖ್ಯವಾಗಿದೆ. ಲಸಿಕೆ ಹಾಕಲು ಬಂದಾಗ ತಮ್ಮ ಜಾನುವಾರುಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು. ಚರ್ಮಗಂಟು ರೋಗಕ್ಕೆ ತುತ್ತಾದ ಜಾನುವಾರುವನ್ನು ಪ್ರತ್ಯೇಕವಾಗಿಟ್ಟು ಜೋಪಾನ ಮಾಡಬೇಕು. ಆ ಜಾನುವಾರು ಬಳಸಿದ ಬಕೆಟ್, ನೀರು, ಹುಲ್ಲನ್ನು ಬೇರೆ ಜಾನುವಾರುಗಳಿಗೆ ನೀಡಬಾರದು. ಹೊರಗಡೆ ಮೇಯಲು ಬಿಡದೆ ಮನೆಯಲ್ಲೇ ಆರೈಕೆ ಮಾಡಬೇಕು. ಕಾಲುವೆ, ಕೆರೆ–ಕಟ್ಟೆಯಲ್ಲಿ ಅವುಗಳಿಗೆ ನೀರು ಕುಡಿಸಿದರೆ ಇತರೆ ಜಾನುವಾರುಗಳಿಗೆ ವ್ಯಾಪಕವಾಗಿ ರೋಗ ಹರಡುತ್ತದೆ. ನಿತ್ಯ ಚಿಕಿತ್ಸೆ ನೀಡಿದರೆ 8–10 ದಿನಗಳಲ್ಲಿ ಗುಣಮುಖವಾಗುತ್ತದೆ. ಅವರೆಗೆ ಜಾನುವಾರು ಪಾಲಕರು ಎಚ್ಚರ ವಹಿಸಬೇಕು. ಶುಂಠಿ, ಬೆಲ್ಲ, ಬೆಳ್ಳುಳ್ಳಿ, ಜೀರಿಗೆ, ಕರಿಮೆಣಸು ಕುದಿಸಿ ಕಷಾಯ ಮಾಡಿ ಜಾನುವಾರುವಿಗೆ ಕುಡಿಸಬಹುದು. ಇಲಾಖೆಯಿಂದ ಚಿಕಿತ್ಸೆ ಲಭ್ಯವಿದ್ದು ಜೊತೆಗೆ ರೈತರು ಸೂಕ್ತ ರೀತಿಯಲ್ಲಿ ಆರೈಕೆ, ಪೋಷಣೆ ಮಾಡಿದರೆ ಜಾನುವಾರುಗಳು ಬೇಗ ಗುಣಮುಖವಾಗುತ್ತವೆ.

ಖರೀದಿ–ಮಾರಾಟಕ್ಕೆ ಬ್ರೇಕ್: ಜಾನುವಾರು ಖರೀದಿಸಿ ಅವುಗಳನ್ನು ಲಾಭಕ್ಕೆ ಮಾರಾಟ ಮಾಡುವವರು ಸಾಕಷ್ಟು ಮಂದಿ ಇದ್ದಾರೆ. ಆದರೆ ರೋಗ ನಿಯಂತ್ರಣಕ್ಕೆ ಬರುವವರೆಗೆ ಈ ಪ್ರವೃತ್ತಿಗೆ ವಿರಾಮ ನೀಡಬೇಕು. ಚರ್ಮಗಂಟು ರೋಗ ಇರುವ ಜಾನುವಾರುವಿನ ಖರೀದಿ ಹಾಗೂ ಮಾರಾಟದಿಂದ ರೋಗ ವ್ಯಾಪಿಸುತ್ತದೆ. ಹಾಗೆಯೇ ಜಾನುವಾರು ಜಾತ್ರೆ ಹಾಗೂ ಸಂತೆಯನ್ನು ಸ್ಥಗಿತಗೊಳಿಸಬೇಕು.

ಮನುಷ್ಯರಿಗೆ ಹಬ್ಬುವುದಿಲ್ಲ: ಕ್ಯಾಪ್ರಿಪಾಕ್ಸ್ ಎಂಬ ವೈರಾಣುವಿನ ಮೂಲಕ ಒಂದು ಜಾನುವಾರುವಿನಿಂದ ಮತ್ತೊಂದಕ್ಕೆ ಚರ್ಮಗಂಟು ರೋಗ ಹರಡುತ್ತದೆ. ಇದು ಜಾನುವಾರುಗಳಲ್ಲಿ ಮಾತ್ರ ಕಂಡುಬರುವ ಸೋಂಕಾಗಿದ್ದು, ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ರೋಗ (ಝೂನೊಟಿಕ್)ವಲ್ಲ. ಆದರೆ ವಲ್ಗ್ಯಾರಿಸ್ ಮತ್ತು ಸರ್ಪಸುತ್ತು ಸೋಂಕು ತಗುಲಿದ್ದ ವ್ಯಕ್ತಿಯೊಬ್ಬರ ಫೋಟೋ ಬಳಸಿಕೊಂಡು ಜಾನುವಾರುಗಳ ಚರ್ಮಗಂಟು ರೋಗ ಮನುಷ್ಯರಿಗೆ ಹರಡಿದೆ ಎಂದು ವದಂತಿ ಹಬ್ಬಿಸಲಾಗಿದೆ. ಆದರೆ ಈವರೆಗೂ ರೋಗಪೀಡಿತ ಜಾನುವಾರುವಿನಿಂದ ಮನುಷ್ಯರಿಗೆ ಸೋಂಕು ಹರಡಿರುವ ಯಾವ ನಿದರ್ಶನವೂ ಇಲ್ಲ.

ಕುದಿಸಿದ ಹಾಲು ಬಳಸಬಹುದು: ಚರ್ಮಗಂಟು ರೋಗ ಪೀಡಿತ ಹಸುವಿನ ಹಾಲನ್ನು ಚೆನ್ನಾಗಿ ಕುದಿಸಿ ಬಳಸಬಹುದು. ಡೇರಿಗಳಲ್ಲಿ ಹಾಲನ್ನು ಪಾಶ್ಚೀಕರಿಸುವುದರಿಂದ ಅಲ್ಲಿಂದ ಪಡೆಯುವ ಹಾಲನ್ನೂ ಬಳಸಬಹುದು. ಗ್ರಾಮೀಣ ಪ್ರದೇಶದಲ್ಲಿ ಜಾನುವಾರು ಇಲ್ಲದವರು ಅಲ್ಲಿನ ಡೇರಿಯಲ್ಲಿ ಹಾಲು ಖರೀಸುತ್ತಾರೆ. ಅಂತಹವರು ಆತಂಕಪಡುವ ಅಗತ್ಯವಿಲ್ಲ. ಹಾಲನ್ನು ಚೆನ್ನಾಗಿ ಕುದಿಸಿ ಬಳಿಸಿದರೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಡಾ.ಷಡಕ್ಷರಿ ಮೂರ್ತಿ ಸ್ಪಷ್ಟಪಡಿಸಿದ್ದಾರೆ.

ಜಿಲ್ಲೆಯಲ್ಲಿ ಎರಡು ತಿಂಗಳು ಜಾನುವಾರು ಸಾಗಣೆ, ಸಂತೆ ನಿಷೇಧ

ಮೈಸೂರು ಜಿಲ್ಲೆಯ ತಿ.ನರಸೀಪುರ, ಸರಗೂರು ಮತ್ತು ಕೆ.ಆರ್.ನಗರ ತಾಲೂಕುಗಳಲ್ಲಿ ಜಾನುವಾರು ಗಳಲ್ಲಿ ಚರ್ಮಗಂಟು ರೋಗ(Lumpy skin disease) ಕಾಣಿಸಿಕೊಂಡಿದ್ದು, ಅದು ವ್ಯಾಪಕವಾಗಿ ಹರ ಡುವ ಸಾಧ್ಯತೆ ಇರುತ್ತದೆ. ರೋಗ ಹರಡುವಿಕೆ ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಲಸಿಕೆ ಹಾಕುವ ಕಾರ್ಯ ಪ್ರಗತಿಯಲ್ಲಿದೆ. ಸದರಿ ರೋಗ ಹರಡುವುದನ್ನು ತಡೆಗಟ್ಟಲು ಜಿಲ್ಲೆಯಾದ್ಯಂತ ಜಾನುವಾರು ಸಂತೆ ಮತ್ತು ಸಾಗಾಣಿಕೆಗೆ ಸಂಪೂರ್ಣವಾಗಿ ನಿಷೇಧ ಹೇರುವುದು ಅತ್ಯವಶ್ಯವಾಗಿದ್ದು, ಈ ಸಂಬಂಧ ಆದೇಶ ನೀಡುವಂತೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರು ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ ಜಾನುವಾರುಗಳ ಸಂತೆ ಹಾಗೂ ಸಾಗಾಣಿಕೆಯನ್ನು ತಾತ್ಕಾಲಿಕವಾಗಿ ಅ.11ರಿಂದ ಡಿ.10ರವರೆಗೆ ನಿಷೇಧಿಸಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಆದೇಶಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ತಂದೆ : ಅದೇನೋ ನೋಡ್ತಿರೋದು?
ಮಗ : ಫೇಸ್‌ಬುಕ್ ನೋಡ್ತಾ ಇದ್ದೀನಿ
ತಂದೆ : ನೀನು ಹೀಗೆ ದಿನವಿಡೀ ಫೇಸ್‌ಬುಕ್‌ನಲ್ಲೇ ಇದ್ರೆ ನಾಡಿದ್ದು, ನಿನ್ನ ಪಾಸ್‌ಬುಕ್‌ನಲ್ಲಿ ಏನೂ ಇರೋದಿಲ್ಲ ತಿಳ್ಕೋ!

ಮೈಸೂರು ಮಿತ್ರ

ಶುಕ್ರವಾರ, 14 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜಗತ್ತಿನಲ್ಲಿ ಮಹಾತ್ಕಾರ್ಯಗಳಾಗಬೇಕಾದರೆ ಸ್ಫೂರ್ತಿಯೇ ಒಂದು ಸಾಧನ – ರ‍್ಯಾಂಡಿಪಾಶ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಿಸಾಕಿದ್ದ ಹಳೇ ಕಂಬಳಿ ಚಳಿಗಾಲಕ್ಕೆ ಬೇಕಾಯ್ತು

ನಿಮ್ಮ ಪತ್ರಗಳು

ಡಾಂಬರೀಕರಣಕ್ಕೆ ಕಾದಿರುವ ಎನ್.ಆರ್. ಮೊಹಲ್ಲಾ ಬಜಾರ್ ರಸ್ತೆ



ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆ ವಾರ್ಡ್ ನಂ. 29ರ ಎನ್.ಆರ್. ಮೊಹಲ್ಲಾದ ಬಜಾರ್ ಸ್ಟ್ರೀಟ್ ಮಾರುತಿ ಸರ್ಕಲ್‌ವರೆಗೂ ಹಾಗೂ ಇದೇ ವೃತ್ತದಿಂದ ಸೇಂಟ್ ಮೇರಿಸ್ ಸ್ಕೂಲ್‌ವರೆಗಿನ ರಸ್ತೆ ತುಂಬಾ ಹದಗೆಟ್ಟಿದ್ದು ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತುಂಬಾ ಕಿರಿಕಿರಿಯುಂಟಾಗಿದೆ. ಈ ಸದರಿ ಮುಖ್ಯ ರಸ್ತೆ ಗಾಂಧಿನಗರಕ್ಕೆ ಸನಿಹದಲ್ಲಿ ಇದೆ. ಉದಯಗಿರಿ, ರಾಜೀವ್‌ನಗರ, ಆರ್.ಎಸ್. ನಾಯ್ಡುನಗರ ಹಾಗೂ ಕೆಸರೆಗೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದೆ. ಈ ಪ್ರದೇಶ ಪ್ರಮುಖ ವಾಣಿಜ್ಯ ಕೇಂದ್ರ ಸ್ಥಾನವಾಗಿದೆ. ಹಾಗೂ ಅತ್ಯಂತ ಜನನಿಬಿಡ ಪ್ರದೇಶವಾಗಿದೆ. ಕೆಲ ತಿಂಗಳ ಹಿಂದೆ ಈ ರಸ್ತೆಯ ಎರಡು ಬದಿಯಲ್ಲಿ ಬಾಕ್ಸ್ ಚರಂಡಿ ನಿರ್ಮಿಸಿ ಫುಟ್‌ಪಾತ್‌ಗೆ ಸಿಮೆಂಟ್ ಬ್ರಿಕ್ ಅಳವಡಿಸಲಾಗಿದೆ. ಬಹುತೇಕ ಕಾಮಗಾರಿ ಪೂರ್ಣಗೊಂಡಿದ್ದರೂ ರಸ್ತೆಗೆ ಮಾತ್ರ ಡಾಂಬರೀಕರಣ ಮಾಡದೆ ನಿರ್ಲಕ್ಷಿಸಿ ವಿಳಂಬ ಮಾಡುತ್ತಿದೆ. ಕೂಡಲೇ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳು ಈ ರಸ್ತೆಗೆ ಡಾಂಬರೀಕರಣ ಮಾಡಿ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಎಸ್. ರಾಜಗೋಪಾಲ್, ಗಾಂಧಿನಗರ, ಮೈಸೂರು.

ಚೆಕ್ ಬೌನ್ಸ್‌ಗೆ ಕಠಿಣ ನಿಯಮ ಜಾರಿಯಾಗಲಿ!

ಮಾನ್ಯರೆ,

ಚೆಕ್ ಬೌನ್ಸ್ ನಿಗ್ರಹಕ್ಕೆ ಕೇಂದ್ರ ಹಣಕಾಸು ಸಚಿವಾಲಯ ಪರಿಶೀಲನೆ ನಡೆಸುತ್ತಿರುವುದು ಸ್ವಾಗತಾರ್ಹವಾಗಿದೆ. ಇದರಿಂದ ಚೆಕ್ ಕೊಟ್ಟು ಮೋಸ ಮಾಡಿ ವಿನಃಕಾರಣ ಕೋರ್ಟು ಕಛೇರಿ ಅಂತ ಅಲೆಸುವವರಿಗೆ ಕಠಿಣ ಸಂದೇಶ ನೀಡಿದಂತಾಗುತ್ತದೆ.

ವ್ಯಕ್ತಿ ಒಬ್ಬರು ನೀಡಿದ ಚೆಕ್, ಒಂದು ವೇಳೆ ಬೌನ್ಸ್ ಆದರೆ ಆತನ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವ ಮೊದಲು ಆತನ ಬೇರೆ ಬ್ಯಾಂಕ್ ಖಾತೆಗಳಿಂದ ಹಣ ಕಡಿತ ಮಾಡಿ, ಅದನ್ನು ಚೆಕ್ ಮೊತ್ತಕ್ಕೆ ಸರಿ ಹೊಂದಿಸಲು ಯತ್ನಿಸುವ ಸಲಹೆ ಕೂಡ ಉತ್ತಮವಾಗಿದೆ. ದೇಶದಾದ್ಯಂತ ಈ ರೀತಿ ಇರುವ ಸುಮಾರು 35 ಲಕ್ಷಕ್ಕೂ ಹೆಚ್ಚು ಚೆಕ್ ಬೌನ್ಸ್ ಪ್ರಕರಣಗಳಿಂದ ನ್ಯಾಯಾಂಗ ವ್ಯವಸ್ಥೆಗೆ ಹೊರೆಯಾಗಿ ಪರಿಣಮಿಸಿರುವ ಪ್ರಕರಣಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಹಣಕಾಸು ಸಚಿವಾಲಯದ ಈ ಕ್ರಮ ಬಹಳ ಸೂಕ್ತವಾದುದು. ಖಾತೆಯಲ್ಲಿ ಹಣವಿಲ್ಲದಿದ್ದರೂ ಚೆಕ್ ಕೊಟ್ಟು ಮೋಸ ಮಾಡುವವರಿಗೆ ಕಠಿಣ ನಿರ್ಬಂಧನೆಗಳನ್ನು ಹೇರಿ ಅವರ ಹಣಕಾಸು ವ್ಯವಹಾರಗಳನ್ನು ನಿರ್ಬಂಧಿಸುವುದು ಅವಶ್ಯಕವಾಗಿದೆ. ಇದರಿಂದ ಚೆಕ್ ಬೌನ್ಸ್ ಪ್ರಕರಣಗಳು ದೊಡ್ಡ ಸಂಖ್ಯೆಯಲ್ಲಿ ನ್ಯಾಯಾಲಯದ ಮೆಟ್ಟಿಲೇರುವುದನ್ನು ತಡೆಯುವುದರ ಜೊತೆಗೆ, ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡದಂತೆ ತಪ್ಪಿಸಬಹುದಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಸರಕಾರದ ಅಸಡ್ಡೆತನ ತರವಲ್ಲ


ಮಾನ್ಯರೆ,

ಕನ್ನಡ ಪುಸ್ತಕ ಪ್ರಾಧಿಕಾರ ಯುವ ಬರಹಗಾರರ ಚೊಚ್ಚಲ ಕೃತಿಗಳನ್ನು ಪ್ರಕಟಿಸಲು ಪ್ರೋತ್ಸಾಹ ಧನ ನೀಡುವ ಸಲುವಾಗಿ 2021ರಲ್ಲೇ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ನೂರಾರು ಅರ್ಜಿದಾರರು ಕತೆ, ಕಾದಂಬರಿ, ಕವನ ನಾಟಕ, ವಿಮರ್ಶಾ ಲೇಖನ ಮತ್ತು ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದ ಹಸ್ತ ಪ್ರತಿ ಆಡಳಿತ ಅಧಿಕಾರಿಗಳು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಸಲ್ಲಿಸಿದ್ದರೂ ಇಲ್ಲಿಯವರೆಗೆ ಕನ್ನಡ ಪುಸ್ತಕ ಪ್ರಾಧಿಕಾರ ಪ್ರೋತ್ಸಾಹ ಧನ ನೀಡುವ ಬಗ್ಗೆ ಒಂದು ವರ್ಷ ಕಳೆದರೂ ಚಕಾರ ಎತ್ತುತ್ತಿಲ್ಲ. ಇದರ ಬಗ್ಗೆ ವಿಚಾರಿಸಿದಾಗ ಸಂಬಂಧಿಸಿದವರು ನೇಮಕಗೊಂಡಿಲ್ಲ ಎಂಬ ಕುಂಟು ನೆಪದ ಹೇಳಿಕೆ ಸಾಮಾನ್ಯವಾಗಿದೆ. ಸರಕಾರದ ಸಂಭಂದಪಟ್ಟ ಇಲಾಖೆಯ ಈ ಅಸಡ್ಡೆತನ ತರವಲ್ಲ. ಸರಕಾರ ಆದಷ್ಟು ಬೇಗ ಇದರ ಬಗ್ಗೆ ಗಮನ ಹರಿಸಿ ಯುವ ಬರಹಗಾರರಿಗೆ ಪ್ರೋತ್ಸಾಹಿಸಿ ಕನ್ನಡ ಬಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸಲು ನೆರವಾಗಲಿ.

–ವಿಜಯಕುಮಾರ್ ಎಚ್.ಕೆ., ರಾಯಚೂರು

ಛಾ(ಮಾ)ಯಾಪತಿ!

ಮಾನ್ಯರೆ,



ನನ್ನ ಅನೇಕ ಪುಸ್ತಕಗಳನ್ನು ಪ್ರಕಟಿಸಿದ ಸನ್ಮಿತ್ರ, ಖ್ಯಾತ ಲೇಖಕ–ಪ್ರಕಾಶಕ ಟಿ.ಎಸ್. ಛಾಯಾಪತಿಯವರ ನಿಧನ ನನ್ನನ್ನು ಖಿನ್ನನನ್ನಾಗಿಸಿದೆ. ನಮ್ಮ ಸಂಬಂಧ ಮೊದ ಮೊದಲು ನಿಕಟವಾಗಿತ್ತು. ಈಚೆಗೆ ನಾವು ಪರಸ್ಪರ ತುಸು ದೂರವಾಗಿದ್ದೆವು.

ಛಾಯಾಪತಿ ಅವರ ತಂದೆ ತ.ಸು. ಶಾಮರಾಯರ ಮತ್ತು ದೊಡ್ಡಪ್ಪ ಟಿ.ಸ್. ವೆಂಕಣ್ಣಯ್ಯನವರ ಕೊಡುಗೆ ಕನ್ನಡಕ್ಕೆ ದೊಡ್ಡದು. ಅವರು ಉದಾತ್ತ ಚೇತನಗಳು! ವೆಂಕಣ್ಣಯ್ಯನವರಂತೂ ಕುವೆಂಪು ಅವರಿಗೆ ಪೂಜನೀಯರಾಗಿದ್ದರು. (ಅವರಿಗೇ ಅರ್ಪಿತವಾಗಿದೆ, 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ). ಕುವೆಂಪು ಒಮ್ಮೊಮ್ಮೆ ಬ್ರಾಹ್ಮಣರನ್ನು ಖಂಡಿಸುತ್ತಿದ್ದರೂ, ಆ ಖಂಡನೆ ಅಷ್ಟೇನೂ ಕಠೋರವಾಗಿರುತ್ತಿರಲಿಲ್ಲ – ವೆಂಕಣ್ಣಯ್ಯನವರಿಂದಾಗಿ!

ನನ್ನ ಮುದ್ರಕ–ಮಿತ್ರರೊಬ್ಬರು ಛಾಯಾಪತಿಯವರನ್ನು, ತಮಾಷೆಗಾಗಿ 'ಮಾಯಾಪತಿ' ಎಂದು ಕರೆಯುತ್ತಿದ್ದರು! ಏತಕ್ಕೆ ಎಂಬುದು ಇಲ್ಲಿ ಬೇಡ. 'ಪತಿ'ಯವರು ಈಗ ನಮ್ಮ ನಡುವೆ ಇಲ್ಲ. ಅವರಿಗೆ ನನ್ನ ಹಾರ್ದಿಕ ಶ್ರದ್ಧಾಂಜಲಿ.

ಅನ್ಯಾಯ : ಈ ಸಲ ದಸರಾದಲ್ಲಿ ಪುಸ್ತಕ ಮೇಳವನ್ನು ಆಯೋಜಿಸಿದ್ದುದು ಪರಮ ಅನ್ಯಾಯ! "ಸರ್ಕಾರದ ಕೆಲಸ ದೇವರ ಕೆಲಸ", ಸರ್ಕಾರದ ಇಚ್ಛೆ ದೇವರ ಇಚ್ಛೆ ಅಲ್ಲವೆ? ನವರಾತ್ರಿ ಶಾರದಾಪೂಜೆಯೂ ಹೌದೆಂಬುದು ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಹೇಗೆ ಅರ್ಥವಾಗಬೇಕು? ಅನರ್ಥಗಳು ಘಟಿಸುತ್ತವೆ.

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.

ಸರ್ವಕಾಲಕ್ಕೂ ಸಲ್ಲುವ ಜಿಎಸ್‌ಎಸ್ 'ಅನ್ವೇಷಣೆ'

ಗುರುವಾದವರಿಗೆ ತನ್ನ ಶಿಷ್ಯರು ತಮ್ಮನ್ನು ಮೀರುವಂತೆ ಬೆಳೆದಾಗ ಅತಿಯಾದ ಆನಂದವಾಗುತ್ತದೆ. ಇತಿಹಾಸದಲ್ಲಿ ಅಂತಹ ಗುರುವನ್ನೇ ಮೀರಿ ಬೆಳೆದ ಶಿಷ್ಯವೃಂದವೇ ಇದೆ


ಉದಾಹರಣೆಗೆ: ಸಾಕ್ರಟೀಸ್ ಅನ್ನು ಮೀರಿ ಬೆಳೆದ ಪ್ಲೇಟೋ ಪ್ಲೇಟೋ ಅನ್ನು ಮೀರಿ ಬೆಳೆದು ನಿಂತ ಅರಿಸ್ಟಾಟಲ್ ಅರಿಸ್ಟಾಟಲ್ ಅನ್ನು ಮೀರಿ ನಿಂತ ಅಲೆಕ್ಸಾಂಡರ್ ಹಾಗೆಯೇ ರಾಮಕೃಷ್ಣರನ್ನು ಮೀರಿ ನಿಂತ ಸ್ವಾಮಿ ವಿವೇಕಾನಂದರು.ಕನ್ನಡ ಸಾಹಿತ್ಯದಲ್ಲೂ ಕೂಡ ಈ ಪರಂಪರೆ ಮುಂದುವರೆದಿದೆ.ಟಿ.ಎಸ್.ವೆಂಕಣ್ಣಯ್ಯ

ಅವರನ್ನು ಮೀರಿ ನಿಂತ ಅವರ ಶಿಷ್ಯ ಕುವೆಂಪು ,ಹಾಗೆಯೇ ಕುವೆಂಪು ಅವರಿಗೆ ತಕ್ಕ ಶಿಷ್ಯರೆಂದರೆ ಜಿ.ಎಸ್.ಶಿವರುದ್ರಪ್ಪ (ಜಿಎಸ್‌ಎಸ್) (ಕುವೆಂಪು ಎರಡನೇ ರಾಷ್ಟ್ರಕವಿಯಾದರೆ, ಜಿ.ಎಸ್.ಶಿವರುದ್ರಪ್ಪ ಮೂರನೇ ರಾಷ್ಟ್ರಕವಿ) ಶ್ರೇಷ್ಠ ಗುರುವಾದವನು ಶಿಷ್ಯನ ಏಳಿಗೆಯನ್ನು ನೋಡಿ ಅದಕ್ಕೆ ಹರ್ಷವನ್ನು ವ್ಯಕ್ತಪಡಿಸುತ್ತಾ ಅವನಿಗೆ ಬೆನ್ನೆಲುಬಾಗಿ ನಿಲ್ಲಬಲ್ಲವನಾಗಿರುತ್ತಾನೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಅನನ್ಯ ರತ್ನ ಎಂದರೆ ಅದು ಜಿ.ಎಸ್.ಎಸ್ ಎನ್ನಬಹುದು.ಅವರ ಕವಿತೆಗಳಲ್ಲಿ , ಕೃತಿಗಳಲ್ಲಿ ಸಹೃದಯರನ್ನು ಆಕರ್ಷಿಸುವ ಸೆಳೆತವೊಂದಿದೆ. ಅಂತಹ ಕವಿತೆಗಳಲ್ಲಿ ಒಂದಾಗಿರುವ 'ಅನ್ವೇಷಣೆ' ಕವನ ಎಲ್ಲಾ ಕಾಲಕ್ಕೂ ಸಲ್ಲುವ ಕವಿತೆ ಎಂದರೆ ತಪ್ಪಾಗಲಾರದು. ಕೇವಲ ಮೂರು ಪದ್ಯಭಾಗಗಳಲ್ಲಿ ಹನ್ನೆರಡು ಸಾಲುಗಳಲ್ಲಿ ಬದುಕಿನ ತತ್ವಗಳನ್ನು ಸಾರಿರುವ ಕವಿತೆ ಇದು.

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ

ಈ ಕವನದ ಮೊದಲ ಪದ್ಯಭಾಗ ಇದಾಗಿದೆ. ಎಷ್ಟು ಅರ್ಥಗರ್ಭಿತವಾಗಿದೆ ನೋಡಿ–ಕಾಣದ ದೇವರನ್ನು ಹುಡುಕುವ ಉದ್ದೇಶದಿಂದ ಕಲ್ಲು, ಮಣ್ಣಿನಿಂದ ಕೂಡಿದ ಗುಡಿಯೊಳಗೆ ದೇವರನ್ನು ಹುಡುಕುವ ಕಾರ್ಯದಲ್ಲಿ ತೊಡಗುತ್ತೇವೆ. ಆದರೆ ಇಲ್ಲೇ ನಮ್ಮ ಸುತ್ತ–ಮುತ್ತಲಿನ ಜನರ ನಡುವೆ ಇರಬಹುದಾದ ಪ್ರೀತಿ, ಸ್ನೇಹಗಳನ್ನು ಗುರುತಿಸಲು ವಿಫಲರಾಗುತ್ತೇವೆ.

ಇಲ್ಲಿ ಜಿ.ಎಸ್.ಎಸ್ ಅವರು ನಾಸ್ತಿಕರು ಅಥವಾ ಅವರಿಗೆ ದೇವರ ಮೇಲೆ ನಂಬಿಕೆ ಇಲ್ಲ ಹಾಗಾಗಿ ಈ ತರ ಬರೆದಿದ್ದಾರೆ ಎಂದುಕೊಂಡರೆ ಅದು ಶುದ್ಧ ಮೂರ್ಖತನವಾಗುತ್ತದೆ. ಎಲ್ಲೋ ಒಮ್ಮೆ ಓದಿದ ನೆನಪು – ಪದ್ಯ, ಕವನವೊಂದು ಒಂದೇ ಓದಿಗೆ ಅದು ಅರ್ಥವಾದರೆ ಅದು ನಿಜವಾದ ಕವನ ಪದ್ಯ ಆಗಲಾರದು. ಒಳಾರ್ಥಗಳನ್ನು, ಗೂಡಾರ್ಥಗಳನ್ನು ಒಳಗೊಂಡಿರುವುದು ನಿಜವಾದ ಕವನ, ಪದ್ಯ ಎನಿಸಿಕೊಳ್ಳುತ್ತದೆ.ಹಾಗೆಯೇ ಇಲ್ಲೂ ಕೂಡ ಜಿ.ಎಸ್.ಎಸ್ ಅವರು ಹೇಳಲು ಹೊರಟಿರುವುದು



ಜಿ.ಎಸ್.ಶಿವರುದ್ರಪ್ಪ

ಮನುಷ್ಯನ ಸಹಜ ನಡವಳಿಕೆಯನ್ನು. ನಾವೆಲ್ಲಾ ಆ ಕಾಣದ ದೇವರನ್ನು ಹುಡುಕುವ ವ್ಯರ್ಥ ಪ್ರಯತ್ನ ಮಾಡುತ್ತೇವೆ ವಿನಹಃ ನಮ್ಮ ನಡುವೆ ಇರುವ ಅಥವಾ ಇರಬಹುದಾದ ಪ್ರೀತಿ, ಸ್ನೇಹಗಳನ್ನು ಗುರುತಿಸಲಾರದೇ ಪರಿತಪಿಸುತ್ತೇವೆ. ಇದು ನಿಜ. ದೇವರು ಏನು ತಿನ್ನುವುದಿಲ್ಲ ಅಂತ ತಿಳಿದಿದ್ದರೂ ಕೂಡ ದೇವರಿಗೆ ವಿವಿಧ ಬಗೆಯ ನೈವೇದ್ಯವನ್ನು ಅರ್ಪಿಸುತ್ತೇವೆ ಹೊರತೂ ಅದೇ ಒಂದು ತುತ್ತು ಅನ್ನವನ್ನು ಹಸಿದವರಿಗೆ ನೀಡಲಾರೆವು. ಹಾಗೆಯೇ ನಮ್ಮ ನಡುವೆ ಇರುವ ಜನರು ನಮ್ಮ ಮೇಲೆ ಇಟ್ಟಿರುವ ಪ್ರೀತಿ, ಸ್ನೇಹಗಳನ್ನು ಗುರುತಿಸಲಾಗದೆ ಕಾಣದ ಮರೀಚಿಕೆಯ ಬೆಂಬತ್ತಿ ಹೋಗುವವರು ನಾವು. ಚಿಂತಿಸಿ ನೋಡಿ ಈ ಸಾಲುಗಳು ಕೇವಲ ಆ ದಿನಕ್ಕೆ ಅಲ್ಲ, ಈ ದಿನಕ್ಕೆ ಅಲ್ಲ ಸರ್ವಕಾಲಕ್ಕೂ ಸತ್ಯವಾದ ಸಾಲುಗಳು ಎಂದು ಅನಿಸುವುದಿಲ್ಲವೇ?

ಎಲ್ಲಿದೆ ನಂದನ ಎಲ್ಲಿದೆ ಬಂಧನ
ಎಲ್ಲಾ ಇವೆ ಈ ನಮ್ಮೊಳಗೆ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಗೆಗೆ

ಇದು ಪದ್ಯದ ಎರಡನೇ ಭಾಗ. ನಂದನ ಎಂದರೆ ಸಂತೋಷ, ಬಂಧನ ಎಂದರೆ ಸಾಮಾನ್ಯವಾದ ಅರ್ಥದಲ್ಲಿ ಹೇಳುವುದಾದರೆ ಬೇಡಿ, ಪದ್ಯದ ಹಿನ್ನಲೆಯಲ್ಲಿ ತಿಳಿಸುವುದಾದರೆ ದುಃಖ ಎಂಬರ್ಥ ಬರುತ್ತದೆ. ಹೌದಲ್ವಾ...! ಸಂತೋಷ ಎಲ್ಲಿದೆ, ದುಃಖ ಎಲ್ಲಿದೆ ಎಂದು ಹುಡುಕಿದರೆ ಅವೆರಡೂ ಇರುವುದು ನಮ್ಮಲ್ಲಿಯೇ ವಿನಹ ಬೇರೆಲ್ಲಿಯೂ ಇರಲು ಸಾಧ್ಯವಿಲ್ಲ. ಸಂತೋಷವಾಗಲೀ, ದುಃಖವಾಗಲೀ ಎರಡಕ್ಕೂ ಕಾರಣಕರ್ತರೂ ನಾವೇ ವಿನಹಃ ಬೇರೆಯವರಲ್ಲ ನಮ್ಮ ಮನದಲ್ಲಿರುವ ತಿಳಿಯನು ಅಂದರೆ ಕಲ್ಮಶವನ್ನು ಶುದ್ಧಿಕರಿಸಿದರೆ

ಕವಿತಾ'ಮೃತ'

ನಿಜಕ್ಕೂ ನಮ್ಮ ನಾಲಿಗೆಗೆ ಅಮೃತದ ಸವಿಯ ರುಚಿ ದೊರೆಯುತ್ತದೆ. ಇದರರ್ಥ ನಮ್ಮ ಸಂತೋಷಕ್ಕೆ–ದುಃಖಕ್ಕೆ, ನೋವಿಗೆ–ನಲಿವಿಗೆ ಎಲ್ಲಕ್ಕೂ ನಮ್ಮ ಮನಸ್ಸೇ, ನಮ್ಮ ಮಾತುಗಳೇ ಕಾರಣವಾಗಿರುತ್ತವೆ ವಿನಹಃ ಬೇರೆ ಅಲ್ಲ ಎಂಬ ಸತ್ಯವನ್ನು ಈ ಪದ್ಯ ಭಾಗ ತಿಳಿಸುತ್ತದೆ. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆ ಮಾತಿನಂತೆ ಎಲ್ಲಿ, ಹೇಗೆ ಮಾತನಾಡಬೇಕು. ಯಾವ ರೀತಿ ಚಿಂತಿಸಬೇಕು. ಬದುಕಬೇಕು ಎಂಬಿತ್ಯಾದಿ ವಿಷಯಗಳನ್ನು ತಿಳಿದರೆ ನಿಜಕ್ಕೂ ಅವರ ಬದುಕು ಹಸನಾಗುತ್ತದೆ. ಜೀವನ ಸುಂದರವಾಗಿರುತ್ತದೆ.

ಹತ್ತಿರವಿದ್ದೂ ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ
ಎಂಬುದು ನಾಲ್ಕು ದಿನದ ಈ ಬದುಕಿನಲಿ

ಪದ್ಯದ ಮೂರನೇ ಹಾಗೂ ಕೊನೆಯ ಭಾಗ. ಈ ನಾಲ್ಕು ಸಾಲುಗಳಲ್ಲಿ ಎಲ್ಲಾ ಕಾಲದಲ್ಲೂ ಇರುವ, ಇರುವಂತಹ, ಮುಂದೆ ಬರುವ ಜನರ ನಡವಳಿಕೆಗಳನ್ನು ಕಟ್ಟಿಕೊಡುವ ಪ್ರಯತ್ನ ನಡೆದಿದೆ.

ನಿಜ ನೆಪ ಮಾತ್ರಕ್ಕೆ ನನ್ನ ಸ್ನೇಹಿತ, ಸ್ನೇಹಿತೆ, ನಮ್ಮ ಬಂಧು–ಬಳಗ ಸಂಬಂಧ ಎಂದು ಹೇಳುತ್ತಾ ಹತ್ತಿರವಿದ್ದಂತೆ ಬಾಳುತ್ತೇವೆಯೇ ಹೊರತು ಮನಸ್ಸಲ್ಲಿ ಗೋಡೆಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಾ ಇರುತ್ತೇವೆ ಅಹಂಕಾರ ಎಂಬ ಕೋಟೆಯನ್ನು ಕಟ್ಟಿಕೊಂಡು ಜೊತೆಯಲ್ಲಿಯೇ ಇದ್ದರೂ ಅಂದರೆ ದೈಹಿಕವಾಗಿ ಜೊತೆಯಲ್ಲಿದ್ದರೂ ಮಾನಸಿಕವಾಗಿ ದೂರ ನಿಂತಿರುತ್ತೇವೆ. ಈ ಸಾಲುಗಳನ್ನು ಹೇಳುವಾಗ ಘಟನೆಯೊಂದು ನೆನಪಿಗೆ ಬರುತ್ತದೆ

ಘಟನೆ: ನೀವು ಅವಳಿಗೆ ಬೈಯ್ಯಬೇಡಿ. ಅವಳ ಮನಸ್ಸಿಗೆ ನೋವಾಗುತ್ತದೆ...... ಹೊಸದಾಗಿ ಮದುವೆಯಾಗಿ ಬಂದಿದ್ದ ಮಗಳ ಪರವಾಗಿ ಬೀಗರೊಂದಿಗೆ ಹುಡುಗಿಯ ತಾಯಿ ಆಡಿದ ಮಾತುಗಳಿವು (ಸದ್ಯ ಅತ್ತೆ–ಮಾವ ಇರುವ ಮನೆಗೆ ನನ್ನ ಮಗಳನ್ನು ಕೊಡೊಲ್ಲ, ಮದುವೆಯಾದ ಮೇಲೆ ಅಳಿಯ–ಮಗಳನ್ನು ಬೇರೆ ಇರಿಸುವಿರಾ ಎಂಬ ಷರತ್ತನ್ನು ಹಾಕುವ ಈ ಆಧುನಿಕ ಯುಗದಲ್ಲಿ ಈ ಮಾತುಗಳು ಎಷ್ಟೋ ವಾಸಿ) ಇಂದಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿ ನೋಡುವ, ಕೇಳುವ ಮಾತುಗಳು. ಯಾರ ಹತ್ತಿರವೂ ಬೈಯಿಸಿಕೊಳ್ಳಬಾರದು ಅಥವಾ ನಮ್ಮನ್ನು ಹೊಗಳಬೇಕು, ತೆಗಳಬಾರದು ಈ ಮನೋಭಾವ ಹೊಂದಿರುವ ಎಷ್ಟೋ ಜನರನ್ನು ನೋಡಿದಾಗ ಈ ಪದ್ಯದ ಸಾಲುಗಳಲ್ಲಿ ಅಡಗಿರುವ ಮೌಲ್ಯದ ಅರಿವಾಗುತ್ತದೆ. ಹೌದಲ್ವಾ, ನಮ್ಮ ನಡುವೇ ಒಂದು ಅಹಂ ಎಂಬ ಕೋಟೆಯನ್ನು ಕಟ್ಟಿಕೊಂಡು ಜೊತೆಯಲ್ಲಿದ್ದರೂ ಕೂಡ ದೂರ ನಿಲ್ಲುವ ವ್ಯಕ್ತಿತ್ವ ನಮ್ಮದಾಗಿದೆ ಎಂದೆನಿಸುವುದಲ್ಲವೇ

ಇನ್ನೂ ಕೊನೆಯ ಎರಡು ಸಾಲುಗಳಲ್ಲಿ ಹೇಳಿರುವ ಬದುಕಿನ ತತ್ವ ಎಷ್ಟು ವರ್ಣಿಸಿದರೂ ಸಾಲದು.

ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ

ಅಂದರೆ ನಾವು ನಾಲ್ಕು ದಿನ ಮಾತ್ರ ಬದುಕಿರುತ್ತೇವೆ ಎಂಬ ಅರ್ಥವಲ್ಲ , ಮನುಷ್ಯನ ಜೀವನ ಕ್ಷಣಿಕ, ನಶ್ವರ. ಈ ನಶ್ವರವಾದ ಜೀವನದಲ್ಲಿ ನಾವೆಲ್ಲಾ ಹೇಗೆಲ್ಲಾ ಬದುಕುತ್ತೇವೆ. ಹೊಂದಾಣಿಕೆ ಮಾಡಿಕೊಂಡು ಬದುಕುವುದನ್ನೇ ಮರೆತಿದ್ದೇವೆ.ನಾನು, ನನ್ನ ಗಂಡ, ಹೆಂಡತಿ, ಮಗ, ಮಗಳು ಇಷ್ಟೇ ಜೀವನ...

ನಾವು ಚೆನ್ನಾಗಿದ್ರೆ ಸಾಕು ಉಳಿದವರನ್ನು ಕಟ್ಟಿಕೊಂಡು ನಮಗೇನು, ನಾನ್ಯಾಕೆ ನಿಮ್ಮ ಅಮ್ಮನ ಹತ್ತಿರ ಬೈಯಿಸಿಕೊಂಡಿರಬೇಕು, ನೀವ್ಯಾರು ನನ್ನ ಬೈಯಲು, ಹೊಡೆಯಲು! ನಮ್ಮ ತಂದೆ – ತಾಯಿಯೇ ಹೊಡೆಯೊಲ್ಲ..... ಈ ತರಹದ ಸಂಭಾಷಣೆಗಳನ್ನು ದಿನನಿತ್ಯ ಕೇಳುತ್ತಾ ಬಂದಿದ್ದೇವೆ.

ಸೊಸೆಯಾದವಳಿಗೆ – ಅತ್ತೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬದುಕಲಾಗದು, ಅತ್ತೆಗೆ – ಹೊಸದಾಗಿ ಬಂದಿರುವ ಸೊಸೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಇರಲಾಗದು, ತಂದೆಗೆ–ಮಗನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಇರಲಾಗದು.......... ಹೀಗೆ ಹೇಳುತ್ತಾ ಹೋದಂತೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಎಲ್ಲರೂ ಹೀಗೆ ಮಾಡುವರು ಎಂದು ಹೇಳಲಾರೆ. ಬಹುಪಾಲು ಇಂದಿನ ನಾವು ಮಾಡುತ್ತಿರುವ ಕೆಲಸವೇ ಇದು. ಯಾರೊಂದಿಗೂ ಹೊಂದಾಣಿಕೆ ಮಾಡಿಕೊಂಡು ಬದುಕು ನಡೆಸುವ ತಾಳ್ಮೆ ನಮಗಿಲ್ಲ ಅದು ಬೇಕಾಗಿಯೂ ಇಲ್ಲ... ಪರಿಸ್ಥಿತಿ ಹೀಗಿರುವಾಗ ಕೊನೆಯವರೆವಿಗೂ ದೂರವೇ ಉಳಿಯುತ್ತೇವೆ ಹೊರತು ಸಂಬಂಧಗಳನ್ನು ಉಳಿಸಿಕೊಂಡು ಬಾಳಲಾರೆವು. ಮನುಷ್ಯತ್ವ, ಮಾನವೀಯತೆ, ಹೊಂದಾಣಿಕೆಯ ಗುಣಗಳನ್ನು ಬೆಳೆಸಿಕೊಂಡಿದ್ದೇ ಆಗಿದ್ದಲ್ಲಿ ಬದುಕು ಸುಂದರವಾಗುತ್ತದೆ. ಇಲ್ಲವೆಂದರೆ ಬದುಕೊಂದು ಸೂತ್ರ ಹರಿದ ಗಾಳಿಪಟದಂತಾಗುತ್ತದೆ.

ನೋಡಿ, ಕೇವಲ ಹನ್ನೆರಡು ಸಾಲುಗಳ, ಮೂರು ಪದ್ಯಭಾಗಗಳಲ್ಲಿ ಬದುಕಿನ ವಾಸ್ತವದ ಚಿತ್ರಣವನ್ನು ನೀಡಿರುವ ಶಿವರುದ್ರಪ್ಪ ಅವರ ಈ ಕವನ ನಿಜಕ್ಕೂ ಸರ್ವಕಾಲಕ್ಕೂ ಸಲ್ಲುವ ಕವನವಲ್ಲವೇ, ಚಿಂತಿಸಿ...

ಓದಿ.... ಆಲೋಚಿಸಿ! ಸಾಲುಗಳಲ್ಲಿರುವ ಒಳಾರ್ಥಗಳನ್ನು ಸಹೃದಯರಾಗಿ ಅರ್ಥಮಾಡಿಕೊಂಡಾಗ ಮಾತ್ರ ಜಿ.ಎಸ್.ಎಸ್ ಮತ್ತಷ್ಟು ಆಪ್ತರಾಗುತ್ತಾರೆ.ಈ ಕವನ ಮತ್ತಷ್ಟೂ ಆಪ್ತವಾಗುತ್ತದೆ .ಸರ್ವಕಾಲದಲ್ಲೂ ಕವನದಲ್ಲಿ ಹೇಳಿರುವ ವಿಚಾರಗಳು ಸತ್ಯ... ಸತ್ಯ..


■ ರಾಘವೇಂದ್ರ ಸಿ.ಎಸ್.
ಮೊ: 9036389640

ಹಿಜಾಬ್ ನಿಷೇಧ ಕುರಿತು ಸುಪ್ರೀಂಕೋರ್ಟ್ ಭಿನ್ನ ತೀರ್ಪು: ಸಿಜೆಐ ಪೀಠಕ್ಕೆ ವರ್ಗಾವಣೆ

ನವದೆಹಲಿ: ಬಹುನಿರೀಕ್ಷಿತ ಹಿಜಾಬ್ ವಿವಾದ ಕುರಿತು ಸುಪ್ರೀಂ ಕೋರ್ಟ್‌ನ ನ್ಯಾಯಪೀಠ ಗುರುವಾರ ಭಿನ್ನ ತೀರ್ಪು ನೀಡಿದೆ. ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಉಡುಪಿಯ ವಿದ್ಯಾರ್ಥಿನಿಯರು ಸಲ್ಲಿಸಿದ್ದ ಮೇಲ್ಮನವಿಯನ್ನು ಸುದೀರ್ಘ ಆಲಿಸಿದ ಸುಪ್ರೀಂ ಕೋರ್ಟ್ ನ್ಯಾಯಪೀಠ ಒಮ್ಮತದ ತೀರ್ಮಾನಕ್ಕೆ ಬರಲಾಗದೆ ಇಂದು ಭಿನ್ನ ತೀರ್ಪು ನೀಡಿ ಮುಂದಿನ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿಗಳ ಪೀಠಕ್ಕೆ(CJI) ವರ್ಗಾವಣೆ ಮಾಡಿದೆ.

ಮುಂದೆ ವಿಸ್ತೃತ ಪೀಠ ರಚನೆ ಮಾಡಲಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು, ಅಲ್ಲಿಯವರೆಗೂ ಕರ್ನಾಟಕ ಹೈಕೋರ್ಟ್ ತೀರ್ಪಿನ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ನೀಡಿದ್ದಾರೆ. ಇಂದು ಅಂತಿಮ ತೀರ್ಪು ಪ್ರಕಟವಾಗಬೇಕಿತ್ತು. ಸುಪ್ರೀಂ ಕೋರ್ಟ್ ನ ನ್ಯಾಯಪೀಠದಲ್ಲಿದ್ದ ಇಬ್ಬರು ನ್ಯಾಯಮೂರ್ತಿಗಳು ಹಿಜಾಬ್ ವಿವಾದ ಕುರಿತು ಭಿನ್ನ ತೀರ್ಪುಗಳನ್ನು ನೀಡಿರುವುದರಿಂದ ನಿರ್ದಿಷ್ಟ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಈ ವಿಷಯವನ್ನು ಸೂಕ್ತ ನಿರ್ದೇಶನಕ್ಕಾಗಿ ಭಾರತದ ಮುಖ್ಯ ನ್ಯಾಯಮೂರ್ತಿಗಳಿಗೆ ಉಲ್ಲೇಖಿಸಲಾಗಿದೆ ಎಂದು ನ್ಯಾಯಮೂರ್ತಿ ಹೇಮಂತ್ ಗುಪ್ತಾ ಹೇಳಿದ್ದಾರೆ. ಮೇಲ್ಮನವಿಯನ್ನು ನ್ಯಾಯಮೂರ್ತಿ ಹೇಮಂತ್ ಗುಪ್ತ ತಳ್ಳಿಹಾಕಿದರೆ ನ್ಯಾಯ ಮೂರ್ತಿ ಧುಲಿಯಾ, ಮೇಲ್ಮನವಿ ಸಲ್ಲಿಕೆಯನ್ನು ಪುರಸ್ಕರಿಸಿ ಕರ್ನಾಟಕ ಸರ್ಕಾರದ ಫೆ.5ರ ಆದೇಶವನ್ನು ತಳ್ಳಿಹಾಕಿದರು.

ಅಂತಿಮ ತೀರ್ಪಿನವರೆಗೆ ಹೈಕೋರ್ಟ್ ಆದೇಶ ಪಾಲನೆ



ಬೆಂಗಳೂರು: ಹಿಜಾಬ್ ವಿವಾದ ವಿಚಾರಣೆ ಮುಖ್ಯ ನ್ಯಾಯಮೂರ್ತಿಗಳ ಪೀಠಕ್ಕೆ(CJI) ವರ್ಗಾವಣೆ ಆಗಿರುವುದನ್ನು ಸ್ವಾಗತಿಸುತ್ತೇವೆ. ಕೋರ್ಟ್ ಆದೇಶದಂತೆ ಅಲ್ಲಿಯವರೆಗೂ ಹೈಕೋರ್ಟ್ ಆದೇಶವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಪಾಲಿಸುತ್ತೇವೆ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ಬೆಂಗಳೂರಿನಲ್ಲಿಂದು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಅವರು, ವಿಶ್ವಾದ್ಯಂತ ಇಂದು ಮಹಿಳೆಯರು ಹಿಜಾಬ್, ಬುರ್ಖಾ ಧರಿಸಬಾರದು ಎಂದು ಒತ್ತಾಯಿಸುತ್ತಿದ್ದಾರೆ. ಕರ್ನಾಟಕ ಸರ್ಕಾರ ಕೂಡ ಅದನ್ನು ಪ್ರೋತ್ಸಾಹಿಸುತ್ತದೆ. ಇಂದು ಸುಪ್ರೀಂಕೋರ್ಟ್‌ನಿಂದ ಉತ್ತಮ ತೀರ್ಪು ನಿರೀಕ್ಷಿಸಿದ್ದೆವು. ಈ ಮಧ್ಯೆ ಕರ್ನಾಟಕ ಹೈಕೋರ್ಟ್ ಆದೇಶವು ಮಧ್ಯಂತರ ಸಮಯದಲ್ಲಿ ಅನ್ವಯಿಸುತ್ತದೆ, ಅಲ್ಲಿಯವರೆಗೂ ಶಾಲೆ–ಕಾಲೇಜುಗಳಲ್ಲಿ ಹಿಜಾಬ್ ನಿಷೇಧ ನಿಯಮ ಮುಂದುವರಿಯುತ್ತದೆ, ಸುಪ್ರೀಂ ಕೋರ್ಟ್ ನಿಂದ ಏನೇ ತೀರ್ಪು ಬಂದರೂ ಸ್ವಾಗತಿಸುತ್ತೇವೆ ಎಂದರು.

ಸುಳ್ಳು ಹೇಳುವ ಸಂಕಲ್ಪ ಯಾತ್ರೆ



ಬೆಂಗಳೂರು, ಅ.13(ಕೆಎಂಶಿ)–ಬಿಜೆಪಿಯವರದು ಜನಸಂಕಲ್ಪ ಯಾತ್ರೆಯಲ್ಲ ಸುಳ್ಳು ಹೇಳುವ ಸಂಕಲ್ಪ ಯಾತ್ರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಟೀಕಿಸಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ನಾಯಕರು ತಮ್ಮ ವಿರುದ್ಧ ಮಾಡಿರುವ ಅರೋಪಗಳಿಗೆ ಸಿದ್ದರಾಮಯ್ಯ ಅವರು ಪತ್ರಿಕಾ ಹೇಳಿಕೆ ನೀಡಿದ್ದು, ಬಿಜೆಪಿಯವರು ಅವರ ಯಾತ್ರೆಗಳಲ್ಲಿ ನನ್ನನ್ನು ಗುರಿಯಾಗಿಸಿಕೊಂಡು ಸುಳ್ಳುಗಳನ್ನು ಪೋಣಿಸುತ್ತಿದ್ದಾರೆ.

ನೀವು ಏನು ಹೇಳುವುದಿದ್ದರೂ ಅಂಕಿ ಅಂಶಗಳನ್ನು ಇಟ್ಟುಕೊಂಡು ಮಾತನಾಡಿದರೆ ಹಾಲಿ ಮತ್ತು ಮಾಜಿ ಮುಖ್ಯಮಂತ್ರಿಗಳಾದ ಬೊಮ್ಮಾಯಿ ಮತ್ತು ಯಡಿಯೂರಪ್ಪ ಇಬ್ಬರಿಗೂ ಒಂದಿಷ್ಟು ತೂಕ ಬರುತ್ತದೆ. ತಮ್ಮ ಸ್ಥಾನದ ಘನತೆಗಳನ್ನು ನಿರ್ಲಕ್ಷಿಸಿ ಮಾತನಾಡುತ್ತಾ ಹೋದರೆ ರಾಜ್ಯದ ಜನ ಬಿಜೆಪಿಯವರನ್ನು ವಿದೂಷಕರು ಎನ್ನುತ್ತಾರೆ. ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ಸಿಗೆ ಹಿಂದುಳಿದ ವರ್ಗದವರು, ದೀನ ದಲಿತರು ನೆನಪಾಗಲಿಲ್ಲ ಎಂದು ಬೊಮ್ಮಾಯಿಯವರು ರಾಯಚೂರಿನಲ್ಲಿ ಹೇಳಿದ್ದಾರೆ. 2013ರಿಂದ 2018ರವರೆಗೆ ಕಾಂಗ್ರೆಸ್ ಸರ್ಕಾರ ದಲಿತರು ಮತ್ತು ಹಿಂದುಳಿದ ಸಮುದಾಯಗಳಿಗೆ ಏನು ಮಾಡಿತ್ತು ಎಂದು ಕಡತಗಳನ್ನು ತರಿಸಿಕೊಂಡು ನೋಡಿ ಮಾತನಾಡಬೇಕೇ ಹೊರತು ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿರುವುದು ಸುಳ್ಳು ಹೇಳುವುದಕ್ಕಲ್ಲ. ಮುಖ್ಯಮಂತ್ರಿಯವರಾದಿಯಾಗಿ ಬಹುತೇಕ ಬಿಜೆಪಿಯವರು ತಾವು ಆರೆಸ್ಸೆಸ್ಸಿಗರು ಎಂದು ಹೇಳಿಕೊಳ್ಳಲಾರಂಭಿಸಿದ್ದಾರೆ. ಬೊಮ್ಮಾಯಿ, ಯಡಿಯೂರಪ್ಪ ಮುಂತಾದವರೆಲ್ಲ ಆರೆಸ್ಸೆಸ್ ಎಂದು ಹೇಳಿಕೊಳ್ಳುತ್ತಿರುವುದು ದೇಶದ ಆರೋಗ್ಯದ ದೃಷ್ಟಿಯಿಂದ ಬಹಳ ಒಳ್ಳೆಯದು. ಬ್ರಹ್ಮಾಂಡ ಭ್ರಷ್ಟಾಚಾರದ ಹೊಲಸನ್ನು ಮೆತ್ತಿಕೊಂಡವರು, ಜನರನ್ನು ಕೊಂದು ಅಧಿಕಾರಕ್ಕೆ ಏರಿದ ಎಲ್ಲ ಬಿಜೆಪಿಗರು ಆರೆಸ್ಸೆಸ್ ಎಂದು ಬೇಗ ಘೋಷಿಸಿಕೊಂಡಷ್ಟೂ ಒಳ್ಳೆಯದೆಂದು ನಾಡಿನ ಬಗ್ಗೆ ಕಾಳಜಿ ಇರುವ ಜನ ಬಯಸುತ್ತಿದ್ದಾರೆ.

ಅಲೆಮಾರಿ ಜನಾಂಗದ 60 ಸಾವಿರ ಕುಟುಂಬಗಳಿಗೆ ಸ್ವಂತ ಸೂರಿಗೆ ಖಾತರಿ

ಅವರು ಎಲ್ಲಿ ವಾಸಿಸುತ್ತಿದ್ದರೋ ಆ ಜಾಗ ನೋಂದಣಿ ಹಕ್ಕುಪತ್ರ ನೀಡಲು ಸರ್ಕಾರ ನಿರ್ಧಾರ

ಬೆಂಗಳೂರು, ಅ.13(ಕೆಎಂಶಿ)–ಲಂಬಾಣಿ, ಗೊಲ್ಲ, ಕಾಡುಕುರುಬ ಸೇರಿದಂತೆ ರಾಜ್ಯದ ಅಲೆಮಾರಿ ಜನಾಂಗದ 60 ಸಾವಿರ ಕುಟುಂಬಗಳಿಗೆ ತಾವು ವಾಸಿಸುವ ಸೂರುಗಳಿಗೆ ನೋಂದಣಿ ಮಾಡಿದ ಹಕ್ಕುಪತ್ರಗಳನ್ನು ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ

ನವೆಂಬರ್ ಎರಡನೇ ವಾರದಲ್ಲಿ ಈ ಕುಟುಂಬಗಳಿಗೆ ಊರು,ವಿಳಾಸ ದೊರಕಿಸಿಕೊಡುವ ಕ್ರಾಂತಿಕಾರಿ ಕೆಲಸ ನಡೆದಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂರು ಹಂತಗಳಲ್ಲಿ ರಾಜ್ಯದ ತಾಂಡಾಗಳಲ್ಲಿ ವಾಸಿಸುವ ಈ ಸಮುದಾಯದವರಿಗೆ ಹಕ್ಕುಪತ್ರಗಳನ್ನು ನೀಡುವುದಾಗಿ ಪ್ರಕಟಿಸಿದರು. ನವೆಂಬರ್ ಮಧ್ಯೆ ಭಾಗದಲ್ಲಿ ಗುಲ್ಬರ್ಗ ಹಾಗೂ ದಾವಣಗೆರೆಯ ಹೊನ್ನಾಳಿಯಲ್ಲಿ ನಡೆಯುವ ಈ ವರ್ಗದವರ ಬೃಹತ್ ಸಮಾವೇಶದಲ್ಲಿ ಆ ಕುಟುಂಬದವರಿಗೆ ಹಕ್ಕುಪತ್ರಗಳನ್ನು ನೀಡಲಾಗುವುದು.

ಅಷ್ಟೇ ಅಲ್ಲ, ಅವರ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಅಂದೇ ಘೋಷಣೆ ಮಾಡಿ, ಆ ಗ್ರಾಮಕ್ಕೆ ಇನ್ನು ಮುಂದೆ ಸರ್ಕಾರದ ಎಲ್ಲಾ ಸವಲತ್ತು ಕಲ್ಪಿಸಿಕೊಡುವುದಾಗಿ ತಿಳಿಸಿದರು. ಮೂರನೇ ಹಂತದಲ್ಲಿ ಹಳೇ





ಮೈಸೂರು ಭಾಗದ ಕೇಂದ್ರ ಸ್ಥಾನದಲ್ಲಿ ಇಂತಹದ್ದೇ ಸಮಾವೇಶ ನಡೆಸಿ, ಉಳಿದವರಿಗೆ ಹಕ್ಕುಪತ್ರಗಳನ್ನು ನೀಡುವುದಾಗಿ ಘೋಷಣೆ ಮಾಡಿದರು.

ಈ ಪ್ರಮಾಣದ ಜನರಿಗೆ ಒಂದೇ ಕಂತಿನಲ್ಲಿ ಕ್ರಯಪತ್ರ ದೊರಕಿಸಿಕೊಡುವ ಕೆಲಸ ಯಾವ ಸರ್ಕಾರಗಳಿಂದಲೂ ಆಗಿಲ್ಲ ಎಂದರು. ರಾಜ್ಯದಲ್ಲಿ 3300 ಲಂಬಾಣಿ ತಾಂಡಾಗಳಿದ್ದು,ಉಳಿದಂತೆ ಗೊಲ್ಲರಹಟ್ಟಿ, ಕುರುಬರ ಹಟ್ಟಿ ಸೇರಿದಂತೆ ಅಲೆಮಾರಿಗಳ 500 ವಾಸಸ್ಥಳಗಳಿವೆ. ಈ ಸ್ಥಳಗಳಿಗೆ ಹೆಸರೂ ಇಲ್ಲ, ಅಲ್ಲಿರುವವರಿಗೆ ವಿಳಾಸವೂ ಇಲ್ಲ. ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಒತ್ತಾಯ ಬರುತ್ತಲೇ ಇದ್ದವು. ಆದರೆ ನಮ್ಮ ಸರ್ಕಾರ ಅವರ ಕನಸನ್ನು ನನಸು ಮಾಡುತ್ತಿದೆ.

ಈ ಸಂಬಂಧ ಜಿಲ್ಲಾಧಿಕಾರಿಗಳ ಜತೆ ಚರ್ಚೆ ಪೂರ್ಣಗೊಳಿಸಿದ್ದು, ಸಂಪೂರ್ಣ ವಿವರ ಪಡೆದು ಅಂತಹ ಜನರಿರುವ ಜಾಗದ ಸರ್ವೇ ಮಾಡಿಸುವುದಲ್ಲದೆ ಸದರಿ ಜಾಗದ ವಿವರ ಪಡೆದು ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಿಸಿ ಕ್ರಯಪತ್ರ ಒದಗಿಸಲಾಗುವುದು ಎಂದರು.

ಇದುವರೆಗೆ ಇವರಿರುವ ಜಾಗಗಳಿಗೆ ಹೆಸರಿರಲಿಲ್ಲ. ಹೀಗಾಗಿ ಅವರಿಗೆ ವಿಳಾಸವೂ ಇರಲಿಲ್ಲ. ಪರಿಣಾಮವಾಗಿ ಅವರಿಗೆ ಸರ್ಕಾರದ ಸವಲತ್ತುಗಳೂ ದೊರೆಯುತ್ತಿರಲಿಲ್ಲ. ಆದರೆ ಈಗಿನ ತೀರ್ಮಾನದಿಂದ ಅವರಿರುವ ಪ್ರದೇಶಗಳಿಗೆ ಹೆಸರೂ ಸಿಗುತ್ತದೆ, ಜನರಿಗೆ ವಿಳಾಸವೂ ಸಿಗುತ್ತದೆ. ಈಗ ಬಹುತೇಕ ಕಡೆ ಇವರು ಸರ್ಕಾರಿ ಭೂಮಿಯಲ್ಲಿ ಸೂರು ಕಟ್ಟಿಕೊಂಡು ವಾಸಿಸುತ್ತಿದ್ದು, ಒಂದಷ್ಟು ಪ್ರಮಾಣದಲ್ಲಿ ಖಾಸಗಿ ಭೂಮಿಯಲ್ಲೂ ಮನೆ ಕಟ್ಟಿಕೊಂಡಿದ್ದಾರೆ. ಹೀಗಾಗಿ ಸರ್ಕಾರಿ ಭೂಮಿಯನ್ನು ಕೊಡುವುದರ ಜತೆ ಮಾರ್ಗಸೂಚಿ ಮೌಲ್ಯ ನೀಡಿ ಖಾಸಗಿಯವರಿಂದ ಭೂಮಿ ಖರೀದಿಸಿ ಅವರಿಗೆ ನೀಡಲಾಗುವುದು ಎಂದು ಅವರು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ಇನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡ ಮೂವತ್ತು ಸಾವಿರ ಜನರಿಗೆ 94(ಸಿ) ಮತ್ತು 94(ಸಿಸಿ)ಅಡಿ ಸಕ್ರಮಾತಿ ಆದೇಶ ನೀಡಲು ಸರ್ಕಾರಿ ತಯಾರಿ ನಡೆಸಿದ್ದು, ಈ ಪೈಕಿ ಬೆಂಗಳೂರಿನ ಹತ್ತು ಸಾವಿರ ಜನರಿಗೆ ಡಿಸೆಂಬರ್ ತಿಂಗಳಲ್ಲಿ ಸಕ್ರಮಾತಿ ಆದೇಶ ನೀಡಲಾಗುವುದು ಎಂದು ವಿವರಿಸಿದರು.

ರಾಜ್ಯಾದ್ಯಂತ ರೆವಿನ್ಯೂ ನಿವೇಶನಗಳ ಭೂ ಪರಿವರ್ತನೆ ಮಾಡಿಕೊಡಲು ಸಮಸ್ಯೆ ಇಲ್ಲ ಎಂದು ಕಾನೂನು ಇಲಾಖೆ ತಿಳಿಸಿದ್ದು,ಮುಖ್ಯಮಂತ್ರಿಗಳು ಕೂಡ ಇದಕ್ಕೆ ಒಪ್ಪಿಗೆ ನೀಡಿದ್ದಾರೆ. ಆ ಮೂಲಕ ರಾಜ್ಯದ ಲಕ್ಷಾಂತರ ಮಂದಿಗೆ ಅನುಕೂಲವಾಗಲಿದೆ ಎಂದರು. ರೆವಿನ್ಯೂ ನಿವೇಶನಗಳ ಭೂ ಪರಿವರ್ತನೆಗೆ ಅವಕಾಶ ನೀಡಿದರೆ,ಅಲ್ಲಿ ಮನೆ ಕಟ್ಟಿಕೊಂಡವರಿಗೆ, ಮನೆ ಕಟ್ಟಿಕೊಳ್ಳಲು ಬಯಸುವವರಿಗೆ ಸಾಲದ ಸೌಲಭ್ಯ ದೊರೆಯುತ್ತದೆ ಎಂದು ಅವರು ವಿವರ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

'ಚಾಂಪಿಯನ್' 12 ವರ್ಷಗಳ ಕನಸು



12 ವರ್ಷಗಳ ಹಿಂದೆ ತಾನೊಬ್ಬ ಹೀರೋ ಆಗಬೇಕು, ಗಾಂಧಿನಗರದಲ್ಲಿ ತನ್ನ ಕಟೌಟ್ ನಿಲ್ಲಬೇಕು ಎಂಬ ಕನಸಿಟ್ಟುಕೊಂಡು ಬೆಂಗಳೂರಿಗೆ ಬಂದಿದ್ದ ಸಚಿನ್ ಧನಪಾಲ್ ಅವರ ಕನಸು ಈಗ ನನಸಾಗಿದೆ. ಇಂದು ರಾಜ್ಯಾದ್ಯಂತ ಬಿಡುಗಡೆಯಾಗಿರುವ 'ಚಾಂಪಿಯನ್' ಚಿತ್ರದ ನಾಯಕ ಸಚಿನ್ ಅವರ ಸ್ನೇಹಿತ ಶಿವಾನಂದ್ ಎಸ್. ನೀಲಣ್ಣನವರ್ ಅವರು ಶಿವಂ ಪ್ರೊಡಕ್ಷನ್ಸ್ ಲಾಂಛನದಲ್ಲಿ ಈ ಚಿತ್ರವನ್ನು ಅದ್ಧೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಶಾಹುರಾಜ್ ಶಿಂಧೆ ಅವರ ನಿರ್ದೇಶನದ ಚಾಂಪಿಯನ್ ಇಂದಿನಿಂದ ರಾಜ್ಯಾದ್ಯಂತ 150ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದೆ.

ನೋಡುವಂತಹ ಚಾಂಪಿಯನ್ ಆಗುವಂಥ ಕಥಾಹಂದರವನ್ನು ಈ ಚಿತ್ರದಲ್ಲಿ ನಿರೂಪಿಸಲಾಗಿದೆ. ನಾಸಿಕ್, ದುಬೈ, ಬೆಂಗಳೂರು, ತೀರ್ಥಹಳ್ಳಿ ಮುಂತಾದೆಡೆಗಳಲ್ಲಿ ಸುಮಾರು 60ಕ್ಕೂ ಹೆಚ್ಚು ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ನಾಯಕನಿಗೆ ಸಾಧನೆಯ ಹಾದಿ ತೋರಿಸುವ ಗುರುಗಳಾಗಿ ಹಿರಿಯ ನಟ ದೇವರಾಜ್ ಅವರು ಕಾಣಿಸಿಕೊಂಡಿದ್ದಾರೆ. ಅಲ್ಲದೆ ತಂದೆಯಾಗಿ ಮತ್ತೊಬ್ಬ ನಟ ಅವಿನಾಶ್ ನಟಿಸಿದ್ದಾರೆ. ಉಳಿದಂತೆ ಸುಮನ್, ಪ್ರದೀಪ್ ರಾವತ್, ಚಿಕ್ಕಣ್ಣ, ಆದಿ ಲೋಕೇಶ್, ರಂಗಾಯಣ ರಘು, ಅವಿನಾಶ್, ಕಾಕ್ರೋಚ್ ಸುಧಿ, ಶೋಭರಾಜ್, ಅಶೋಕ್ ಶರ್ಮ, ಪ್ರಶಾಂತ್ ಸಿದ್ದಿ, ಗಿರಿ, ಮಂಡ್ಯ ರಮೇಶ್ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗ

ಕ್ರೀಡಾ ಹಿನ್ನೆಲೆಯ ಕಥಾಹಂದರ ಹೊಂದಿರುವ ಈ ಚಿತ್ರದ ನಾಯಕಿಯಾಗಿ ಬೆಡಗಿ ಅದಿತಿ ಪ್ರಭುದೇವಾ ಅಭಿನಯಿಸಿದ್ದಾರೆ. ಮಲೆನಾಡಿನ ಯುವಕನೊಬ್ಬ ಕ್ರೀಡೆಯಲ್ಲಿ ಸಾಧನೆ ಮಾಡುವ ಮೂಲಕ ಇಡೀ ದೇಶವೇ ತನ್ನತ್ತ ದಲ್ಲಿದ್ದಾರೆ. ಬಾಲಿ ವುಡ್ ಹಾಟ್ ಬೆಡಗಿ ಸನ್ನಿ ಲಿಯೋನ್ ಕೂಡ ಈ ಚಿತ್ರದ ಹಾಡೊಂದರಲ್ಲಿ ಸಖತ್ ಹೆಜ್ಜೆ ಹಾಕುವ ಮೂಲಕ ಪಡ್ಡೆ ಹೈಕಳ ನಿದ್ದೆ ಕೆಡಿಸಿದ್ದಾರೆ. ಚಿತ್ರದ ಹಾಡುಗಳಿಗೆ ಅಜನೀಶ್ ಲೋಕನಾಥ್ ಅವರ ಸಂಗೀತ ಸಂಯೋಜನೆಯಿದ್ದು, ಸರವಣನ್ ನಟರಾಜನ್ ಅವರ ಛಾಯಾಗ್ರಹಣ, ಹಾಗೂ ವಿನೋದ್‌ರ ಸಾಹಸ ನಿರ್ದೇಶನವಿದೆ. ಅಲ್ಲದೆ ಈ ಚಿತ್ರಕ್ಕೆ ರಘು ನಿಡುವಳ್ಳಿ ಸಂಭಾಷಣೆಗಳನ್ನು ಬರೆದಿದ್ದಾರೆ.



ಶಿವಣ್ಣ ಅಭಿನಯದ ಸಂದೇಶ್ ಚಿತ್ರ 'ಘೋಸ್ಟ್'

ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನೀಡಿರುವ ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ, ಸಂದೇಶ್ ನಾಗರಾಜ್ (ಮಾಜಿ ಎಂಎಲ್‌ಸಿ) ಅರ್ಪಿಸಿ, ಸಂದೇಶ್ ಎನ್. ನಿರ್ಮಿಸುತ್ತಿರುವ, ಶ್ರೀನಿ ನಿರ್ದೇಶನದ 'ಘೋಸ್ಟ್' ಚಿತ್ರದ ಮುಹೂರ್ತ ಮಿನರ್ವ ಮಿಲ್‌ನಲ್ಲಿ ನೆರವೇರಿತು. ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ಮೊದಲ ಸನ್ನಿವೇಶಕ್ಕೆ ಗೀತಾ ಶಿವರಾಜ ಕುಮಾರ್ ಆರಂಭ ಫಲಕ ತೋರಿದರು. ಬೃಂದಾ ಜಯರಾಂ ಕ್ಯಾಮೆರಾ ಚಾಲನೆ ಮಾಡಿದರು. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಅದ್ಧೂರಿ ಸೆಟ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಮಿನರ್ವ ಮಿಲ್‌ನಲ್ಲಿಯೇ 15 ರೀತಿಯ ವಿವಿಧ ಸೆಟ್‌ಗಳನ್ನು ಹಾಗೂ ಮೈಸೂರಿನಲ್ಲಿ 4 ರೀತಿಯ ಸೆಟ್‌ಗಳನ್ನು ಕಲಾನಿರ್ದೇಶಕ ಮೋಹನ್ ಬಿ.ಕೆರೆ ನಿರ್ಮಿಸಿದ್ದಾರೆ. ಮಿನರ್ವ ಮಿಲ್‌ನಲ್ಲಿ ನಿರ್ಮಿಸಲಾಗಿರುವ ಜೈಲಿನ ಸೆಟ್‌ನಲ್ಲೇ 24 ದಿನಗಳ ಕಾಲ ಚಿತ್ರದ ಚಿತ್ರೀಕರಣ ನಡೆಯಲಿದೆ. ಈ ಅದ್ಧೂರಿ ಸೆಟ್‌ಗಳ ನಿರ್ಮಾಣಕ್ಕೆ ಸುಮಾರು ಮೂರು ಕೋಟಿ ರೂ. ವೆಚ್ಚವಾಗಿದೆಯಂತೆ. 'ಶ್ರೀನಿವಾಸ ಕಲ್ಯಾಣ', 'ಓಲ್ಡ್‌ಮಾಂಕ್' ಚಿತ್ರಗಳನ್ನು ನಿರ್ದೇಶಿಸಿರುವ ಶ್ರೀನಿ ನಿರ್ದೇಶನದ ಐದನೇ ಚಿತ್ರ ಘೋಸ್ಟ್, ನಿರ್ದೇಶಕರೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಮಾಸ್ತಿ, ಪ್ರಸನ್ನ ಅವರ ಸಂಭಾಷಣೆ, ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಹಾಗೂ ಮಹೇಂದ್ರ ಸಿಂಹ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಐದು ಸಾಹಸ ಸನ್ನಿವೇಶಗಳು ಈ ಚಿತ್ರದಲ್ಲಿದೆ. ಶಿವರಾಜಕುಮಾರ್, ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ ಅಭಿಜಿತ್ ಇನ್ನಿತರರು ತಾರಾಬಳಗದಲ್ಲಿದ್ದಾರೆ.



ನ.4ಕ್ಕೆ ತೆರೆ ಮೇಲೆ 'ನಟಭಯಂಕರ'

ಕನ್ನಡ ಚಿತ್ರರಂಗದಲ್ಲಿ ವಾತಿನಮಲ್ಲ ಎಂದೇ ಗುರುತಿಸಿಕೊಂಡಿರುವ ಬಿಗ್‌ಬಾಸ್ ಖ್ಯಾತಿಯ ನಟ, ನಿರ್ದೇಶಕ 'ಪ್ರಥಮ್' ಅಭಿನಯದ 'ನಟಭಯಂಕರ' ತನ್ನ ಶೀರ್ಷಿಕೆಯಿಂದಲೇ ಹೆಚ್ಚು ಜನಪ್ರಿಯವಾಗಿದೆ. ಈ ಹಿಂದೆ ನಟಭಯಂಕರನ ಉಗ್ರಾವತಾರವನ್ನು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ತೋರಿಸಿ ಅವರೇ ಷಾಕ್ ಆಗುವಂತೆ ಮಾಡಿದ್ದ ಚತುರ ಈ ಪ್ರಥಮ್. ಈಗ ಆತನೇ ನಾಯಕನಾಗಿ ನಟಿಸುವ ಜೊತೆಗೆ ನಿರ್ದೇಶಕನೂ ಆಗಿರುವ 'ನಟಭಯಂಕರ' ಸಿನಿಮಾ ನವೆಂಬರ್ 4ರಂದು ರಾಜ್ಯಾದ್ಯಂತ ತೆರೆಗೆ ಬರುವುದು ಕನ್‌ಫರ್ಮ್ ಆಗಿದೆ. ಈಗಾಗಲೇ ಚಿತ್ರದ ಅದ್ಭುತ ಮೇಕಿಂಗ್ ಮೂಲಕ ಉಪೇಂದ್ರ, ಶಿವಣ್ಣ, ಧ್ರುವ ಸೇರಿದಂತೆ ಹಲವಾರು ಸ್ಟಾರ್‌ಗಳಿಂದ ಭೇಷ್ ಎನಿಸಿಕೊಂಡು ಬಂದಿರುವ ಪ್ರಥಮ್ ಈಗ ಚಿತ್ರವನ್ನು ರಿಲೀಸ್ ಮಾಡಲು ಸಿದ್ಧತೆ ಮಾಡಿಕೊಂಡಿದ್ದಾರೆ. ಹಾರರ್ ಕಾಮಿಡಿ ಕಂಟೆಂಟ್ ಹೊಂದಿರುವ 'ನಟಭಯಂಕರ' ಚಿತ್ರದ ಟ್ರೇಲರ್ ಸದ್ಯದಲ್ಲೇ ಬಿಡುಗಡೆಯಾಗಲಿದ್ದು, ಪ್ರಥಮ್ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದ ನಟಭಯಂಕರನ ಒಂದು ಝಲಕ್ ಅದರಲ್ಲಿದೆ. ವಿಭಿನ್ನ ಶೈಲಿಯ ಹಾರರ್ ಕಾಮಿಡಿ ಹಾಗೂ ಆಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಾಯಕ ಪ್ರಥಮ್ ಅವರು ಸಾಕಷ್ಟು ಗಹನವಾದ ವಿಚಾರಗಳನ್ನು ತೆಗೆದುಕೊಂಡಿದ್ದಾರೆ. ಈಗ ಚಿತ್ರ ಬಿಡುಗಡೆಯ ಹಂತ ತಲುಪಿದ್ದು, ಈಗಾಗಲೇ ಪ್ರಥಮ್ ಭರ್ಜರಿ ಪ್ರಚಾರವನ್ನೂ ಆರಂಭಿಸಿದ್ದಾರೆ. ಸ್ವಾರಸ್ಯ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರ ನವೆಂಬರ್ ಮೊದಲ ವಾರ ರಾಜ್ಯಾದ್ಯಂತ ತೆರೆಗೆ ಬರಲಿದೆ. ಹೆಚ್.ಪಿ.ನಿತೇಶ್ ಚಿತ್ರದ ಸಹ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ, ನಿರ್ಮಾಪಕ ಉದಯ್ ಕೆ.ಮೆಹ್ತಾ ಅವರು ಬರೆದ ಕಥೆಗೆ ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಪ್ರಥಮ್ ಅವರೇ ಬರೆದಿದ್ದಾರೆ. ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿದ್ದು, ಪ್ರದ್ಯೋತನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವಿಶೇಷವಾಗಿ ಈ ಚಿತ್ರದಲ್ಲಿ ರಿಯಲ್‌ಸ್ಟಾರ್ ಉಪೇಂದ್ರ ಅವರು ನಾಯಕನ ಇಂಟ್ರಡಕ್ಷನ್ ಸಾಂಗನ್ನು ಅದ್ಭುತವಾಗಿ ಹಾಡಿದ್ದಾರೆ. ಅಲ್ಲದೆ ಆ್ಯಕ್ಷನ್‌ಪ್ರಿನ್ಸ್ ಧ್ರುವಸರ್ಜಾ ಚಿತ್ರಕ್ಕೆ ವಾಯ್ಸ್ ನೀಡುವ ಮೂಲಕ ಸಾಥ್ ನೀಡಿದ್ದಾರೆ. ಅವರ ಧ್ವನಿ ಚಿತ್ರದುದ್ದಕ್ಕೂ ಕೇಳಿಸಲಿದೆ ಎಂದು ಪ್ರಥಮ್ ವಿವರಿಸಿದ್ದಾರೆ. ಡಾ. ವಿ.ನಾಗೇಂದ್ರ ಪ್ರಸಾದ್, ನಾಗತಿಹಳ್ಳಿ ಚಂದ್ರಶೇಖರ್, ಬಹದ್ದೂರ್ ಚೇತನ್ ಹಾಗೂ ಅರಸು ಅಂತಾರೆ ಹಾಡುಗಳಿಗೆ ಲಿರಿಕ್ ರಚಿಸಿದ್ದಾರೆ. ಬೆಂಗಳೂರು ಹಾಗೂ ಮೈಸೂರಿನಲ್ಲಿ ಚಿತ್ರದ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ಪ್ರಥಮ್ ಜೊತೆ ಹಿರಿಯನಟ ಸಾಯಿಕುಮಾರ್ ಒಂದು ಅದ್ಭುತವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ಓಂಪ್ರಕಾಶ್‌ರಾವ್ ಕೂಡ ಹಾಸ್ಯಪಾತ್ರವೊಂದಕ್ಕೆ ಬಣ್ಣಹಚ್ಚಿದ್ದಾರೆ. ನಿಹಾರಿಕಾ ಶೆಣೈ ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದು, ಸುಶ್ಮಿತ ಜೋಶಿ, ಶೋಭರಾಜ್, ಕುರಿ ಪ್ರತಾಪ್, ಚಂದನ ರಾಘವೇಂದ್ರ, ಶಂಕರ್‌ಅಶ್ವತ್ಥ, ಮೋಹನ್ ಜುನೇಜ, ರಮಾ, ಬಿರಾದಾರ್, ಎಂ.ಎಸ್.ಉಮೇಶ್ ಚಿತ್ರದ ಉಳಿದ ತಾರಾಬಳಗದಲ್ಲಿದ್ದಾರೆ.



ಕ್ರೈಮ್‌ಥ್ರಿಲ್ಲರ್ 'ಅಂಬುಜಾ' ಟೀಸರ್

ಶುಭಾ ಪೂಂಜಾ, ರಜಿನಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ ಹಾರರ್, ಕ್ರೈಮ್ ಥ್ರಿಲ್ಲರ್ ಕಥಾಹಂದರ ಇರುವ 'ಅಂಬುಜಾ' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ನೈಜ ಘಟನೆಯೊಂದನ್ನು ಆಧರಿಸಿ ನಿರ್ಮಿಸಲಾದ ಈ ಚಿತ್ರಕ್ಕೆ ಶ್ರೀನಿ ಹನುಮಂತರಾಜು ಆ್ಯಕ್ಷನ್‌ಕಟ್ ಹೇಳಿದ್ದಾರೆ. ಕಾಶಿನಾಥ್ ಡಿ.ಮಡಿವಾಳರ್ ಕಥೆ, ಸಾಹಿತ್ಯ ಬರೆಯುವುದರೊಂದಿಗೆ ನಿರ್ಮಾಣ ಸಹ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಶುಭಾ ಪೂಂಜಾ ಮಾತನಾಡಿ, ನಾನೊಬ್ಬ ಕ್ರೈಮ್ ರಿಪೋರ್ಟರ್ ಆಗಿ ಕಾಣಿಸಿಕೊಂಡಿದ್ದೇನೆ. ತುಸು ಗಂಭೀರವಾದ ಪಾತ್ರ ಎಂದು ಹೇಳಿದರು. ನಟಿ ರಜಿನಿ ಮಾತನಾಡಿ, ನನ್ನದು ಲಂಬಾಣಿ ಯುವತಿಯ ಪಾತ್ರ ಅಂದಾಗ ಬಹಳ ಖುಷಿಯಾಯ್ತು. ಈ ಚಿತ್ರಕಥೆಯೇ ವಿಭಿನ್ನವಾಗಿದೆ ಎಂದರು.

ನಮ್ಮ ಚಿತ್ರದ ಮೂಲಕ ಜನರಿಗೆ ಅಪರೂಪದ ಒಂದಷ್ಟು ವಿಚಾರಗಳನ್ನು ಹೇಳಲು ಪ್ರಯತ್ನಿಸಿದ್ದೇವೆ. ನಿರ್ದೇಶಕರು ಮಾಡಿರುವ ಈ ಕಥೆ ತುಂಬಾ ಚೆನ್ನಾಗಿದೆ. ಅಂಬುಜಾ ಕಮರ್ಷಿಯಲ್ ಸಿನಿಮಾ ಆದರೂ ಮನೆಮಂದಿಯೆಲ್ಲ ಕುಳಿತು ನೋಡಬಹುದಾಗಿದೆ ಎಂದು ನಿರ್ಮಾಪಕ ಕಾಶಿನಾಥ್ ಡಿ.ಮಡಿವಾಳರ್ ಮಾತನಾಡಿದರು. ನಟಿ ಶುಭಾ ಪೂಂಜಾ, ಪದ್ಮಜಾರಾವ್, ರಜಿನಿ, ಕಾಮಿಡಿ ಕಿಲಾಡಿ ಗೋವಿಂದೇಗೌಡ, ನಿರ್ದೇಶಕ ಶರಣಯ್ಯ, ಪ್ರಿಯಾಂಕ ಕಾಮತ್, ಸಂದೇಶ್ ಶೆಟ್ಟಿ ಅಜ್ರಿ ಸೇರಿದಂತೆ ಹಲವು ಕಲಾವಿದರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.




ಚಂದನ್ ಶೆಟ್ಟಿ ಈಗ 'ಸೂತ್ರಧಾರಿ'

ಚಂದನ್ ಶೆಟ್ಟಿ, ಈಗ ನಾಯಕನಾಗಿಯೂ ಚಿರಪರಿಚಿತ. ಪ್ರಸ್ತುತ ಚಂದನ್ ಶೆಟ್ಟಿ "ಸೂತ್ರಧಾರಿ" ಚಿತ್ರದ ನಾಯಕನಾಗಿ ನಟಿಸುತ್ತಿದ್ದಾರೆ. ಇದು ಅವರು ನಾಯಕನಾಗಿ ನಟಿಸುತ್ತಿರುವ ಎರಡನೇ ಚಿತ್ರ.

"ಸೂತ್ರಧಾರಿ" ಚಿತ್ರದ ಚಿತ್ರೀಕರಣ ಅಕ್ಟೋಬರ್ 10 ರಿಂದ ಆರಂಭವಾಗಲಿದೆ. ಮೈ ಮೂವೀ ಬಜಾರ್‌ನ ನವರಸನ್ ಈ ಚಿತ್ರ ನಿರ್ಮಿಸುತ್ತಿದ್ದು, ಕ್ರಿಯೇಟಿವ್ ಹೆಡ್ ಆಗಿಯೂ ಕಾರ್ಯನಿರ್ವಹಿಸಲಿದ್ದಾರೆ. ಕಿರಣ್ ಕುಮಾರ್ ನಿರ್ದೇಶನ ಮಾಡುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಶೀರ್ಷಿಕೆ ಬಿಡುಗಡೆ ಸಮಾರಂಭ ಅದ್ಧೂರಿಯಾಗಿ ನಡೆಯಿತು. ಪಿಆರ್‌ಓ ಸುಧೀಂದ್ರ ವೆಂಕಟೇಶ್ ಶೀರ್ಷಿಕೆ ಅನಾವರಣ ಮಾಡಿ, ಚಿತ್ರತಂಡಕ್ಕೆ ಶುಭ ಕೋರಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಭಾ.ಮಾ.ಹರೀಶ್, ನಿರ್ಮಾಪಕರಾದ ಕೆ.ಸಿ.ಎನ್. ಕುಮಾರ್, ಗೋವಿಂದರಾಜು, ಸಂಜಯ್ ಗೌಡ, ಗಿರೀಶ್(iflix) ಹಾಗೂ ಚಂದನ್ ಶೆಟ್ಟಿ ಪತ್ನಿ ನಿವೇದಿತಾ ಗೌಡ ಸಮಾರಂಭಕ್ಕೆ ಆಗಮಿಸಿ "ಸೂತ್ರಧಾರಿ"ಗೆ ಶುಭ ಕೋರಿದರು. ಇದು ನನ್ನ ನಿರ್ಮಾಣದ ಐದನೇ ಚಿತ್ರ. ಈವರೆಗೂ ನಮ್ಮ ಸಂಸ್ಥೆಯ ಮೂಲಕ 180ಕ್ಕೂ ಹೆಚ್ಚು ಚಿತ್ರಗಳ ಇವೆಂಟ್ ನಡೆಸಿಕೊಟ್ಟಿದ್ದೇನೆ. ನಿರ್ದೇಶನದೊಂದಿಗೆ ವಿತರಕನಾಗೂ ಕಾರ್ಯ ನಿರ್ವಹಿಸಿದ್ದೇನೆ. ಪ್ರಸ್ತುತ "ಸೂತ್ರಧಾರಿ" ಚಿತ್ರ ನಿರ್ಮಾಣ ಮಾಡುತ್ತಿದ್ದೇನೆ.

ಸಿನಿಪದಬಂಧ-029 ಆಜ್ಞಾದ್ ಜಿ. ಆಚಾರ್ಯ



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಮಿನುಗುತಾರೆ ಕಲ್ಪನಾ ನಟಿಸಿದ 1967ರ ಚಿತ್ರ (5)
3. ವಿಷ್ಣು-ಸೋನುವಾಲಿಯಾ ಜೋಡಿಯ 1994ರ ಚಿತ್ರ (5)
7. ನವರಸನಾಯಕ – – – (3)
8. 2019ರ ಶ್ರೀಮುರಳಿ ಸಿನಿಮಾ (3)
9. ರಮೇಶ್ ಅರವಿಂದ್ ನಟಿಸಿದ 1994ರ ಚಿತ್ರ (3)
12. ರಾಜೇಶ್-ಕಲ್ಪನಾ ಜೋಡಿಯ 1975 ರ ಚಿತ್ರ (9)
15. "ಉಪೇಂದ್ರ" ಚಿತ್ರಕ್ಕೆ ಎದುರಾಗಿ ಜಗ್ಗೇಶ್ ನಟಿಸಿದ 2001ರ ಚಿತ್ರ (3)
16. ಬರಲಿರುವ ಈ ಚಿತ್ರದಲ್ಲಿ ಲಾಸ್ಯಾ ನಾಗರಾಜ್ ನಾಯಕಿ (3)
17. ರಣ – – –, 2015ರ ಪುನೀತ್ ಚಿತ್ರ (3)
20. ಪ್ರಶಸ್ತಿಗಳ ಕೊಳ್ಳೆ ಹೊಡೆದ 2005ರ ಪ್ರೇಮ್ ನಟನೆಯ ಚಿತ್ರ (5)
21. ನವೀನ್ ಚಂದರ್-ಮಾಧುರಿ ಜೋಡಿಯ 1995ರ ಚಿತ್ರ (5)

ವಿಜೇತರು: ಬಾಲರಾಜು, ಗೋಕುಲಂ, ಮೈಸೂರು

ಸಿನಿ ಪದಬಂಧ 028ರ ಸರಿ ಉತ್ತರ

ಸಾ	ಹ	ಸ	ಸಿಂ	ಹ		ಕು	ಲ	ಗೌ	ರ	ವ
ವಿ			ಹಾ		ಪ		ವ			ಸಂ
ರ			ದ್ರಿ		ರ		ರ್ಸ			ತ
ಸು	ದೀ	ಪ್		ವ	ಸಂ	ತ		ಅಂ	ಬಿ	ಕಾ
ಳ್ಳಿ					ಗ					ವ್ಯ
	ಭೂ	ಮಿ	ಗೆ	ಬಂ	ದ	ಭ	ಗ	ವಂ	ತ	
ದೇ					ಗಂ					ನಿ
ವ	ನಿ	ತಾ		ಒ	ಡೆ	ಯ		ಬಂ	ಧ	ನ
ರ			ತ್		ತಿ		ಸ			ಗೋ
ಮ			ವಂ		ಮ್ಮ		ಲ			ಸ್ಕ
ಗ	ರು	ಡ	ರೇ	ಖೆ		ಸೊ	ಗ	ಸು	ಗಾ	ರ

ಮೇಲಿನಿಂದ ಕೆಳಕ್ಕೆ

1. ಡಾ. ರಾಜ್ ಹಾಗೂ ನರಸಿಂಹರಾಜು ಅಭಿನಯದ 1959ರ ಚಿತ್ರ (5)
2. ಬೇಬಿ – – –, ಎಂಬತ್ತರ ದಶಕದ ಜನಪ್ರಿಯ ಬಾಲ ನಟಿ (3)
4. ಶಶಿಕುಮಾರ್ ನಟನೆಯ 2001ರ ಚಿತ್ರ (3)
5. ಟೈಗರ್ ಪ್ರಭಾಕರ್ ಹಾಗು ವಿಷ್ಣುವರ್ಧನ್ ಅಭಿನಯದ 1995ರ ಚಿತ್ರ (5)
6. ರಾಘವೇಂದ್ರ ರಾಜಕುಮಾರ್-ಮಮತಾ ಶ್ರೀ ಜೋಡಿಯ 1993ರ ಚಿತ್ರ (9)
10. – – – ಗೆದ್ದ ಮಾನವ, 1967ರ ಡಾ. ರಾಜ್ ಚಿತ್ರ (3)
11. ಅಂಬರೀಶ್-ಗೀತಾ ಜೋಡಿಯ 1984ರ ಚಿತ್ರ (3)
13. ರಾಮ್ ಕುಮಾರ್-ಪ್ರೇಮಾ ಜೋಡಿಯ ಗ್ಲಾಸ್ ಹೌಸ್ (5)
14. ವೀರೇಶ್-ಸೌಮ್ಯಶ್ರೀ ಜೋಡಿಯ 1990ರ ಈ ಚಿತ್ರದ ನಿರ್ದೇಶಕ ಬಿ.ಪಿ ರಾಜಶೇಖರ್ (5)
18. ಪ್ರಮೋದ್ ರಾಜ್ ಚೊಚ್ಚಲ ನಿರ್ದೇಶನದ 2022ರ ಚಿತ್ರ (3)
19. ಬಾನಲ್ಲಿ – – ಸೂರ್ಯೋದಯ..., ನೀನು ನಕ್ಕರೆ ಹಾಲು ಸಕ್ಕರೆ ಚಿತ್ರದ ಗೀತೆ (3)

ಅಂಬಿಗರಹಳ್ಳಿ ಬಳಿಯ ತ್ರಿವೇಣಿ ಸಂಗಮದಲ್ಲಿ ಮಹಾಕುಂಭಮೇಳ ಹಿನ್ನೆಲೆ

ಕೆ.ಆರ್.ಪೇಟೆಯಲ್ಲಿ ಮಂಡ್ಯ ಉತ್ಸವಕ್ಕೆ ಚಾಲನೆ

• ಮನಸೂರೆಗೊಂಡ ನಾನಾ ಜಾನಪದ ಕಲಾ ತಂಡಗಳು • ರಾಜ್ಯದ ಮೂಲೆ ಮೂಲೆಯಿಂದ ಆಗಮಿಸಿದ ಕಲಾ ತಂಡಗಳೊಂದಿಗೆ ಸಾವಿರಾರು ಜನರ ಮೆರವಣಿಗೆ



ಕೆ.ಆರ್.ಪೇಟೆ,ಅ.13– ದಕ್ಷಿಣ ಭಾರತದಲ್ಲಿಯೇ ಅತಿ ಮಹತ್ವದ ಪವಿತ್ರ ಮಹಾ ಕುಂಭಮೇಳದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಜಾನಪದ ಕಲಾ ತಂಡಗಳ ಜಿಲ್ಲಾ ಉತ್ಸವಕ್ಕೆ ಪಟ್ಟಣದ ನಾಗಮಂಗಲ ರಸ್ತೆಯ ಟಿಎಪಿಸಿಎಂಎಸ್ ಬಳಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಕ್ರೀಡಾ ಮತ್ತು ರೇಷ್ಮೆ ಸಚಿವ ಕೆ.ಸಿ.ನಾರಾಯಣ ಗೌಡ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ವಿವಿಧ ಭಾಗಗಳಿಂದ ಯಾತ್ರೆಯನ್ನು ಮುಗಿಸಿದ ಮೂರು ಜ್ಯೋತಿ ರಥಗಳನ್ನು ಸಂಗಮಗೊಳಿಸಲಾಯಿತು. ಮೆರವಣಿಗೆಯಲ್ಲಿ 125 ಕಲಾ ತಂಡಗಳು, 5000ಕ್ಕೂ ಜಾನಪದ ಕಲಾವಿದರು. ಸಾವಿರಾರು ಸ್ಥಳೀಯ ಶಾಲಾ ಮಕ್ಕಳು ಭಾಗಿಯಾಗಿದ್ದರು. ವಿವಿಧ ವೇಷಭೂಷಣಗಳನ್ನು ತೊಟ್ಟ ಸಾವಿರಾರು ಕಲಾವಿದರು ರಾಜ್ಯದ ಮೂಲೆ–ಮೂಲೆಗಳಿಂದ ಆಗಮಿಸಿ ತಮ್ಮ ಕಲಾ ಪ್ರಕಾರಗಳ ಮೂಲಕ ಮೆರವಣಿಗೆಗೆ ರಂಗು ತುಂಬಿದ್ದರು. ಕಲಾವಿದರು, ವಿದ್ಯಾರ್ಥಿಗಳು, ಪ್ರಮುಖರು ಸೇರಿ ಹತ್ತು ಸಾವಿರ ಜನ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.

ಕದೊನಿ, ಆಂಜನೇಯ, ದಾಸಯ್ಯ, ಫಟೋ ದ್ವಜ, ಹುಲಿ. ಏಲಿಯನ್ಸ್, ವಿಚಿತ್ರಮಾನವ, ಕಪ್ಪುಹುಲಿ, ಕಿಂಗ್ ಕೋಂಗ್, ಗೂಳಿ, ನಂದೀ ದ್ವಜ, ಕಹಳೆ, ಕೊಂಬು, ಊರಿನಚಂಡೆ, ನಾದಸ್ವರತಂಡ, ತಟ್ಟೆರಾಯ, ಶಿವತಾಂಡವ, ಶಿಲ್ಪಾ ಗೊಂಬೆ ಬಳಗ, ಸ್ನೇಹಗೊಂಬೆ, ಗೊರವರಕುಣಿತ, ಕೊಂಚಾಡಿ, ಪೂಜಾಕುಣಿತ, ಸೋಮನಕುಣಿತ, ವೀರಭದ್ರನಕುಣಿತ, ಮರಗಾಲು, ಸಿಂಹರಾಜ, ಚಿತ್ರದುರ್ಗಬ್ಯಾಂಡ್, ಅರ್ಧನಾರೀಶ್ವರ, ಬೆಂಡರಕುಣಿತ, ಕಥಕ್ಕಳಿ ವೇಷ, ಕುಂದಾಪುರಡೋಲು, ಗುಮ್ಮಟೆ ಹಗಲು ವೇಷ, ಪುರುಷರ ನಗಾರಿ, ಮಹಿಳೆಯರ ನಗಾರಿ, ಚಿಟ್ಟೆಮೇಳ, ಜಗ್ಗಳಿಕೆಮೇಳ, ಕೋಳಿಗಳು, ಮೀನುಗಳು, ಡ್ರಾಗನ್, ಊಸರವಳ್ಳಿ, ನಾಸಿಕ್ ಬ್ಯಾಂಡ್, ಡೊಳ್ಳುಕುಣಿತ, ಪಂಚವಾದ್ಯ, ಕಂಸಾಳೆ, ಕರಡಿಮಜಲು, ವೀರಗಾಸೆ, ಕೇರಳದ ದೇವರ ವೇಷ, ಪಟದ ಕುಣಿತ, ಬೆಂಗಳೂರು ಡ್ರೆಸ್, ಕಾರ್ಟೂನ್, ಪ್ರಾಣಿ ಪಕ್ಷಿಗಳು ಮೈಸೂರು ಪೇಟಾಧಾರಿಗಳು, ಇಳಕಲ್ ಸೀರೆ ನಾರಿಯರು, ಗುಜರಾತ್ ನಾಗರಿಕರು, ಲಾವಣಿ, ಮರಾಠ ಸೈನಿಕರು, ಸಾಮಾನ್ಯ ಸೈನಿಕರು, ಬ್ರಿಟಿಷ್ ಸೈನಿಕರು, ಬಾಹುಬಲಿ, ಜೋಕರ್ಸ್, ರಾಜರಾಣಿ ಮಂತ್ರಿ, ಪತಾಕೆ ಲಾಂಛನ, ಗಾಂಧೀಜಿ, ವಿವೇಕಾನಂದ, ಸುಭಾಷ್ ಚಂದ್ರಬೋಸ್, ಭಗತ್‌ಸಿಂಗ್, ಬಾಲಗಂಗಾಧರ ತಿಲಕ್, ರಾಣಿ ಅಬ್ಬಕ್ಕ, ಶಿವಾಜಿ, ಒನಕೆ ಓಬವ್ವ ಸಂಗೊಳ್ಳಿರಾಯಣ್ಣ, ಝಾನ್ಸಿರಾಣಿ, ಮದಕರಿ ನಾಯಕ, ಎನ್‌ಸಿಸಿ, ಸ್ಕೌಟ್ ಮತ್ತು ಗೈಡ್ಸ್, ಬ್ಯಾಂಡ್‌ಸೆಟ್ ಮುಂತಾದುವುಗಳು ನಗರದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಸಾಗಿ ಪುರಸಭಾ ಕಛೇರಿಯ ಪಕ್ಕದಲ್ಲಿನ ಆವರಣಕ್ಕೆ ಸಾಗಿದವು. ಸಾವಿರಾರು ಮಂದಿ ಜಾನಪದ ಕಲಾತಂಡಗಳ ವಿವಿಧ ಪ್ರಕಾರಗಳನ್ನು ಕಣ್ತುಂಬಿಕೊಂಡರು.

ಕುಂಭಮೇಳಕ್ಕೆ ಶಕ್ತಿ ತುಂಬುವ ಮೆರವಣಿಗೆ: ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸುಮಾರು 2–3 ಗಂಟೆಗಳ ಕಾಲ ಹಾಯ್ದುಹೋದ ಮೆರವಣಿಗೆ ನೋಡುಗರ ಕಣ್ಮನ ಸೆಳೆಯುವಂತಿತ್ತು. ಪೊಲೀಸರು ಬಿಗಿಭದ್ರತೆ ವಹಿಸಿದ್ದು, ಸಾರ್ವಜನಿಕರಿಗೆ ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ ಈ ಮೆರವಣಿಗೆ ಕುಂಭಮೇಳಕ್ಕೆ ಶಕ್ತಿ ತುಂಬುವಂತಿತ್ತು.

ರಂಗೋಲಿ ಸ್ಪರ್ಧೆ: ಜಿಲ್ಲಾ ಉತ್ಸವದ ಅಂಗವಾಗಿ ಪಟ್ಟಣದ ಮುಖ್ಯ ರಸ್ತೆಯಲ್ಲಿ ಗುರುವಾರ ಬೆಳಗ್ಗೆಯಿಂದಲೇ ಸಾವಿರಾರು ಮಹಿಳೆಯರಿಗೆ ರಂಗೋಲಿ ಬಿಡಿಸಲು ಅವಕಾಶ ಕಲ್ಪಿಸಲಾಗಿತ್ತು. ಪಟ್ಟಣದ ಟಿಬಿ ಸರ್ಕಲ್‌ನಿಂದ ಕೆರೆಯ ಶಾಲೆಯವರೆಗೆ ರಸ್ತೆಯಲ್ಲಿ ರಂಗೋಲಿಯ ಚಿತ್ತಾರ ನೋಡುಗರ ಗಮನ ಸೆಳೆದವು, ಬಣ್ಣಬಣ್ಣದ ರಂಗೋಲಿಗಳು ಮಹಿಳೆಯರ ಕೌಶಲ್ಯವನ್ನು ಬಿಂಬಿಸುವಂತಿತ್ತು.

ಜಿಲ್ಲಾ ಉತ್ಸವ ಹಾಗೂ ಜಾನಪದ ಕಲಾ ತಂಡಗಳ ಮೆರವಣಿಗೆಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಮೋಹನ್ ಆಳ್ವ, ಜಿಲ್ಲಾಧಿಕಾರಿ ಎಸ್.ಅಶ್ವಥಿ, ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ಮುಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಪುರಸಭಾ ಅಧ್ಯಕ್ಷೆ ಮಹಾದೇವಿ, ತಹಶೀಲ್ದಾರ್ ರೂಪ, ಜಿಪಂ ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್ ಸೇರಿದಂತೆ ಹಲವರು ಹಾಜರಿದ್ದರು.

ಜಿಲ್ಲಾ ಉತ್ಸವದ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆ: ಇನ್ನು ಕೆ.ಆರ್.ಪೇಟೆಯಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಉತ್ಸವದ ಬೃಹತ್ ವೇದಿಕೆ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ಚಾಲನೆ ನೀಡಿದರು. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಚಿವರಾದ ಕೆ.ಸಿ.ನಾರಾಯಣಗೌಡ, ಕೆ.ಗೋಪಾಲಯ್ಯ, ಜಿಲ್ಲಾಧಿಕಾರಿ ಅಶ್ವಥಿ, ಸಿಇಓ ಶಾಂತಾ ಹುಲ್ಮನಿ, ಎಸ್ಪಿ ಯತೀಶ್ ಸೇರಿದಂತೆ ಹಲವು ಅಧಿಕಾರಿಗಳು ಭಾಗವಹಿಸಿದ್ದರು.

ಉತ್ಸವದಲ್ಲಿ ಪಾಲ್ಗೊಂಡಿದ್ದ ವಿವಿಧ ಕಲಾ ತಂಡಗಳು







ಮಳವಳ್ಳಿಯಲ್ಲಿ ಬಾಲಕಿ ಹತ್ಯೆ ಖಂಡಿಸಿ ಪ್ರತಿಭಟನೆ



ಮಳವಳ್ಳಿ/ಮಂಡ್ಯ,ಅ.13– ಕಳೆದ ಮಂಗಳವಾರ ಮಳವಳ್ಳಿ ಪಟ್ಟಣದಲ್ಲಿ ಹತ್ಯೆಗೀಡಾದ ಹತ್ತು ವರ್ಷದ ಬಾಲಕಿ ದಿವ್ಯ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾದ್ಯಂತ ವ್ಯಾಪಕ ಪ್ರತಿಭಟನೆ ಮುಂದುವರಿದಿದೆ.


ನಿನ್ನೆ ವಿವಿಧ ಸಂಘ, ಸಂಸ್ಥೆಗಳು ಹಾಗೂ ಮೃತ ಬಾಲಕಿಯ ಕುಟುಂಬಸ್ಥರು ಪ್ರತಿಭಟನೆ ನಡೆಸಿ ನ್ಯಾಯಕ್ಕೆ ಆಗ್ರಹಿಸಿದ್ದರು. ಇಂದು ಸಹ ಪ್ರತಿಭಟನೆ ಮುಂದುವರೆದಿದ್ದು, ಮಳವಳ್ಳಿಯ ಮೈಸೂರು ವೃತ್ತದಲ್ಲಿ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಕೃಷಿ ಕೂಲಿಕಾರರ ಸಂಘ ಸೇರಿದಂತೆ ಹಲವು ಸಂಘ ಸಂಸ್ಥೆಗಳು ಧರಣಿ ನಡೆಸಿ, ಆರೋಪಿಗೆ ಅತಿ ಕಠಿಣ ಶಿಕ್ಷೆಯನ್ನು ಒದಗಿಸುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ನಾಯಕಿ ಸುನಂದಾ ಜಯರಾಂ, ಹತ್ತು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಮಾಡಿ ಕೊಂದಿರುವುದು ಹೇಯ ಕೃತ್ಯ. ಪಾಠ ಹೇಳುವ ಶಿಕ್ಷಕನೇ ಇಂತಹ ಕೃತ್ಯ ಮಾಡಿರುವುದು ಬೇಸರದ ಸಂಗತಿ. ಆತನಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಆಗ್ರಹಿಸಿದರು.

ಮಂಡ್ಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಐಟಿಯು ನಾಯಕಿ ಕುಮಾರಿ, ಮಳವಳ್ಳಿಯಲ್ಲಿ ಬಾಲಕಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ನಿಜಕ್ಕೂ ತಲೆತಗ್ಗಿಸುವ ಸಂಗತಿ. ಇದನ್ನು ಇಡೀ ಮಹಿಳಾ ಕುಲವೇ ಖಂಡಿಸುತ್ತದೆ. ಆರೋಪಿಗೆ ಅತಿ ಘೋರ ಶಿಕ್ಷೆಯಾಗಬೇಕೆಂದು ಆಗ್ರಹಿಸಿದರು. ಇನ್ನು ಮಳವಳ್ಳಿಯಲ್ಲಿ ಮಾತನಾಡಿದ ಕ್ಷೇತ್ರದ ಶಾಸಕ ಡಾ.ಕೆ.ಅನ್ನದಾನಿ, ನಿನ್ನೆ ನಮ್ಮ ತಾಲೂಕಿನಲ್ಲಿ ನಡೆದಿರುವ ಕೃತ್ಯ ರಾಜ್ಯಾದ್ಯಂತ ದೊಡ್ಡ ಮಟ್ಟದ ಸುದ್ದಿಯಾಗಿದೆ. ಆರೋಪಿಗೆ ಅತಿ ಕಠಿಣ ಶಿಕ್ಷೆಯಾಗುವ ನಿಟ್ಟಿನಲ್ಲಿ ತನಿಖೆ ಹಾಗೂ ವಿಚಾರಣೆಯನ್ನು ಬೇಗ ನಡೆಸುವಂತೆ ಪೊಲೀಸರಿಗೆ ಸೂಚಿಸಿದ್ದೇನೆ. ಈ ಪ್ರಕರಣವನ್ನು ಗಂಭೀರವಾಗಿ ಪೊಲೀಸ್ ಇಲಾಖೆ ತೆಗೆದುಕೊಂಡಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗುತ್ತದೆ ಎಂದರು.

ಬಾಲಕಿ ಹತ್ಯೆ ಮನುಷ್ಯತ್ವಕ್ಕೇ ಮಾರಕ

ಮಂಡ್ಯ: ಮಳವಳ್ಳಿ ಪಟ್ಟಣದಲ್ಲಿ ಹತ್ತು ವರ್ಷದ ಬಾಲಕಿ ಕೊಲೆ ಮನುಷ್ಯತ್ವಕ್ಕೆ ಮಾರಕ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.



ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಹತ್ತು ವರ್ಷದ ಬಾಲಕಿಯ ಅಮಾನುಷವಾಗಿ ಕೊಲೆ ಮಾಡಿರುವ ಘಟನೆ ಅತ್ಯಂತ ಹೇಯ ಕೃತ್ಯ. ಇಂತಹ ಘಟನೆ ಸಮಾಜಕ್ಕೆ ಕೆಟ್ಟ ಹೆಸರು ತರುತ್ತದೆ ಎಂದು ವಿಷಾದಿಸಿದ್ದಾರೆ.

ಈ ನೀಚ ಕೃತ್ಯ ಎಸಗಿದ ಪಾತಕಿಯನ್ನು ನಿರ್ದಯವಾಗಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಪೊಲೀಸರು ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟೆಚ್ಚರವಹಿಸಬೇಕು. ಮೃತ ಬಾಲಕಿ ಆತ್ಮಕ್ಕೆ ಶಾಂತಿ ಸಿಗಲಿ. ಪೋಷಕರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಹೇಳಿದ್ದಾರೆ.

ಬಾಗಿಲು ತೆರೆದ ಹಾಸನಾಂಬ ದೇವಸ್ಥಾನ
12 ದಿನ ದೇವಿ ದರ್ಶನ ಭಾಗ್ಯ



ಹಾಸನ: ಜಿಲ್ಲೆಯ ಅಧಿದೇವತೆ ಸುಪ್ರಸಿದ್ಧ ಹಾಸನಾಂಬ ದೇವಿ ಇಂದಿನಿಂದ ಭಕ್ತರಿಗೆ ದರ್ಶನ ನೀಡಲಿದ್ದು ವಿಧ್ಯುಕ್ತವಾಗಿ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಗುರುವಾರ ಮಧ್ಯಾಹ್ನ 12.14ಕ್ಕೆ ಬಾಗಿಲು ತೆರೆಯಲಾಯಿತು.

ಅಕ್ಟೋಬರ್ 13 ರಿಂದ 27 ರವರೆಗೆ ಈ ಬಾರಿ 15 ದಿನ ಬಾಗಿಲು ತೆರೆಯಲಿದ್ದು 12 ದಿನಗಳ ಕಾಲ ಹಾಸನಾಂಬೆ ಭಕ್ತರಿಗೆ ದರ್ಶನ ನೀಡಲಿದ್ದಾಳೆ. ಮೊದಲ ಹಾಗೂ ಕೊನೆಯ ದಿನ,ಮತ್ತು ಅ.25 ರಂದು ಸೂರ್ಯಗ್ರಹಣ ಇರುವುದರಿಂದ ಭಕ್ತರಿಗೆ ದೇವಿಯ ದರ್ಶನ ಇರುವುದಿಲ್ಲ. ಅಶ್ವಿಜ ಮಾಸದ ಮೊದಲ ಗುರುವಾರ ಮಧ್ಯಾಹ್ನ 12.14ಕ್ಕೆ ದೇವಿಯ ಗರ್ಭಗುಡಿ ಬಾಗಿಲು ತೆರೆಯಲಾಗಿದ್ದು, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದಲೂ ದೇವಿಯ ದರ್ಶನಕ್ಕಾಗಿ ಭಕ್ತಸಾಗರ ಹರಿದು ಬರಲಿದೆ.

ಪ್ರತೀತಿ: ದೇವಾಲಯದ ಬಾಗಿಲು ಹಾಕುವಾಗ ಹಚ್ಚಿಟ್ಟ ದೀಪ ವರ್ಷ ಪೂರ್ತಿ ಬೆಳಗುತ್ತಲೇ ಇರುತ್ತದೆ. ಮುಂದಿನ ವರ್ಷ ಬಾಗಿಲು ತೆರೆದಾಗ ದೀಪ ಬೆಳಗುತ್ತಲೇ ಇರುತ್ತದೆ. ದೇವರಿಗೆ ಇಟ್ಟ ನೈವೇದ್ಯ ಒಂದು ವರ್ಷದ ನಂತರವೂ ಹಾಗೆಯೇ ಇರುತ್ತದೆ ಎಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ದೇವಿಯ ಪವಾಡ ನೋಡಲು ಪ್ರತಿವರ್ಷ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ವರ್ಷಕ್ಕೊಮ್ಮೆ ಮಾತ್ರ ಹಾಸನಾಂಬೆ ದೇವಿ ದರ್ಶನ ಭಾಗ್ಯ ಕರುಣಿಸುತ್ತಾಳೆ. ಹೀಗಾಗಿ ಪ್ರತಿ ವರ್ಷ ಸಾವಿರಾರು ಭಕ್ತರು ದೇವಿಯ ದರ್ಶನ ಪಡೆಯಲು ಆಗಮಿಸುತ್ತಾರೆ.

ಬೆಳಗ್ಗೆ ದೇಗುಲದ ಆವರಣದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡಿತು. ಸಂಪ್ರದಾಯದಂತೆ ತಳವಾರ ವಂಶದ ನರಸಿಂಹರಾಜ್ ಅರಸ್ ಅವರು ಬಾಳೆಕಂದು ಕಡಿಯುವ ಮೂಲಕ ಬಾಗಿಲು ತೆರೆಯಲು ಅನುವು ಮಾಡಿಕೊಟ್ಟರು. ಹಾಸನಾಂಬ, ಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ದೇವಾಲಯವನ್ನು ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಪ್ರತಿದಿನ ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಾಗೂ ಮಧ್ಯಾಹ್ನ 4 ರಿಂದ ರಾತ್ರಿ 10 ರವರೆಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ವಿಶೇಷ ದರ್ಶನಕ್ಕಾಗಿ ಒಬ್ಬರಿಗೆ 300 ಹಾಗೂ 1000 ಟಿಕೆಟ್ ದರವನ್ನು ನಿಗದಿಪಡಿಸಲಾಗಿದೆ. ಜಿಲ್ಲಾಡಳಿತ ಭಕ್ತರಿಗೆ ಅಗತ್ಯವಿರುವ ಎಲ್ಲ ರೀತಿಯ ಮೂಲ ಸೌಕರ್ಯ ದೇವಾಲಯದ ಒಳಗೆ ಹಾಗೂ ಸುತ್ತಮುತ್ತ ಸಿಸಿಟಿವಿ ಕಣ್ಗಾವಲು ಇರಿಸಲಾಗಿದೆ. ದೇವಿಯ ಸುಗಮ ದರ್ಶನಕ್ಕೆ 756 ಸಿಬ್ಬಂದಿಯೊಂದಿಗೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ನ್ಯಾಯಾಧೀಶರ ಸಮ್ಮುಖದಲ್ಲಿ ಪಂಚನಾಮೆ ಬಳಿಕ ಆದಿವಾಸಿ ಕರಿಯಪ್ಪ ಮರಣೋತ್ತರ ಪರೀಕ್ಷೆ

● ಇಂದು ಹೊಸಹಳ್ಳಿ ಹಾಡಿಂಯಲ್ಲಿ ಅಂತ್ಯಕ್ರಿಯೆ ● ಆರೋಪಿಗಳ ಬಂಧಿಸದಿದ್ದರೆ ಮಿನಿ ವಿಧಾನಸೌಧ ಮುಂಭಾಗ ಶವವಿಟ್ಟು ಪ್ರತಿಭಟನೆ ಎಚ್ಚರಿಕೆ

ಮೈಸೂರು,ಅ.13(ಪಿಎಂ)– ಅರಣ್ಯ ಇಲಾಖೆ ಸಿಬ್ಬಂದಿ ವಶದಲ್ಲಿದ್ದಾಗ ಸಾವನ್ನಪ್ಪಿದ ಹೆಚ್.ಡಿ. ಕೋಟೆ ತಾಲೂಕು ಹೊಸಹಳ್ಳಿಹಾಡಿ ನಿವಾಸಿ, ಜೇನುಕುರುಬ ಸಮುದಾಯದ ಕರಿಯಪ್ಪನ(49) ಮೃತದೇಹವನ್ನು, ಗುರುವಾರ ನ್ಯಾಯಾಧೀಶರ ಸಮ್ಮುಖದಲ್ಲಿ ಪಂಚನಾಮೆ ನಡೆಸಿ, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಲಾಯಿತು.

ಇಂದು ರಾತ್ರಿ ಕರಿಯಪ್ಪ ದೇಹವನ್ನು ಹೊಸಹಳ್ಳಿ ಹಾಡಿಗೆ ತರಲಾಗಿದ್ದು, ನಾಳೆ(ಅ.14) ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಗಿರಿಜನ ಮುಖಂಡರು ತಿಳಿಸಿದ್ದಾರೆ. ಅದೇ ವೇಳೆ ಗ್ರಾಮ ಪಂಚಾಯ್ತಿ ಸದಸ್ಯ ಮಾಸ್ತಿಗುಡಿ ಅಯ್ಯಪ್ಪ, ಕರಿಯಪ್ಪನನ್ನು ಹತ್ಯೆ ಮಾಡಿರುವ ಆರೋಪಿಗಳನ್ನು ಶುಕ್ರವಾರ ಬಂಧಿಸದಿದ್ದರೆ ಅಂತ್ಯಕ್ರಿಯೆ ಮಾಡುವುದಿಲ್ಲ ಹಾಗೂ ಹೆಚ್.ಡಿ.ಕೋಟೆ ಮಿನಿ ವಿಧಾನ ಸೌಧದ ಬಳಿ ಶವವಿಟ್ಟು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಅರಣ್ಯ ಇಲಾಖೆ ಸಿಬ್ಬಂದಿ ವಶದಲ್ಲಿದ್ದಾಗಲೇ ಕರಿಯಪ್ಪ ಸಾವನ್ನಪ್ಪಿರುವುದು ಹಾಗೂ ಆರ್‌ಎಫ್‌ಓ ಸೇರಿದಂತೆ 17 ಮಂದಿ ಅರಣ್ಯ ಸಿಬ್ಬಂದಿ ವಿರುದ್ಧ ಕೊಲೆ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಶವಾಗಾರದಲ್ಲಿ ಹೆಚ್‌ಡಿ ಕೋಟೆಯ ಸಿಜೆಎಂಎಫ್‌ಸಿ ನ್ಯಾಯಾಲಯದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಎಸ್.ಎನ್.ಸುರೇಶ್ ಸಮ್ಮುಖದಲ್ಲಿ ಪಂಚನಾಮೆ ನಡೆಸಲಾಯಿತು. ದೇಹದ ಮೇಲಿನ ಗಾಯಗಳು ಹಾಗೂ ವಸ್ತ್ರದ ವಿವರಗಳನ್ನು ದಾಖಲಿಸಲಾಯಿತು. ಅಲ್ಲದೆ, ನ್ಯಾಯಾಧೀಶರ ಸಮ್ಮುಖದಲ್ಲಿ ಕುಟುಂಬಸ್ಥರ ಹೇಳಿಕೆಗಳನ್ನು ದಾಖಲಿಸಿಕೊಳ್ಳುವ ಜೊತೆಗೆ ಈ ಎಲ್ಲಾ ಪ್ರಕ್ರಿಯೆಗಳನ್ನು ವೀಡಿಯೋ ರೆಕಾರ್ಡ್ ಮಾಡಿಕೊಳ್ಳಲಾಯಿತು.



ಶವಾಗಾರದ ಎದುರು ಕೆಲಕಾಲ ಆದಿವಾಸಿ ಮುಖಂಡರು ಪ್ರತಿಭಟನೆ ನಡೆಸಿದರು.

ಕರಿಯಪ್ಪನ ಮಕ್ಕಳಾದ ಸತೀಶ್, ಕುಮಾರಿ ಹಾಗೂ ಸವಿತಾ ಸೇರಿದಂತೆ ಸಂಬಂಧಿಕರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದಕ್ಕೆ ಜನ ಸಂಗ್ರಾಮ ಪರಿಷತ್ ರಾಜ್ಯ ಉಪಾಧ್ಯಕ್ಷ ಹಾಗೂ ಮಾನವ ಹಕ್ಕುಗಳ ಹೋರಾಟಗಾರ ಪ್ರಸನ್ನ ಸೇರಿದಂತೆ ಮೂವರು ಸಾಕ್ಷ್ಯದಾರರಾದರು.

ಬಳಿಕ ಮೈಸೂರು ವೈದ್ಯಕೀಯ ಕಾಲೇಜಿನ ಇಬ್ಬರು ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆ ಮಾಡಿದ ನಂತರ ಹುಣಸೂರು ಡಿವೈಎಸ್‌ಪಿ ರವಿಪ್ರಸಾದ್ ನೇತೃತ್ವದಲ್ಲಿ ಎಲ್ಲಾ ಕಾನೂನಾತ್ಮಕ ಪ್ರಕ್ರಿಯೆ ಪೂರ್ಣಗೊಳಿಸಿ, ಕುಟುಂಬಸ್ಥರಿಗೆ ದೇಹವನ್ನು ಒಪ್ಪಿಸಲಾಯಿತು.

ಇದಕ್ಕೂ ಮುನ್ನ ಸ್ಥಳಕ್ಕೆ ಭೇಟಿ ನೀಡಿದ್ದ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಬಿ.ಮಾಲತಿ, ಇಲಾಖೆಯಿಂದ ಪರಿಹಾರ ನೀಡುವ ಸಂಬಂಧ ಮೃತನ ಕುಟುಂಬಸ್ಥರ ಮಾಹಿತಿ ಪಡೆದರು. ಅಲ್ಲದೆ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಪ್ರಭಾ ಅರಸ್ ಸಹ ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಪಡೆದರು. ಇಂದು ಮಧ್ಯಾಹ್ನ 2ರ ಸುಮಾರಿಗೆ ಮರಣೋತ್ತರ ಪರೀಕ್ಷೆ ಆರಂಭಿಸಿ, ಸಂಜೆ 6.15ರ ವೇಳೆಗೆ ಪ್ರಕ್ರಿಯೆ ಪೂರ್ಣಗೊಳಿಸಿ, ಮೃತದೇಹವನ್ನು ಕುಟುಂಬಸ್ಥರಿಗೆ ಒಪ್ಪಿಸಲಾಯಿತು.

ಇಂದು ಬೆಳಗ್ಗೆ ಶವಾಗಾರಕ್ಕೆ ಭೇಟಿ ನೀಡಿದ್ದ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಮಾಧ್ಯಮದವರೊಂದಿಗೆ ಮಾತನಾಡಿ, ಇದೊಂದು ಅಮಾನವೀಯ ಘಟನೆ. ಈ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಬೇಕು. ಅರಣ್ಯ ಇಲಾಖೆ ಸಿಬ್ಬಂದಿ ವಶದಲ್ಲಿದ್ದಾಗಲೇ ಕರಿಯಪ್ಪ ಮೃತಪಟ್ಟಿರುವ ಕಾರಣ ಅರಣ್ಯ ಇಲಾಖೆಯೇ ಜವಾಬ್ದಾರಿ ಹೊರಬೇಕಾಗುತ್ತದೆ. ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಮೃತನ ಕುಟುಂಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡುವ ಜೊತೆಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಸ್ಥಳಕ್ಕೆ ಭೇಟಿ ನೀಡಿದ್ದ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ, ಮಾಧ್ಯಮದವರೊಂದಿಗೆ ಮಾತನಾಡಿ, ಕರಿಯಪ್ಪನ ಕುಟುಂಬಕ್ಕೆ ಸರ್ಕಾರ 50 ಲಕ್ಷ ರೂ. ಪರಿಹಾರ ನೀಡಬೇಕು. ಅಲ್ಲದೆ, ಕುಟುಂಬ ಸದಸ್ಯರೊಬ್ಬರಿಗೆ ಸರ್ಕಾರಿ ಉದ್ಯೋಗ ಕೊಡಬೇಕು. ಜೊತೆಗೆ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಇಲ್ಲದಿದ್ದರೆ ನಮ್ಮ ಸಂಘದ ವತಿಯಿಂದ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆ ನಡೆಸಿ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ

ಮೈಸೂರು,ಅ.13(ಪಿಎಂ)– ಮರಣೋತ್ತರ ಪರೀಕ್ಷೆ ಪೂರ್ಣಗೊಳ್ಳುವ ವೇಳೆಗೆ ಮೂಲ ಆದಿವಾಸಿ ರಕ್ಷಣಾ ವೇದಿಕೆ ವತಿಯಿಂದ ಶವಾಗಾರದ ಆವರಣದಲ್ಲಿ ಸಾಂಕೇತಿಕ ಪ್ರತಿಭಟನೆ ನಡೆಸಿ, ದೌರ್ಜನ್ಯ ನಡೆಸಿದ ಅರಣ್ಯ ಇಲಾಖೆಯವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ವೇದಿಕೆ ರಾಜ್ಯಾಧ್ಯಕ್ಷ ಮೋಹನ್ ಗೋಪಾಲ ಪೂಜಾರಿ ನೇತೃತ್ವದಲ್ಲಿ ಆದಿವಾಸಿ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿದರು. ಪ್ರಕರಣ ಸಂಬಂಧ ಶೀಘ್ರ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ವಿಫಲವಾಗಿದೆ. ಇಂತಹ ಗಂಭೀರ ಸ್ವರೂಪದ ಪ್ರಕರಣದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅರಣ್ಯ ಇಲಾಖೆಯಿಂದ ಆ ಭಾಗದಲ್ಲಿ ನಿರಂತರವಾಗಿ ಆದಿವಾಸಿಗಳ ಮೇಲೆ ದೌರ್ಜನ್ಯ ನಡೆಸುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರ ಸೂಕ್ತ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಉಗ್ರರ ಜೊತೆ ಕಾದಾಟದಲ್ಲಿ ಗಾಯಗೊಂಡಿದ್ದ ಭಾರತೀಯ ಸೇನೆಯ ಶ್ವಾನ 'ಜೂಮ್' ಸಾವು

ಶ್ರೀನಗರ: ಉಗ್ರರ ವಿರುದ್ಧದ ಹೋರಾಟದಲ್ಲಿ ಗಾಯಗೊಂಡು ಸಾವು ಬದುಕಿನ ನಡುವೆ ಹೋರಾಟ ನಡೆಸಿದ ಭಾರತೀಯ ಸೇನೆಯ ಶ್ವಾನ ಜೂಮ್ ಗುರುವಾರ ಸಾವನ್ನಪ್ಪಿದೆ.

ಎರಡು ಬಾರಿ ಉಗ್ರರಿಂದ ಗುಂಡೇಟು ತಿಂದಿದ್ದ ಈ ಶ್ವಾನವನ್ನು ಶ್ರೀನಗರದ ಸಶಸ್ತ್ರ ಪಡೆಗಳ ಪಶು ವೈದ್ಯಕೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮುಖ ಮತ್ತು ಹಿಂಭಾಗದ ಬಲಗಾಲಿನ ಮೇಲೆ ಗುಂಡಿನ ಗಾಯವಾಗಿದ್ದ ಕಾರಣ ಅದಕ್ಕೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಚಿಕಿತ್ಸೆ ಪಡೆಯುತ್ತಿದ್ದ ನಮ್ಮ ಸೇನೆಯ ಶ್ವಾನ ಇಂದು ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ಸಾವನ್ನಪ್ಪಿದೆ. ಬೆಳಗ್ಗೆ 11–45ರವರೆಗೂ ನೋಡಲು ಚೆನ್ನಾಗಿದ್ದ, ಸ್ಪಂದಿಸುತ್ತಿದ್ದ ಶ್ವಾನ, ಇದಕ್ಕಿದ್ದಂತೆ ಏದುಸಿರು ಬಿಡುತ್ತಾ, ಕೆಳಗೆ ಬಿದ್ದಿತು ಎಂದು ಸೇನಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉಗ್ರರು ಅಡಗಿರುವ ಮನೆಯಿಂದ ಆ ಉಗ್ರರನ್ನು ಹೊರಗೆ ಕರೆತರುವ ಕೆಲಸವನ್ನು ಜೂಮ್ ನಾಯಿಗೆ ವಹಿಸಲಾಗಿತ್ತು. ಆ ನಾಯಿ ಮನೆಯೊಳಗೆ ಹೋಗಿ ಉಗ್ರರ ಮೇಲೆ ದಾಳಿ ಮಾಡಿತ್ತು. ಈ ಕಾರ್ಯಾಚರಣೆಯ ಸಮಯದಲ್ಲಿ ಆ ನಾಯಿಯ ಮೇಲೆ ಎರಡು ಬಾರಿ ಗುಂಡಿನ ದಾಳಿ ನಡೆಸಿದ್ದರಿಂದ ನಾಯಿಗೆ ಗಂಭೀರವಾದ ಗಾಯವಾಗಿತ್ತು. ಗುಂಡಿನ ದಾಳಿಯಲ್ಲಿ ಗಾಯಗೊಂಡಿದ್ದರೂ ಈ ನಾಯಿ ತನ್ನ ಕಾರ್ಯವನ್ನು ಮುಂದುವರೆಸಿತು. ಜೂಮ್ ನಿಧನಕ್ಕೆ ಸೇನೆಯ ಉತ್ತರ ಕಮಾಂಡೋ ತೀವ್ರ ಸಂತಾಪ ಸೂಚಿಸಿದೆ.

ಎನ್‌ಆರ್ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಿಸಿ

ಮೈಸೂರು ಜಿಲ್ಲಾಧಿಕಾರಿಗಳಿಗೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮನವಿ

ಮೈಸೂರು, ಅ.13(ಪಿಎಂ)– ಮೈಸೂರು ನಗರದ ನರಸಿಂಹರಾಜ ವಿಧಾನಸಭಾ ಕ್ಷೇತ್ರದ (ಎನ್‌ಆರ್ ಕ್ಷೇತ್ರ) ಸಂಕ್ಷಿಪ್ತ ಮತದಾರರ ಪಟ್ಟಿ ಪರಿಷ್ಕರಣೆಯ ವಿಶೇಷ ಸಮೀಕ್ಷಾ ಕಾರ್ಯಕ್ರಮ ನಡೆಸಿ ಸಂಪೂರ್ಣ ದೋಷ ಮುಕ್ತ ಮತದಾರರ ಪಟ್ಟಿ ಸಿದ್ಧಪಡಿಸಬೇಕೆಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿಯವರಿಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ಅಲ್ಪಸಂಖ್ಯಾತರು ಹಾಗೂ ಬಡತನ ರೇಖೆಗಿಂತ ಕೆಳವರ್ಗದ ಜನರೇ ಹೆಚ್ಚಾಗಿ ಎನ್‌ಆರ್ ಕ್ಷೇತ್ರದಲ್ಲಿ ವಾಸವಾಗಿದ್ದಾರೆ. ಇಲ್ಲಿ ಸುಶಿಕ್ಷಿತ ಮತದಾರರ ಸಂಖ್ಯೆ ಕಡಿಮೆ ಇದ್ದು, ದೋಷದಿಂದ ಕೂಡಿದ ಮತದಾರರ ಪಟ್ಟಿಯಿಂದ ಚುನಾವಣಾ ಸಂದರ್ಭದಲ್ಲಿ ಸಾಕಷ್ಟು ಅಕ್ರಮಗಳು ಈ ಕ್ಷೇತ್ರದಲ್ಲಿ ನಡೆಯುತ್ತಿದೆ. ಇದು ಕ್ಷೇತ್ರದ ಅಭಿವೃದ್ಧಿಗೆ ಮಾರಕವಾಗಿದೆ. ಮೂರ್ನಾಲ್ಕು ದಶಕಗಳಿಂದ ಒಂದೇ ಕುಟುಂಬದ ಅಭ್ಯರ್ಥಿ ಇಲ್ಲಿ ಚುನಾಯಿತರಾಗುತ್ತಿದ್ದಾರೆ.



ಕ್ಷೇತ್ರದಲ್ಲಿ ವಾಸವಿಲ್ಲದ ಹೊರಗಿನವರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವುದು ಹಾಗೂ ಸ್ಥಳೀಯರನ್ನು ಪಟ್ಟಿಯಿಂದ ತೆಗೆದು ಹಾಕಿ ಅವರನ್ನು ಮತದಾನದಿಂದ ಹೊರಗಿಡುವ ಕೆಲಸ ಮಾಡಲಾಗುತ್ತಿದೆ. ಎನ್‌ಆರ್ ಕ್ಷೇತ್ರದಲ್ಲಿ ಸಂಕ್ಷಿಪ್ತ ಮತದಾರರ ಪಟ್ಟಿ ಪರಿಷ್ಕರಣೆಯ ವಿಶೇಷ ಸಮೀಕ್ಷಾ ಕಾರ್ಯಕ್ರಮ ನಡೆಸಿ, ಸಂಪೂರ್ಣ ದೋಷ ಮುಕ್ತ ಮತದಾರರ ಪಟ್ಟಿ ಸಿದ್ಧಪಡಿಸಬೇಕು.

ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಹೆಸರುಗಳನ್ನು ಕೈ ಬಿಡುವ ಹಾಗೂ ಸೇರ್ಪಡೆ ಮಾಡಿಕೊಳ್ಳುವ ಮುನ್ನ ಮತ್ತೊಮ್ಮೆ ಆ ಮನೆಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿ ದೃಢಪಡಿಸಿಕೊಳ್ಳಬೇಕು. ಚುನಾವಣೆ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಮತದಾರರಿಗೆ ಗೊಂದಲ ಅಥವಾ ಯಾವುದೇ ವ್ಯತ್ಯಯ ಉಂಟಾದಲ್ಲಿ ಆಯಾ ಬಿಎಲ್‌ಓಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಬೇಕು. ಚುನಾವಣೆ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರರ ಪಾತ್ರ ಅತ್ಯಂತ ಪ್ರಾಮುಖ್ಯತೆ ಹೊಂದಿದ್ದು, ಅರ್ಹ ಎಲ್ಲಾ ಮತದಾರರನ್ನು ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕು. ಜೊತೆಗೆ ಅನರ್ಹ ಮತದಾರರನ್ನು ಪಟ್ಟಿಯಿಂದ ಕೈಬಿಡಬೇಕು. ಸಂಪೂರ್ಣ ದೋಷ ಮುಕ್ತ ಮತದಾರರ ಪಟ್ಟಿ ತಯಾರಿಸುವ ಮೂಲಕ ಮತದಾರರು ಮುಕ್ತ, ನ್ಯಾಯಸಮ್ಮತ ಮತ್ತು ಶಾಂತಿಯುತ ಚುನಾವಣೆಯಲ್ಲಿ ಭಾಗವಹಿಸಿ ನಿರ್ಭಯವಾಗಿ ಧರ್ಮ, ಜಾತಿ, ಜನಾಂಗ, ಸಮುದಾಯ, ಭಾಷೆ ಅಥವಾ ಯಾವುದೇ ಪ್ರಚೋದನೆಗೆ ಒಳಗಾಗದೇ ಮತ ಚಲಾಯಿಸುವಂತಹ ವಾತಾವರಣ ಕಲ್ಪಿಸಬೇಕೆಂದು ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ಚಿನ್ನದ ಸರ, ಓಲೆ ದೋಚಿದ್ದ ವ್ಯಕ್ತಿ ಬಂಧನ

ಮಡಿಕೇರಿ,ಅ.13– ಹಾಡಹಗಲೇ ಮನೆಗೆ ನುಗ್ಗಿ ಗೃಹಿಣಿಯ ಕುತ್ತಿಗೆಯಲ್ಲಿದ್ದ ಚಿನ್ನದ ಚೈನ್ ಮತ್ತು ಕಿವಿಯೋಲೆಯನ್ನು ಕಿತ್ತು ಪರಾರಿಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಡಿಕೇರಿ ನಗರ ಪೊಲೀಸರು ಓರ್ವ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮೂಲತಃ ಪಟಾಣಿ ನಗರ ನಿವಾಸಿ ಲೋಕೇಶ್(37) ಬಂಧಿತ ಆರೋಪಿ. ಈತನಿಂದ 3 ಲಕ್ಷ ರೂ. ವೌಲ್ಯದ 60 ಗ್ರಾಂ ಚಿನ್ನದ ಸರ, ಕಿವಿ ಓಲೆಯನ್ನು ವಶಕ್ಕೆ ಪಡೆಯಲಾಗಿದೆ.

ಮಂಗಳವಾರ ಮಧ್ಯಾಹ್ನ ವೇಳೆ ಕೋಟೆ ಹಿಂಭಾಗದ ರಸ್ತೆಯ ಒಂಟಿ ಮನೆಯಲ್ಲಿದ್ದ ಗೃಹಿಣಿ ಕುತ್ತಿಗೆಯಿಂದ ಚಿನ್ನದ ಚೈನ್ ಮತ್ತು ಓಲೆ ಕದ್ದು ಪರಾರಿಯಾಗಿದ್ದ. ಪೊಲೀಸರು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕೊಡಗಿನ ಗ್ರಾಮೀಣ ಇತಿಹಾಸದ ದಾಖಲೀಕರಣ ಅಗತ್ಯ

ಮುಂಬೈ ವುಮೆನ್ಸ್ ಯೂನಿವರ್ಸಿಟಿಯ ರಿಸರ್ಚ್ ಸೆಂಟರ್ ಫಾರ್ ವುಮೆನ್ಸ್ ಸ್ಟಡೀಸ್‌ನ ನಿರ್ದೇಶಕಿ ಡಾ.ನೆರವಂಡ ವೀಣಾ ಪೂಣಚ್ಚ ಅನಿಸಿಕೆ

ಮಡಿಕೇರಿ,ಅ.13– ಕೊಡಗಿನ ಪೂರ್ವದ 'ಗ್ರಾಮೀಣ ಇತಿಹಾಸ'ದ ದಾಖಲೀಕರಣಕ್ಕೆ ಅಗತ್ಯ ಪ್ರಯತ್ನಗಳು ನಡೆಯಬೇಕೆಂದು ಮುಂಬೈ ವುಮೆನ್ಸ್ ಯೂನಿವರ್ಸಿಟಿಯ ರಿಸರ್ಚ್ ಸೆಂಟರ್ ಫಾರ್ ವುಮೆನ್ಸ್ ಸ್ಟಡೀಸ್‌ನ ನಿರ್ದೇಶಕಿ ಡಾ.ನೆರವಂಡ ವೀಣಾ ಪೂಣಚ್ಚ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

ನಗರದ ಕೊಡವ ಸಮಾಜದ ಸಭಾಂಗಣದಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಮಡಿಕೇರಿ ಕೊಡವ ಸಮಾಜದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಸಾಹಿತ್ಯ ಪಿಂಞ ಸಂಶೋಧನಾ ನಾಳ್' ಕಾರ್ಯಕ್ರಮದಲ್ಲಿ ಹತ್ತು ಪುಸ್ತಕಗಳ ಅನಾವರಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಸ್ತುತ ಲಭ್ಯವಿರುವ ಎಲ್ಲಾ ಇತಿಹಾಸಗಳು ರಾಜ ವಂಶಸ್ಥರು, ರಾಜರು ಮತ್ತು ಅವರ ಆಳ್ವಿಕೆಯ ಮಾಹಿತಿಗಳನ್ನು ಒದಗಿಸುತ್ತವೆ. ಆದರೆ, ನಮ್ಮ ಹಿಂದಿನ ಗ್ರಾಮೀಣ ಪ್ರದೇಶದ ಪೂರ್ವಜರ ಬದುಕು, ಪರಂಪರೆಗಳ ಇತಿಹಾಸವನ್ನು ದಾಖಲಿಸುವ ಪ್ರಯತ್ನಗಳು ನಡೆದಿಲ್ಲವೆಂದು ವಿಷಾಧಿಸಿದರು. ಈ ಹಿನ್ನೆಲೆ ಗ್ರಾಮೀಣ ಸಂಸ್ಕೃತಿ, ಪರಂಪರೆ, ಹಿಂದಿನ ದಿನಮಾನಗಳಿಗೆ ಸಂಬಂಧಿಸಿದಂತೆ ಅಲಿಖಿತವಾಗಿ ಒಬ್ಬರಿಂದ–ಒಬ್ಬರಿಗೆ ಹರಿದು ಬಂದ ವಿಚಾರಗಳನ್ನು ಸಂಶೋಧನಾತ್ಮಕ ದೃಷ್ಟಿಕೋನದಿಂದ ಸಂಗ್ರಹಿಸಬೇಕು. ಆ ಮೂಲಕ ಗ್ರಾಮೀಣ ಇತಿಹಾಸವನ್ನು ಕಂಡು ಕೊಳ್ಳುವ ಪ್ರಯತ್ನ ಮುನ್ನೆಲೆಗೆ ಬರಬೇಕಾಗಿದೆ ಎಂದು ಡಾ.ನೆರವಂಡ ವೀಣಾ ಪೂಣಚ್ಚ ಅನಿಸಿಕೆ ವ್ಯಕ್ತಪಡಿಸಿದರು.



ಪುಸ್ತಕಗಳ ಅನಾವರಣ: ಸಮಾರಂಭದಲ್ಲಿ ಕಾಟಿಮಾಡ ಜಿಮ್ಮಿ ನಾಣಯ್ಯ ಅವರು ರಚಿಸಿರುವ 'ಅಪ್ಪಚ್ಚಕವಿ ವಿದ್ಯಾಲಯ ಪ್ರಜ್ವಲ್ ಮೆಮೋರಿಯಲ್ ಮ್ಯೂಸಿಯಂ', ಉಳುವಂಗಡ ಕಾವೇರಿ ಉದಯ ಅವರ 'ಕಾವೇರಿ ಮಡ್‌ಲ್', ಚೊಟ್ಟೆಯಂಡಮಾಡ ಲಲಿತ ಕಾರ್ಯಪ್ಪರ 'ಎದೆರಾಳ್‌ತ್ ಬೀಂದ ಪೂ', ಚಾಚಮ್ಮಂಡ ಗೌರಮ್ಮ ಮಾದಮ್ಮಯ್ಯ ಅವರ 'ಕೊಡಗ್‌ನ ಧಾರ್ಮಿಕ ಕೇಂದ್ರ ಪಿಂಞ ನಮ್ಮೆ ನಾಳ್', ಬಡಕಡಮ್ಮಂಡ ಕಸ್ತೂರಿ ಗೋವಿಂದಮ್ಮಯ್ಯನವರ 'ಪುರುಷೋತ್ತಮ ಶ್ರೀ ರಾಮ', ತೇಲಪಂಡ ಕವನ್ ಕಾರ್ಯಪ್ಪರ 'ಕೊಡವ ಪಿಂಞ ಕೊಡವ ಭಾಷಿಕಂಗಡ ಮನೆಪೆದ', ಕಂಬೇಯಂಡ ಡೀನಾ ಬೋಜಣ್ಣ ಅವರ 'ಕೊಡವ ರಿಚುವಲ್ಸ್ ಅಂಡ್ ಟ್ರೆಡೀಷನ್ಸ್ ಎ ಸ್ಟಡಿ', ಕುಪ್ಪಂಡ ಈಶ್ವರಿ ಅವರ 'ಐಡೆಂಟಿಟಿ ಆಫ್ ಕೊಡಗು ವಿತ್ ಸ್ಪೆಷಲ್ ರೆಫರೆನ್ಸ್ ಟು ಹಾಕಿ ಅಂಡ್ ಮಿಲಿಟರಿ ಟ್ರೆಡೀಷನ್', ಡಾ. ಬೊಡುಕುಟ್ಟಡ ರಾಧಿಕ ಕುಟ್ಟಪ್ಪರವರ 'ಪನ್ನಂಗಾಲತಮ್ಮೆ ಮತ್ತು ಕೆಂಬಟ್ಟಿ ಸಮುದಾಯ–ಆಚರಣೆ ಮತ್ತು ಅನನ್ಯತೆ', ಚಂಗಂಡ ಪೊನ್ನಣ್ಣ ಅವರ 'ಇನ್‌ಕ್ಲೂಷನ್ ಆಫ್ ಕೊಡವ ಲ್ಯಾಂಗ್ವೇಜ್ ಇನ್ ದಿ ಏಯ್ತ್ ಷೆಡ್ಯೂಲ್ ಆಫ್ ಇಂಡಿಯನ್ ಕಾನ್‌ಸ್ಟಿಟ್ಯೂಷನ್', ಕೊಕ್ಕಂಡ ರಿನಿ ಚಿಣ್ಣಪ್ಪ ಅವರ 'ಸರಿತಾ ಮಂದಣ್ಣಾಸ್ ಟೈಗರ್ ಹಿಲ್ಸ್ ವುಮೆನ್ ಇನ್ ರಿಸಿಸ್ಟೆನ್ಸ್', ಮೊಣ್ಣಂಡ ಶೋಭಾ ಸುಬ್ಬಯ್ಯ ಅವರ 'ದಿ ಕಲ್ಚರ್ ಅಂಡ್ ಟ್ರೆಡೀಷನ್ ಆಫ್ ಕೊಡವ', ಅಮ್ಮಣಿಚಂಡ ಪ್ರವೀಣ್ ಚಂಗಪ್ಪ ಅವರ ಕೆಂಗಳಮೆ ಕಿಗ್ಗಟ್ಟ್ ಮಾದೇವಡ ತಿರಿಕೆ', ನಾಳಿಯಮ್ಮಂಡ ಅನಿತಾ ಕುಮಾರಿ ಅವರ' ಕೊಡಗಿನ ನಾಟಿ ವೈದ್ಯರು' ಹಾಗೂ ಡಾ. ನೆರವಂಡ ವೀಣಾ ಪೂಣಚ್ಚ ಮಡೇಯಂಡ ಅಶ್ವಿನಿ ಶಶಿಧರ್, ಮಂದಪಂಡ ಶಶಿಕಲಾ ಅವರು ಜೊತೆಯಾಗಿ ರಚಿಸಿದ 'ಗ್ಲಿಂಪ್ಸಸ್ ಆಫ್ ದಿ ಹಿಸ್ಟರಿ ಅಂಡ್ ಕಲ್ಚರ್ ಆಫ್ ಕೊಡಗು' ಪುಸ್ತಕಗಳನ್ನು ಮತ್ತು ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ ಪೊಂಗುರಿಯನ್ನು ಅನಾವರಣಗೊಳಿಸಲಾಯಿತು. ಇದೇ ಸಂದರ್ಭ ಕೃತಿಕಾರರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಡಾ.ಅಮ್ಮಾಟಂಡ ಪಾರ್ವತಿ ಅಪ್ಪಯ್ಯ, ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ, ಅಕಾಡೆಮಿ ಮಾಜಿ ಅಧ್ಯಕ್ಷೆ ಐಮುಡಿಯಂಡ ರಾಣಿ ಮಾಚಯ್ಯ, ಅಕಾಡೆಮಿ ರಿಜಿಸ್ಟ್ರಾರ್ ಅಜ್ಜಿಕುಟ್ಟೀರ ಸಿ.ಗಿರೀಶ್ ಉಪಸ್ಥಿತರಿದ್ದರು.

ಚಾ.ನಗರದಲ್ಲಿ ಪೊಲೀಸರ ಭಾರೀ ಕಾರ್ಯಾಚರಣೆ

● ಹೆಲ್ಮೆಟ್ ಧರಿಸಿದವರ ಮಾತ್ರ ಪರಿಶೀಲನೆ ● ಲೈಸೆನ್ಸ್, ಇನ್ಸೂರೆನ್ಸ್ ಇತರೆ ದಾಖಲಾತಿ ಪರಿಶೀಲನೆ ಇಲ್ಲ ● ಹೆಲ್ಮೆಟ್ ಧರಿಸದ ವಾಹನ ಚಾಲಕರಿಗೆ ದಂಡ

ಚಾಮರಾಜನಗರ ಅ.13– ನಗರದ ಜೋಡಿರಸ್ತೆಯಲ್ಲಿ ಇರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ (ಎಸ್ಪಿ ಕಚೇರಿ) ಕಚೇರಿ ಮುಂದೆಯೇ ಯುವಕರಿಬ್ಬರು ಬೈಕ್‌ನಲ್ಲಿ ವೀಲ್ಹಿಂಗ್ ಮಾಡಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ವಿಷಯ ಇದೀಗ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದು, ಪೊಲೀಸರು ವ್ಯಾಪಕ ಕಾರ್ಯಾಚರಣೆಗೆ ಇಳಿದಿದ್ದಾರೆ.

ದಸರಾ ಮಹೋತ್ಸವದ ಸಂದರ್ಭದಲ್ಲಿ ಜೋಡಿರಸ್ತೆಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಈ ವೇಳೆ ರಾತ್ರಿ ವೇಳೆ ಯುವಕರಿಬ್ಬರು ಬೈಕ್‌ನಲ್ಲಿ ವೀಲ್ಹಿಂಗ್ ಮಾಡಿದ್ದಾರೆ. ಅದು ಎಸ್ಪಿ ಕಚೇರಿ ಮುಂದೆಯೇ! ಈ ದೃಶ್ಯವನ್ನು ಸೆರೆ ಹಿಡಿದವರು ಸಾಮಾಜಿಕ ಜಾಲತಾಣಗಳಿಗೆ ಬಿಟ್ಟು ಪೊಲೀಸರ ಕಾರ್ಯವೈಖರಿ ಬಗ್ಗೆ ಕಿಡಿಕಾರಿದ್ದರು. ಈ ವಿಷಯ ಬಾಯಿಂದ ಬಾಯಿಗೆ ಹರಡುತ್ತಾ, ಸಾಮಾಜಿಕ ಜಾಲತಾಣಗಳು ಹಾಗೂ ವಾಟ್ಸಾಪ್ ಗ್ರೂಪ್‌ಗಳಲ್ಲಿ ಹೆಚ್ಚು ಹರಿದಾಟಿತ್ತು. ಪ್ರಜ್ಞಾವಂತ ನಾಗರಿಕರು ಜಿಲ್ಲೆಯ ಪೊಲೀಸರ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಮತ್ತೆ ಕೆಲವರು ಪೊಲೀಸರ ವೈಫಲ್ಯಗಳ ಬಗ್ಗೆ ಕಿಡಿಕಾರಿದ್ದರು.



ನಗರದ ಸಂತೇಮರಹಳ್ಳಿ ವೃತ್ತದ ಬಳಿ ಇತ್ತೀಚೆಗೆ ಸೈಕಲ್‌ನಲ್ಲಿ ವೀಲ್ಹಿಂಗ್ ಮಾಡುತ್ತಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಸಮುದಾಯಗಳ ನಡುವೆ ಗಲಾಟೆ ನಡೆದು ಪ್ರಕ್ಷುಬ್ದ ವಾತಾವರಣ ನಿರ್ಮಾಣ ಆಗಿದ್ದನ್ನು ಕೆಲವರು ಪ್ರಸ್ತಾಪಿಸಿ, ವೀಲ್ಹಿಂಗ್ ಕಡಿವಾಣ ಹಾಕುವಂತೆ ಒತ್ತಾಯಿಸಿದರು.

ಕಾರ್ಯಾಚರಣೆಗೆ ಇಳಿದ ಪೊಲೀಸರು: ನಗರದ ಎಸ್ಪಿ ಕಚೇರಿ ಮುಂದೆಯೇ ಯುವಕರು ವೀಲ್ಹಿಂಗ್ ಮಾಡಿರುವ ವಿಷಯ ಬಹಿರಂಗ ಆಗುತ್ತಿದ್ದಂತೆಯೇ ಪೊಲೀಸ್ ಇಲಾಖೆ ನಗರದಲ್ಲಿ ಗುರುವಾರ ವ್ಯಾಪಕ ಕಾರ್ಯಾಚರಣೆಗೆ ಇಳಿಯಿತು. ಜಿಲ್ಲೆಯ ಬಹುತೇಕ ಠಾಣೆಗಳಿಂದ ಹಿರಿಯ ಅಧಿಕಾರಿಗಳನ್ನು ನಗರಕ್ಕೆ ಕರೆಸಿಕೊಂಡು ನಗರದ ಎಲ್ಲೆಡೆ ಬೈಕ್‌ಗಳನ್ನು ತಪಾಸಣೆ ಮಾಡಲಾಯಿತು.

ನಗರದ ಭುವನೇಶ್ವರಿ ವೃತ್ತ, ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಮುಂಭಾಗ, ಸಂಪಿಗೆ ರಸ್ತೆ, ಗುಂಡ್ಲುಪೇಟೆ ವೃತ್ತ, ಜೋಡಿರಸ್ತೆ, ಡಿವೈಎಸ್ಪಿ ಕಚೇರಿ ಮುಂದೆ, ಸಂತೇಮರಹಳ್ಳಿ ವೃತ್ತ ಸೇರಿದಂತೆ ಬಹುತೇಕ ಕಡೆಗಳಲ್ಲಿ ಬೈಕ್‌ಗಳನ್ನು ತಪಾಸಣೆ ಮಾಡಲಾಯಿತು. ಇಷ್ಟು ರಸ್ತೆಗಳಲ್ಲಿ ಒಂದೇ ದಿನ ಅದರಲ್ಲೂ ಒಂದೇ ಸಮಯದಲ್ಲಿ ತಪಾಸಣೆ ನಡೆಸಿದ್ದು ವಿಶೇಷವಾಗಿತ್ತು.

ಪೊಲೀಸರ ವ್ಯಾಪಕ ಕಾರ್ಯಾಚರಣೆ ವಿಷಯ ತಿಳಿದ ಕೆಲ ಬೈಕ್ ಸವಾರರು ಸಣ್ಣ ಸಣ್ಣ ರಸ್ತೆಗಳಲ್ಲಿ ಸಂಚರಿಸಿದ್ದು ಕಂಡು ಬಂತು. ಮತ್ತೆ ಕೆಲವರು ಪೊಲೀಸರ ಕೈಗೆ ಸಿಕ್ಕಿ ಬಿದ್ದು ದಂಡ ತೆತ್ತರು. ಯಾರೋ ಯುವಕರು ವೀಲ್ಹಿಂಗ್ ಮಾಡಿದರು ಎಂಬ ಕಾರಣಕ್ಕೆ ಪೊಲೀಸರು ಇಷ್ಟರ ಮಟ್ಟಕ್ಕೆ ಕಾರ್ಯಾಚರಣೆಗೆ ಇಳಿಯಬಾರದಿತ್ತು. ವೀಲ್ಹಿಂಗ್ ಮಾಡಿದವರನ್ನು ಪತ್ತೆ ಹಚ್ಚಿ ಅವರ ಮೇಲೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕಿತ್ತು. ಈ ಕೆಲಸವನ್ನು ಮಾಡದೇ ಎಲ್ಲಾ ಬೈಕ್ ಸವಾರರನ್ನು ತಪಾಸಣೆಗೆ ಒಳಪಡಿಸಿದ್ದು ಸರಿಯಾದ ಕ್ರಮವಲ್ಲ ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದದ್ದು ಕೇಳಿ ಬಂತು.

ಪೊಲೀಸರು ಈ ತಪಾಣೆಗೆ ಹೆಲ್ಮೆಟ್ ರಹಿತ ವಾಹನ ಸವಾರರಿಗೆ ಮಾತ್ರ ಸೀಮಿತವಾಗಿತ್ತು. ವಾಹನ ಪರವಾನಗಿ, ವಾಹನಾ ಅರ್ಹತಾ ಪತ್ರ, ಇನ್ಸೂರೆನ್ಸ್ ಸೇರಿದಂತೆ ಇತರ ದಾಖಲೆಗಳನ್ನು ಪರಿಶೀಲಿಸುವ ಕಾರ್ಯವನ್ನು ಪೊಲೀಸರು ಮಾಡದೇ ಇರುವುದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ನಗರದಲ್ಲಿ ಇತ್ತೀಚೆಗೆ ಹೆಚ್ಚಾಗಿರುವ ವೀಲ್ಹಿಂಗ್‌ಗೆ ಕಡಿವಾಣ ಹಾಕಬೇಕು. ವೀಲ್ಹಿಂಗ್‌ನಲ್ಲಿ ತೊಡಗುವವರನ್ನು ಪತ್ತೆ ಹಚ್ಚಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಯನ್ನು ನಾಗರಿಕರ ಒತ್ತಾಯಿಸಿದ್ದಾರೆ.

ಹುಟ್ಟೂರು ತಲುಪಿದ ಯೋಧನ ಪಾರ್ಥೀವ ಶರೀರ

ಕೊಡವ ಸಂಪ್ರದಾಯದಂತೆ ಇಂದು ಅಂತ್ಯಕ್ರಿಯೆ

ಮಡಿಕೇರಿ,ಅ.13– ಕಳೆದ ಎರಡು ದಿನಗಳ ಹಿಂದೆ ಉತ್ತರಾಖಂಡ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭ ಹೃದಯಾಘಾತದಿಂದ ವಿಧಿವಶರಾಗಿದ್ದ ಕೊಡಗಿನ ಯೋಧ ಸುಬೇದಾರ್ ನಾಪಂಡ ಸಿ.ಮಹೇಶ್(44) ಅವರ ಪಾರ್ಥೀವ ಶರೀರ ಹುಟ್ಟೂರಿಗೆ ತಲುಪಿದ್ದು, ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ.



ಸುಬೇದಾರ್ ನಾಪಂಡ ಸಿ.ಮಹೇಶ್ ಅವರ ಹುಟ್ಟೂರು ಸೋಮವಾರಪೇಟೆ ತಾಲೂಕಿನ ತಾಕೇರಿ ಗ್ರಾಮದಲ್ಲಿ ಅಂತ್ಯಸಂಸ್ಕಾರಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಅಂದು ಬೆಳಗ್ಗೆ 10 ಗಂಟೆಯಿಂದ 2 ಗಂಟೆಯವರೆಗೆ ಕಿರುಗಂದೂರು ಶಾಲಾ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ. ಬಳಿಕ ಸೇನಾ ಗೌರವ ಸಲ್ಲಿಸಿ, ಕೊಡವ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನಗಳನ್ನು ನಡೆಸಲಾಗುತ್ತದೆ.

ಮಾಣಿಪಂಡ ಸೋಮಯ್ಯ ನಿಧನ

ಮಡಿಕೇರಿ,ಅ.13– ಗೋಣಿಕೊಪ್ಪಲು ನಿವಾಸಿ, ಭಾರತಿ ರೇಡಿಯೋ ಕಾಂಪ್ಲೆಕ್ಸ್ ಮಾಲೀಕ ಮಾಣಿಪಂಡ ಸೋಮಯ್ಯ(84) ಅವರು ಗುರುವಾರ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಪೊನ್ನಂಪೇಟೆ ತಾಲೂಕಿನ ಕೋಟೂರು ಗ್ರಾಮದಲ್ಲಿ ಶುಕ್ರವಾರ ನಡೆಯಲಿದೆ.

ಬೇಟೆಗೆ ತೆರಳಿದ ವ್ಯಕ್ತಿ ನಿಗೂಢ ಸಾವು

ಕಾವೇರಿ ನದಿಯಲ್ಲಿ ಶವ ಪತ್ತೆ

● ಬೇಟೆಗೆ ತೆರಳಿದ್ದವರಲ್ಲಿ ಓರ್ವ ಸೆರೆ, ಇನ್ನಿಬ್ಬರು ನಾಪತ್ತೆ

ಕುಶಾಲನಗರ, ಅ.13– ಮೂವರು ಸ್ನೇಹಿತರೊಂದಿಗೆ ಬೇಟೆಗೆ ತೆರಳಿದ್ದ ವಿವಾಹಿತನೋರ್ವ ನಿಗೂಢವಾಗಿ ಸಾವನ್ನಪ್ಪಿರುವ ಘಟನೆ ನಡೆದಿದೆ.



ನಂಜರಾಯಪಟ್ಟಣ ಗ್ರಾಪಂ ವ್ಯಾಪ್ತಿಯ ವಿರುಪಾಕ್ಷಪುರದ ಸಿದ್ದಯ್ಯ ಎಂಬವರ ಪುತ್ರ ಆಟೋ ಚಾಲಕ ವಿನೋದ್(29) ಸೋಮವಾರದಿಂದ ಕಾಣೆಯಾಗಿರುವ ಬಗ್ಗೆ ಆತನ ಪತ್ನಿ ಅನುಷಾ ಕುಶಾಲನಗರ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ಈ ನಡುವೆ ವಿನೋದನ ಮೃತದೇಹ ಅನುಮಾನಾಸ್ಪದ ರೀತಿಯಲ್ಲಿ ಗ್ರಾಮದಿಂದ ಅನತಿ ದೂರದ ಬಾಳುಗೋಡು–ರಸುಲ್‌ಪುರ ಬಳಿ ಕಾವೇರಿ ನದಿಯಲ್ಲಿ ಗುರುವಾರ ಪತ್ತೆಯಾಗಿದೆ. ವಿನೋದ್ ತನ್ನ ಮೂವರು ಸಹಚರರೊಂದಿಗೆ ಗ್ರಾಮದ ಕಾವೇರಿ ನದಿ ದಾಟಿ ಬೈಲುಕೊಪ್ಪ ಠಾಣಾ ವ್ಯಾಪ್ತಿಯ ಕಾಡಿಗೆ ಭಾನುವಾರ ಬೇಟೆಗೆ ತೆರಳಿದ್ದ ಎನ್ನಲಾಗಿದೆ. ಆದರೆ ಮರಳಿ ಗ್ರಾಮಕ್ಕೆ ಬಂದದ್ದು ಮಾತ್ರ ಮೂವರು. ಈತನ ಆಪ್ತ ಸ್ನೇಹಿತ ಧರ್ಮ ಎಂಬಾತನನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆ ಕೈಗೊಂಡಿದ್ದಾರೆ.


ಈ ನಡುವೆ ಬೇಟೆಗೆ ಜೊತೆಯಾಗಿ ತೆರಳಿದ್ದ ಇನ್ನಿಬ್ಬರು ಸ್ನೇಹಿತರಾದ ಯೋಗೇಶ್, ಈಶ್ವರ ಎಂಬವರು ಮೊಬೈಲ್ ಸ್ವಿಚ್ ಆಫ್ ಮಾಡಿ ತಲೆಮರೆಸಿಕೊಂಡಿದ್ದಾರೆ. ಎರಡು ದಿನಗಳಿಂದ ಪೊಲೀಸರ ವಶದಲ್ಲಿರುವ ಧರ್ಮನಿಂದ ಸತ್ಯ ಹೊರತೆಗೆಯುವಲ್ಲಿ ಇದುವರೆಗೆ ಪೊಲೀಸರಿಗೆ ಸಾಧ್ಯವಾಗಿಲ್ಲ. ಮೇಲ್ನೋಟಕ್ಕೆ ಮೃತದೇಹದಲ್ಲಿ ಗುಂಡೇಟಿನ ಕುರುಹು ಕಂಡುಬಂದಿಲ್ಲ ಎನ್ನುವ ಪೊಲೀಸರು, ಮೃತದೇಹದ ಮರಣೋತ್ತರ ಪರೀಕ್ಷೆಗಾಗಿ ಮಡಿಕೇರಿಗೆ ರವಾನಿಸಲಾಗಿದ್ದು ವರದಿ ನಿರೀಕ್ಷೆಯಲ್ಲಿದ್ದಾರೆ.

ಕೊಳ್ಳೇಗಾಲ ನಗರಸಭೆ ಉಪಚುನಾವಣೆ

7 ಮಂದಿ ಅನರ್ಹರಿಗೆ ಸ್ಪರ್ಧಿಸಲು ಅವಕಾಶ

ಚುನಾವಣಾ ಆಯೋಗದ ಆದೇಶ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ್ದ ಅನರ್ಹರು

ಕೊಳ್ಳೇಗಾಲ, ಅ.13– ಕೊಳ್ಳೇಗಾಲ ನಗರಸಭೆಯ ಏಳು ವಾರ್ಡ್‌ಗಳಿಗೆ ನಡೆಯುವ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿಲ್ಲ ಎಂದು ಚುನಾವಣಾ ಆಯೋಗ ಆದೇಶ ಹೊರಡಿಸಿದ್ದ ಬೆನ್ನಲ್ಲೆ ಅನರ್ಹಗೊಂಡ ಏಳು ಮಂದಿ ಅನರ್ಹ ಸದಸ್ಯರಿಗೂ ರಾಜ್ಯ ಹೈಕೋರ್ಟ್ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿದ್ದು ನಿರಾಸರಾಗಿದ್ದವರಿಗೆ ಮತ್ತಷ್ಟು ಉತ್ಸಾಹ ಮೂಡುವಂತಾಗಿದೆ.



ಈ ಕುರಿತು ಗುರುವಾರ ಸಂಜೆ ಹೈಕೋರ್ಟ್ ಆದೇಶ ಹೊರಡಿಸಿದ್ದು, ಜಿಲ್ಲಾಡಳಿತ ಹಾಗೂ ಚುನಾವಣಾ ಆಯೋಗ 7 ಮಂದಿಗೂ ಸ್ಪರ್ಧೆಗೆ(ನಾಮಪತ್ರ ಸಲ್ಲಿಸಲು) ಅವಕಾಶ ನೀಡಬೇಕು ಎಂದು ಸ್ಪಷ್ಟವಾಗಿ ಸೂಚಿಸಿದೆ. ಹೈಕೋರ್ಟ್ ಆದೇಶದಿಂದಾಗಿ ಸ್ಪರ್ಧಿಸಲು ಅವಕಾಶ ಇಲ್ಲ ಎಂದು ನಿರಾಸೆಗೊಂಡಿದ್ದ ನಾಗಸುಂದ್ರಮ್ಮ ಜಗದೀಶ್, ಶಂಕನಪುರ ಪ್ರಕಾಶ್, ರಾಮಕೃಷ್ಣ, ನಾಸೀರ್ ಪಾಶಾ, ನಾಗಮಣಿ, ಗಂಗಮ್ಮ ವರದರಾಜು, ಪವಿತ್ರ ರಮೇಶ್ ಅವರುಗಳು ಈ ತೀರ್ಪಿನಿಂದ ಸಂತುಷ್ಟರಾಗಿದ್ದಾರೆ.

ಈಗಾಗಲೇ ಜಿಲ್ಲಾಧಿಕಾರಿಗಳು 2, 6,7,13, 21, 25 ಹಾಗೂ 26 ವಾರ್ಡ್‌ಗಳಿಗೆ ಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು ನಾಮಪತ್ರ ಸಲ್ಲಿಸಲು ಅ.17 ಕೊನೆ ದಿನವಾಗಿದೆ. ಇದರ ಬೆನ್ನಲೆ ಆಯೋಗ ಅನರ್ಹಗೊಂಡ ಸದಸ್ಯರು ಸ್ಪರ್ಧಿಸುವಂತಿಲ್ಲ ಎಂಬ ಆದೇಶವನ್ನು ಹೊರಡಿಸಿತ್ತು. ಈ ಕುರಿತು ಅ.9 ರಂದು ಆಯೋಗದ ಆದೇಶ ಪ್ರಶ್ನಿಸಿ ಅನರ್ಹ ಸದಸ್ಯರು ಸೋಮವಾರ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯ ಇಂದು ವಿಚಾರಣೆ ನಡೆಸಿ 7 ಮಂದಿಗೂ ಸ್ಪರ್ಧೆಗೆ ಅವಕಾಶ ನೀಡುವಂತೆ ಜಿಲ್ಲಾಡಳಿತ ಹಾಗೂ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ. 7 ಮಂದಿ ಬಿಜೆಪಿಯಿಂದ ಸ್ಪರ್ಧಿಸಲು ಉತ್ಸುಕರಾಗಿದ್ದು ಶಾಸಕ ಮಹೇಶ್ ಸಹಕಾರ ಪಡೆದು ಟಿಕೆಟ್ ಗಿಟ್ಟಿಸುವ ಕಸರತ್ತು ಪ್ರಾರಂಭಿಸಿದ್ದಾರೆ. ಈಗಾಗಲೇ ಶಾಸಕರು ಸಹಾ ಬಿಜೆಪಿ ವರಿಷ್ಠರ ಜೊತೆ ಒಂದು ಸುತ್ತಿನ ಮಾತುಕತೆ ಸಹಾ ನಡೆಸಿದ್ದು ಬಹುತೇಕ 7 ಮಂದಿಗೂ ಟಿಕೆಟ್ ಅಂತಿಮ ಎನ್ನಲಾಗುತ್ತಿದೆ. ಈಕುರಿತು ಚುನಾವಣಾ ಆಯೋಗ ಹಾಗೂ ಜಿಲ್ಲಾಡಳಿತ ಯಾವ ರೀತಿ ಕ್ರಮಕೈಗೊಳ್ಳಲಿದೆ ಎಂದು ಕಾದು ನೋಡಬೇಕಿದೆ.

ದಲಿತ ಮುಖಂಡ ಶಿವಶಂಕರ್ ನಿಧನ

ಕೊಳ್ಳೇಗಾಲ, ಅ.13– ಪಟ್ಟಣದ ದಲಿತ ಮುಖಂಡರಾದ ಶಿವಶಂಕರ್ (47) ಅನಾರೋಗ್ಯದಿಂದ ಗುರುವಾರ ಬೆಳಗ್ಗೆ ನಿಧನರಾದರು.



ಮೃತರು ತಾಯಿ ಪುಟ್ಟಮ್ಮ, ಸಹೋದರ ಕಾಂಗ್ರೆಸ್ ಮುಖಂಡ ವಾಚ್ ಕುಮಾರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ನಗರಸಭೆ ಸದಸ್ಯ ಮಂಜುನಾಥ್, ಕಾಂಗ್ರೆಸ್ ಮುಖಂಡ ಚಿನ್ನಸ್ವಾಮಿ ಮಾಳಿಗೆ ಸೇರಿದಂತೆ ಹಲವು ಗಣ್ಯರನ್ನು ಮೃತರಿಗೆ ಅಂತಿನ ನಮನ ಸಲ್ಲಿಸಿದರು. ಹಂಪಾಪುರದ ಸಮೀಪದ ರುದ್ರಭೂಮಿಯಲ್ಲಿ ದಲಿತ ಸಮಾಜದ ವಿಧಿ, ವಿಧಾನಗಳೊಂದಿಗೆ ಸಂಜೆ ಅಂತ್ಯಕ್ರಿಯೆ ನಡೆಸಲಾಯಿತು.

ಸಮಾಜಕ್ಕಾಗಿ ದುಡಿಯುವವರಿಗೆ ಮಾನ್ಯತೆ ಇಲ್ಲ

ವಿಶ್ರಾಂತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ವಿಷಾದ



ಮೈಸೂರು, ಅ.13(ಜಿಎ)–ಸಮಾಜದ ಕೆಲಸ ಮಾಡುವವರಿಗೆ ಸರಿಯಾದ ಮಾನ್ಯತೆ ಸಿಗುತ್ತಿಲ್ಲ. ಹೀಗೆ, ಪುರಸ್ಕಾರ ವಂಚಿತರು ನಮ್ಮ ನಡುವೆ ಬಹಳಷ್ಟು ಮಂದಿ ಇದ್ದು, ಬದ್ಧತೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ನಿವೃತ್ತ ಪೊಲೀಸ್ ಅಧಿಕಾರಿ, ಅಂಕಣಕಾರ ಜೆ.ಬಿ.ರಂಗಸ್ವಾಮಿ ವಿಷಾದ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಮತ್ತು ಕನ್ನಡ ಸಾಹಿತ್ಯ ಕಲಾ ಕೂಟದ ಸಹಯೋಗದಲ್ಲಿ ಇಲ್ಲಿನ ಎಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಗುರುವಾರ ನಡೆದ ಲೇಖಕ ರಂಗನಾಥ್ ಮೈಸೂರು ವಿರಚಿತ 'ಬೆಳಕು ಚೆಲ್ಲಿದ ಬದುಕು' ಹಾಗೂ 'ಕಾಡಿದ ಕವಿತೆಗಳು' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು.

ಕೃತಿಗಳನ್ನು ಓದದೇ ಕೃತಿಕಾರರ ಬಗ್ಗೆ ವಿಮರ್ಶೆ ಮಾಡುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, 'ಬೆಳಕು ಚೆಲ್ಲಿದ ಬದುಕು' ಕೃತಿಯು ಅನೇಕರ ವ್ಯಕ್ತಿಚಿತ್ರಗಳನ್ನು ಒಳಗೊಂಡಿದೆ. ರಂಗನಾಥ್ ಕವಿ ಮನಸ್ಸು ಹೊಂದಿರುವುದರಿಂದ ಹಲವು ಪದಗಳು ಹಾಗೂ ಸಾಲುಗಳು ಬಹಳ ಚೆನ್ನಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕಿ ಕವಿತಾ ರೈ ಮಾತನಾಡಿ, 'ಸಮಕಾಲೀನ ಸಂದರ್ಭದಲ್ಲಿ ಮಹಿಳೆಯರು ಕಾವ್ಯ ಪ್ರಾಕಾರದಲ್ಲಿ ಜಾಸ್ತಿ ತೊಡಗಿಸಿಕೊಂಡಿದ್ದಾರೆ. ನಾಲ್ಕು ದಶಕಗಳಲ್ಲಿ ಮಹಿಳೆಯರು ಹೆಚ್ಚಾಗಿ ಕಾವ್ಯ ಕೃಷಿ ಮಾಡಿರುವುದನ್ನು ಗಮನಿಸಬಹುದು' ಎಂದರು.

ಬರಹಗಾರನಿಗೆ ಮಾತ್ರವೇ, ಸಮಾಜಕ್ಕೆ ರೋಗ ಬಂದಾಗ ಅದಕ್ಕೆ ಮದ್ದು ಹಾಕಬೇಕು ಎನ್ನಿಸುತ್ತದೆ. ರೋಗಗ್ರಸ್ಥ ಸಮಾಜವನ್ನು ಗುಣಪಡಿಸಲು ಮನುಕುಲ ಇರುವವರೆಗೂ ಬರಹಗಾರರು ಇರಬೇಕು. ಸೋತಾಗ, ಅವಮಾನ ಅನುಭವಿಸಿದಾಗ ಕವನಗಳು ಕನಸುಗಳನ್ನು ಬಿತ್ತುತ್ತವೆ' ಎಂದು ಹೇಳಿದರು. ಇದೇ ವೇಳೆ ಜೆ.ಬಿ.ರಂಗಸ್ವಾಮಿ ಅವರ 'ನೆನ್ನೆ ಮೊನ್ನೆ ನಮ್ಮ ಜನ' ಪುಸ್ತಕಕ್ಕಾಗಿ 'ಸವಿಗನ್ನಡ ಸಾಂಸ್ಕೃತಿಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಮೇಲುಕೋಟೆ ವಂಗೀಪುರ ನಂಬೀಮಠದ ಪೀಠಾಧ್ಯಕ್ಷ ಇಳೈ ಆಳ್ವಾರ್ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್.ಸತೀಶ್, ಕನ್ನಡ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಹಾಗೂ ಸಾಂಬಮೂರ್ತಿ ಉಪಸ್ಥಿತರಿದ್ದರು.

ಪದ್ಮರಾಜುಗೆ ಪಿಎಚ್.ಡಿ



ಮೈಸೂರು,ಅ.13– ಡಾ.ವಿಜಯಲಕ್ಷ್ಮಿ ಅವರ ಮಾರ್ಗ ದರ್ಶನದಲ್ಲಿ ಎಸ್. ಪದ್ಮರಾಜು ಅವರು ಜಾನಪದ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಹೆಗ್ಗಡದೇವನಕೋಟೆ ತಾಲೂಕು ಕೆರೆಗಳು: ಜಾನಪದೀಯ ಅಧ್ಯಯನ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಯುವಕ ನಾಪತ್ತೆ



ಮೈಸೂರು, ಅ.13– ಮನೆಯಿಂದ ಹೊರ ಹೋದ ಯುವಕ ಕಾಣೆಯಾಗಿರುವ ಬಗ್ಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಂಜನಗೂಡು ತಾಲೂಕಿನ ಹರತಲೆ ಗ್ರಾಮದ ನಿವಾಸಿ ಮಣಿಕಂಠ(19) ನಾಪತ್ತೆಯಾಗಿರುವ ಕಾಣೆಯಾಗಿರುವ ವ್ಯಕ್ತಿ. ಅ.6ರ ಬೆಳಗ್ಗೆ 5 ಗಂಟೆಗೆ ಮನೆಯಿಂದ ಹೊರ ಹೋಗಿದ್ದು, ಸ್ನೇಹಿತರು, ಸಂಬಂಧಿಕರ ಮನೆಗಳಲ್ಲಿ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ಮಣಿಕಂಠನ ತಂದೆ ಮಾದಯ್ಯ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ದೂ.ಸಂ.0821–2418339 ಸಂಪರ್ಕಿಸುವಂತೆ ಕೋರಲಾಗಿದೆ.

ಗೃಹಣಿ ನಾಪತ್ತೆ



ಮೈಸೂರು, ಅ.1 3– ಮನೆಯಿಂದ ಹೊರ ಹೋದವರು ಗೃಹಿಣಿ ಕಾಣೆಯಾಗಿರುವ ಘಟನೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ನಂಜನಗೂಡು ತಾಲೂಕಿನ ಗೋಳೂರು ಗ್ರಾಮದ ನಿವಾಸಿ ಜ್ಯೋತಿ(35) ನಾಪತ್ತೆಯಾಗಿರುವ ಕಾಣೆಯಾಗಿರುವ ಗೃಹಿಣಿ. ಸೆ.27 ಬೆಳಗ್ಗೆ 11.45ಕ್ಕೆ ಮನೆಯಿಂದ ಹೊರ ಹೋಗಿದ್ದು, ಸ್ನೇಹಿತರು, ಸಂಬಂಧಿಕರ ಮನೆಗಳಲ್ಲಿ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ಜ್ಯೋತಿ ಪತಿ ಶಿವಪ್ಪ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ದೂ.ಸಂ.0821–2418339 ಸಂಪರ್ಕಿಸುವಂತೆ ಕೋರಲಾಗಿದೆ.

ಒಂದನೇ ಪುಟದಿಂದ

ಅಭ್ಯರ್ಥಿಗಳ ಆಯ್ಕೆ ಮಾಡ್ತಾರೆ...

ಮಾಡಿಕೊಂಡು ನಿಮ್ಮ ಕೆಲಸ ಮಾಡಿ ಎಂದು ಜನೋತ್ಸವ ಕಾರ್ಯಕ್ರಮದಲ್ಲಿ ಯಡಿಯೂರಪ್ಪ ಕಾರ್ಯಕರ್ತರಿಗೆ ಕಿವಿಮಾತು ಹೇಳಿದ್ದಾರೆ. ವರಿಷ್ಠರು ಅಷ್ಟೇ ಅಲ್ಲ ರಾಜ್ಯ ಸರ್ಕಾರವೂ ಪಕ್ಷದ ಮುಖಂಡರ ಕೆಲಸ ನೋಡಿ ಮಾಹಿತಿ ರವಾನಿಸಲಿದೆ.

ರಾಜ್ಯ ಘಟಕವೂ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಸರ್ವೇ ಮಾಡಿಸುತ್ತಿದೆ. ನಮಗೆ ದೊರೆತಿರುವ ಮಾಹಿತಿ ಪ್ರಕಾರ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದೆ ಎಂಬುದು ತಿರುಕನ ಕನಸು. ರಾಷ್ಟ್ರದಲ್ಲಿ ಎರಡು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರದಲ್ಲಿದೆ. ಉಳಿದ ಕಡೆ ಅದಕ್ಕೆ ವಿಳಾಸವೇ ಇಲ್ಲ. ಕರ್ನಾಟಕದಲ್ಲಿ ವಿಳಾಸ ಹುಡುಕಲು ಆ ಪಕ್ಷದ ಮುಖಂಡ ರಾಹುಲ್‌ಗಾಂಧಿ ರಾಜ್ಯದಲ್ಲಿ ಭಾರತ್ ಜೋಡೋ ಯಾತ್ರೆ ನಡೆಸುತ್ತಿದ್ದಾರೆ. ಅದಕ್ಕೆ ಕವಡೆ ಕಾಸಿನ ಕಿಮ್ಮತ್ತು ಇಲ್ಲ ಎಂದು ಲೇವಡಿ ಮಾಡಿದ್ದಾರೆ.

ಟ್ಯೂಷನ್ ಟೀಚರ್ ಕಾಂತರಾಜು ಬಂಧನ

ಮೊಮ್ಮಗಳು ಬಂದಿಲ್ಲವೇ? ಎಂದು ಪ್ರಶ್ನಿಸಿ, ವಿದ್ಯಾರ್ಥಿನಿಗಾಗಿ ತಾನೂ ಹುಡುಕಾಡುವ ನಾಟಕ ಮಾಡಿದ್ದಾನೆ. ಮೊಮ್ಮಗಳು ಕಾಣೆಯಾಗಿರುವ ಬಗ್ಗೆ ಆಕೆಯ ತಾತ ಪೊಲೀಸರಿಗೆ ಮಾಹಿತಿ ನೀಡಿದಾಗ ಪೊಲೀಸರು ಟ್ಯೂಷನ್ ಸೆಂಟರ್ ಬಳಿ ಇರುವ ಬೇಕರಿಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾ ಪರಿಶೀಲಿಸುತ್ತಿದ್ದರು. ಅದೇ ವೇಳೆ ಮಳವಳ್ಳಿ–ಮೈಸೂರು ರಸ್ತೆಯಲ್ಲಿರುವ ಲಿಂಗೇಗೌಡ ಬಿಲ್ಡಿಂಗ್ ಸಮೀಪದ ನಾಗರಾಜು ಎಂಬುವರಿಗೆ ಸೇರಿದ ನಿರ್ಮಾಣ ಹಂತದ ಕಟ್ಟಡದ ಸಂಪ್‌ನಲ್ಲಿ ಹೆಣ್ಣು ಮಗು ಬಿದ್ದಿದೆ ಎಂಬ ವಿಚಾರ ತಿಳಿದು ಅಲ್ಲಿಗೆ ಹೋಗಿ ನೋಡಿದಾಗ ನಾಪತ್ತೆಯಾಗಿದ್ದ ತಮ್ಮ ಮೊಮ್ಮಗಳೇ ಸಂಪ್‌ನಲ್ಲಿ ಶವವಾಗಿ ಬಿದ್ದಿದ್ದಾಳೆ ಎಂಬುದು ತಾತನಿಗೆ ತಿಳಿದಿದೆ.

ಈ ಹಿನ್ನೆಲೆಯಲ್ಲಿ ಅವರು ಅ.11ರಂದು ಸಂಜೆ 7 ಗಂಟೆಯಲ್ಲಿ ಠಾಣೆಗೆ ತೆರಳಿ ತನ್ನ ಮೊಮ್ಮಗಳನ್ನು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ ಶವವನ್ನು ನೀರಿನ ಸಂಪ್‌ನಲ್ಲಿ ಹಾಕಿದ್ದಾರೆ ಎಂದು ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸರು ಆರೋಪಿ ಹೆಸರಿಸದೇ ಕೊಲೆ ಮತ್ತು ಸಾಕ್ಷ್ಯ ನಾಶ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು. ವಿದ್ಯಾರ್ಥಿನಿಯ ಶವ ದೊರೆತ ಸಂಪ್ ಬಳಿಗೂ ಟ್ಯೂಷನ್ ಟೀಚರ್ ಕಾಂತರಾಜು ಬಂದು ದುಃಖ ವ್ಯಕ್ತಪಡಿಸಿದ್ದ. ಅಲ್ಲದೇ ಬಾಲಕಿಯನ್ನು ಕೊಂದವರ ಬಗ್ಗೆ ಆಕ್ರೋಶವನ್ನೂ ವ್ಯಕ್ತಪಡಿಸಿ, ನಾಟಕವಾಡಿದ್ದ ಎಂದು ಹೇಳಲಾಗಿದೆ.

ಟ್ಯೂಷನ್ ಟೀಚರ್ ಕಾಂತರಾಜು ವರ್ತನೆ ಮತ್ತು ಬೇಕರಿಯಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದ ಕೆಲವು ದೃಶ್ಯಗಳನ್ನಾಧರಿಸಿ ಅನುಮಾನಗೊಂಡ ಪೊಲೀಸರು ಆತನನ್ನು ವಶಕ್ಕೆ ಪಡೆದು ತೀವ್ರವಾಗಿ ವಿಚಾರಣೆಗೊಳಪಡಿಸಿದಾಗ ಆತನೇ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿ, ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ನಿರ್ಮಾಣ ಹಂತದ ಕಟ್ಟಡದ ಸಂಪ್‌ನಲ್ಲಿ ಶವವನ್ನು ಹಾಕಿದ್ದ. ತನ್ನ ಮೇಲೆ ಅನುಮಾನ ಬಾರದಿರಲಿ ಎಂದು ವಿದ್ಯಾರ್ಥಿನಿಯ ತಾತನ ಜೊತೆ ಸೇರಿ ಆಕೆಯನ್ನು ಹುಡುಕಾಡಿದ್ದ ಎಂಬುದು ಬಯಲಾಗಿದೆ. ಮತ್ತೊಂದೆಡೆ ನಿನ್ನೆ (ಅ.12) ಕಾಂತರಾಜುವೇ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಿದ್ದಾನೆ ಎಂಬ ವಿಚಾರ ಹರಡಿ, ಪಟ್ಟಣದಲ್ಲಿ ಆತನ ವಿರುದ್ಧ ತೀವ್ರ ಆಕ್ರೋಶ ಭುಗಿಲೆದ್ದಿತ್ತು. ವಿದ್ಯಾರ್ಥಿನಿಯ ಅಂತ್ಯಸಂಸ್ಕಾರದಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ಶ್ರದ್ಧಾಂಜಲಿ ಸಲ್ಲಿಸಿದ್ದಲ್ಲದೇ, ಕಾಂತರಾಜು ಮೇಲೆ ಆಕ್ರೋಶ ವ್ಯಕ್ತಪಡಿಸಿದ್ದರು.

ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದ ಕಾಂತರಾಜುವನ್ನು ತೀವ್ರವಾಗಿ ವಿಚಾರಣೆಗೊಳಪಡಿಸಿ ಕೃತ್ಯ ನಡೆದ ಸ್ಥಳ ಹಾಗೂ ವಿದ್ಯಾರ್ಥಿನಿಯ ಶವ ದೊರೆತ ಸ್ಥಳಕ್ಕೆ ಕರೆದೊಯ್ದು ಮಹಜರು ನಡೆಸಿದ್ದರು. ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆದಿದೆಯೇ ಎಂಬುದರ ಬಗ್ಗೆ ವೈದ್ಯಕೀಯ ವರದಿಗಾಗಿ ಕಾಯುತ್ತಿದ್ದ ಪೊಲೀಸರು, ವಿದ್ಯಾರ್ಥಿನಿಯ ಹತ್ಯೆಗೆ ಸಂಬಂಧಿಸಿದಂತೆ ಸಾಕ್ಷ್ಯಗಳನ್ನು ಕಲೆ ಹಾಕುವಲ್ಲಿ ಕಾರ್ಯನಿರತರಾಗಿದ್ದರು. ಈ ನಡುವೆ ಇಂದು ಸಂಜೆ ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿಯಂತೆ ಅತ್ಯಾಚಾರ ನಡೆದಿದೆ ಎಂಬ ಅಭಿಪ್ರಾಯವನ್ನು ಪರಿಗಣಿಸಿ, ಪ್ರಕರಣದಲ್ಲಿ ಈಗಾಗಲೇ ದಾಖಲಾಗಿದ್ದ ಕೊಲೆ ಮತ್ತು ಸಾಕ್ಷ್ಯ ನಾಶ ಕಲಂಗಳ ಜೊತೆ ಪೋಕ್ಸೋ ಮತ್ತು ಅತ್ಯಾಚಾರ ಕಲಂಗಳನ್ನು ಸೇರಿಸಿದ್ದಲ್ಲದೇ ಟ್ಯೂಷನ್ ಟೀಚರ್ ಕಾಂತರಾಜುವನ್ನು ಆರೋಪಿ ಎಂದು ನಮೂದಿಸಿ, ಆತನನ್ನು ರಾತ್ರಿ ವೇಳೆಗೆ ಬಂಧಿಸಿದ್ದಾರೆ.

ಬೆಳಗಾವಿಯಲ್ಲಿ ಅ.19ರಿಂದ 21ರವರೆಗೆ ಅರಣ್ಯ ಇಲಾಖೆ ರಾಜ್ಯಮಟ್ಟದ ಕ್ರೀಡಾಕೂಟ

ಮೈಸೂರು,ಅ.13(ಪಿಎಂ)–ಅರಣ್ಯ ಇಲಾಖೆಯ ರಾಜ್ಯಮಟ್ಟದ ಕ್ರೀಡಾಕೂಟ ಅ.19ರಿಂದ 21ರವರೆಗೆ ಬೆಳಗಾವಿಯಲ್ಲಿ ನಡೆಯಲಿದ್ದು, ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಇಲಾಖೆಯ ಮೈಸೂರು ವೃತ್ತದ ನೌಕರರು ಅಭ್ಯಾಸದಲ್ಲಿ ನಿರತರಾಗಿದ್ದಾರೆ. ಕ್ರೀಡಾಕೂಟದಲ್ಲಿ ಪಥಸಂಚಲನವೂ ಒಂದು ಸ್ಪರ್ಧೆಯಾಗಿ ನಡೆಯಲಿದ್ದು, ಈ ಸಂಬಂಧ ಗುರುವಾರ ಮೈಸೂರು ವೃತ್ತದ ತಂಡಕ್ಕೆ ಎನ್‌ಸಿಸಿ ವತಿಯಿಂದ ತರಬೇತಿ ನೀಡಲಾಯಿತು.

ಈ ಮೂರು ದಿನಗಳ ಕ್ರೀಡಾಕೂಟವು ಬೆಳಗಾವಿಯ ವಿವಿಧೆಡೆ ನಡೆಯಲಿದೆ. ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸದರಿ ರಾಜ್ಯಮಟ್ಟದ ಕ್ರೀಡಾಕೂಟ ನಡೆದಿರಲಿಲ್ಲ. ಇದೀಗ ಪ್ರಸಕ್ತ ಸಾಲಿನಲ್ಲಿ ನಡೆಯುವ ಕ್ರೀಡಾಕೂಟಕ್ಕೆ ಇಲಾಖೆಯ ಮೈಸೂರು ವೃತ್ತ ಭರದ ಸಿದ್ಧತೆ ನಡೆಸಿದೆ. ಕ್ರಿಕೆಟ್, ಫುಟ್‌ಬಾಲ್, ಕಬಡ್ಡಿ, ವಾಲಿಬಾಲ್, ಗಾಲ್ಫ್, ಈಜು, ಶಟಲ್ ಬ್ಯಾಡ್ಮಿಂಟನ್, ಬಿಲ್ಲುಗಾರಿಕೆ, ರೈಫಲ್ ಶೂಟಿಂಗ್ ಸೇರಿದಂತೆ ವಿವಿಧ ಕ್ರೀಡೆಗಳು ನಡೆಯಲಿವೆ.

ಈ ಪೈಕಿ ವೈಯಕ್ತಿಕವಾಗಿ ನಡೆಯುವ ಸ್ಪರ್ಧೆಗಳಲ್ಲಿ ಮುಕ್ತ, 45 ವರ್ಷ ಮೇಲ್ಪಟ್ಟವರು ಹಾಗೂ 53 ವರ್ಷ ಮೇಲ್ಪಟ್ಟವರು ಎಂಬ ಮೂರು ವಿಭಾಗಗಳು ಇವೆ. ಜೊತೆಗೆ ಎಲ್ಲಾ ಸ್ಪರ್ಧೆಗಳಲ್ಲಿ ಮಹಿಳೆಯರು ಹಾಗೂ ಪುರುಷರ ಪ್ರತ್ಯೇಕ ವಿಭಾಗಗಳಿವೆ. ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಗುರುವಾರ ಮೈಸೂರು ವೃತ್ತದಿಂದ ಪಥಸಂಚಲನ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿರುವ ತಂಡಕ್ಕೆ ಎನ್‌ಸಿಸಿ 3 ಕಾರ್ ಗರ್ಲ್ಸ್ ಬೆಟಾಲಿಯನ್‌ನ ಹವಾಲ್ದಾರ್ ಗೋಪಿನಾಥ್ ಹಾಗೂ ಹವಾಲ್ದಾರ್ ಕೆಂಪಣ್ಣ ಚೌಗಲಾ ತರಬೇತಿ ನೀಡಿದರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯ ಯೋಜನೆ) ಪ್ರಸನ್ನಕುಮಾರ್, ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಇಲಾಖೆಯ ರಾಜ್ಯದ ವಿವಿಧ ವೃತ್ತಗಳಿಂದ ತಂಡಗಳು ಪಾಲ್ಗೊಳ್ಳಲಿವೆ. ಅಂತೆಯೇ ಮೈಸೂರು ವೃತ್ತದಿಂದ (ಮೈಸೂರು ಮತ್ತು ಮಂಡ್ಯ ಜಿಲ್ಲೆ) 70 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಆ ಕ್ರೀಡಾಪಟುಗಳು ಈಗಾಗಲೇ ತರಬೇತಿಯಲ್ಲಿ ನಿರತರಾಗಿದ್ದಾರೆ. ಜೊತೆಗೆ ಪಥಸಂಚಲನದಲ್ಲಿ ಪಾಲ್ಗೊಳ್ಳುವ ನಮ್ಮ ತಂಡಕ್ಕೆ ಪೂರ್ವಭಾವಿ ತರಬೇತಿಯನ್ನು ಎನ್‌ಸಿಸಿ ವತಿಯಿಂದ ನೀಡಲಾಗುತ್ತಿದೆ. ಪ್ರತಿವರ್ಷ ಈ ಕ್ರೀಡಾಕೂಟ ನಡೆಯುತ್ತದೆ. ಕಳೆದ ಎರಡು ವರ್ಷಗಳಿಂದ ಕೋವಿಡ್ ಹಿನ್ನೆಲೆಯಲ್ಲಿ ಆಯೋಜಿಸಿರಲಿಲ್ಲ ಎಂದು ತಿಳಿಸಿದರು. ಕ್ರೀಡಾ ತರಬೇತುದಾರ ಬಿ.ಉಮೇಶ್ ಹಾಜರಿದ್ದರು.

ಇಲಾಖೆಯ ಮೈಸೂರು ವೃತ್ತದಿಂದ ಪೂರ್ವ ತಯಾರಿ



ಮೈಸೂರಿನ ಮಹಾರಾಜ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಗುರುವಾರ ಅರಣ್ಯ ಇಲಾಖೆ ಮೈಸೂರು ವೃತ್ತದಿಂದ ಪಥಸಂಚಲನ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿರುವ ತಂಡಕ್ಕೆ ಎನ್‌ಸಿಸಿ 3 ಕಾರ್ ಗರ್ಲ್ಸ್ ಬೆಟಾಲಿಯನ್‌ನ ಹವಾಲ್ದಾರ್ ಗೋಪಿನಾಥ್ ಹಾಗೂ ಹವಾಲ್ದಾರ್ ಕೆಂಪಣ್ಣ ಚೌಗಲಾ ತರಬೇತಿ ನೀಡಿದರು.

ರಾಷ್ಟ್ರಮಟ್ಟಕ್ಕೆ ಆಯ್ಕೆ...

ಈ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಆಯ್ಕೆಯಾಗುವವರು ಹಾಗೂ ತಂಡಗಳು ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಕರ್ನಾಟಕ ಅರಣ್ಯ ಇಲಾಖೆಯನ್ನು ಪ್ರತಿನಿಧಿಸಲು ಅವಕಾಶವಿದೆ. ಇಲಾಖೆಗೆ ಕ್ರೀಡಾ ಕೋಟಾದಲ್ಲಿ ನೇಮಕವಾದವರು ನಮ್ಮ ವೃತ್ತದಲ್ಲಿ ಶೇ.50ರಷ್ಟು ಮಂದಿ ಇದ್ದು, ಅವರೂ ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ನಮ್ಮ ವೃತ್ತದಿಂದ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವವರಲ್ಲಿ ಐವರು ಮಹಿಳಾ ಸಿಬ್ಬಂದಿ ಇದ್ದಾರೆ.

–ಪ್ರಸನ್ನಕುಮಾರ್, ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯ ಯೋಜನೆ)

ಖದೀಮನ ಸೆರೆ, 18.16 ಲಕ್ಷ ರೂ. ಮೌಲ್ಯದ ಆಭರಣ ವಶ



ಮೈಸೂರು,ಅ.13(ಆರ್‌ಕೆ)–ಮಹಿಳೆಯರ ಸರ ಕಳವು ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿರುವ ಅಶೋಕಪುರಂ ಠಾಣೆ ಪೊಲೀಸರು, 18,16,500 ರೂ. ಬೆಲೆಬಾಳುವ 305 ಗ್ರಾಂ ಚಿನ್ನ, 1,200 ಗ್ರಾಂ ಬೆಳ್ಳಿ ಆಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕ್, ಕಾರನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಶಾಂತಿನಗರ, ಬೀಡಿ ಕಾಲೋನಿ ನಿವಾಸಿ ಸೈಯದ್ ಅಲಿ ಅಲಿಯಾಸ್ ಸಲೀಂ (30) ಬಂಧಿತ ಆರೋಪಿಯಾಗಿದ್ದು, ತಲೆಮರೆಸಿಕೊಂಡಿರುವ ಮತ್ತಿಬ್ಬರಿಗಾಗಿ ಶೋಧ ನಡೆಯುತ್ತಿದೆ. ಸೆಪ್ಟೆಂಬರ್ 27ರಂದು ವಶಕ್ಕೆ ಪಡೆದು, ವಿಚಾರಣೆ ನಡೆಸಿದಾಗ ಇಬ್ಬರೊಂದಿಗೆ ಸೇರಿ ಬೈಕ್ ಮತ್ತು ಕಾರಿನಲ್ಲಿ ಕಾರ್ಯಾಚರಣೆ ನಡೆಸಿ ಅಶೋಕಪುರಂ, ಸರಸ್ವತಿಪುರಂ, ಆಲನಹಳ್ಳಿ, ಮೇಟಗಳ್ಳಿ, ಶ್ರೀರಂಗಪಟ್ಟಣ ಟೌನ್ ಹಾಗೂ ಪಾಂಡವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಹಿಳೆಯರಿಂದ ಚಿನ್ನದ ಸರ ಎಗರಿಸುತ್ತಿದ್ದನಲ್ಲದೆ, ಮನೆ ಕಳ್ಳತನ ಮಾಡಿದ್ದರು. ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಅವರ ಮಾರ್ಗದರ್ಶನದಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಕೆಆರ್. ಉಪವಿಭಾಗದ ಎಸಿಪಿ ಎಸ್.ಇ. ಗಂಗಾಧರ ಸ್ವಾಮಿ, ಅಶೋಕಪುರಂ ಠಾಣೆ ಪ್ರಭಾರ ಇನ್ಸ್‌ಪೆಕ್ಟರ್ ರವೀಂದ್ರ, ಸಬ್ ಇನ್ಸ್‌ಪೆಕ್ಟರ್ ಎಂ.ಕೆ.ಸ್ಮಿತಾ, ಸಿಬ್ಬಂದಿಗಳಾದ ರಾಜು, ನಾರಾಯಣಶೆಟ್ಟಿ, ಲೋಕೇಶ್, ಗಿರೀಶ್, ಮಹದೇವಯ್ಯ, ಬಸವರಾಜ ಮುನ್ಯಾಳ್, ಮಹೇಶ್, ಕೃಷ್ಣರಾಜು, ಮೋಹನ್ ಕುಮಾರ್, ಸಾಗರ್, ಸುರೇಶ್, ಹರೀಶ್, ಮೇಘ್ಯಾ ನಾಯಕ, ವೆಂಕಟೇಶ, ಶ್ರೀನಿವಾಸ, ಸೋಮಶೇಖರ್, ಹರೀಶ್ ಪಾಲ್ಗೊಂಡಿದ್ದರು.

ನಾಳೆ ಬಂಕಹಳ್ಳಿಯಲ್ಲಿ ಡಿಸಿ ಗ್ರಾಮ ವಾಸ್ತವ್ಯ



ಮೈಸೂರು, ಅ.13– 'ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆಗೆ' ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅ.15 ರಂದು ನಂಜನಗೂಡು ತಾಲೂಕು, ಹುಲ್ಲಹಳ್ಳಿ ಹೋಬಳಿ, ಬಂಕಹಳ್ಳಿ ಗ್ರಾಮದಲ್ಲಿ ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯ ಹಮ್ಮಿಕೊಳ್ಳಲಾಗಿದೆ. ಬಂಕಹಳ್ಳಿ ಗ್ರಾಮಸ್ಥರು, ಗ್ರಾಮದ ಸಮಸ್ಯೆಗಳ ಬಗ್ಗೆ ಮುಂಚಿತವಾಗಿಯೇ ಸಂಬಂಧಪಟ್ಟ ನಾಡಕಚೇರಿ, ಉಪತಹಸೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಮನವಿ ಸಲ್ಲಿಸಿ ಪರಿಸಿಕೊಳ್ಳಲು ತಿಳಿಸಲಾಗಿದೆ. ಜಿಲ್ಲಾಧಿಕಾರಿಗಳು ಭೇಟಿ ನೀಡಲಿರುವ ತಾಲೂಕು ಹೊರತುಪಡಿಸಿ, ಮೈಸೂರು ತಾಲೂಕಿನ ಜಯಪುರ ಹೋಬಳಿಯ ಮುರುಡಗಳ್ಳಿ ಗ್ರಾಮ, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು, ಚುಂಚನಕಟ್ಟೆ ಹೋಬಳಿಯ ಚೆನ್ನಂಗೆರೆ ಗ್ರಾಮ, ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಹೋಬಳಿಯ ಉದ್ಬೂರು ಗ್ರಾಮ, ಹುಣಸೂರು ತಾಲೂಕು ಹನಗೋಡು ಹೋಬಳಿಯ ನಾಗಾಪುರ ಹಾಡಿ–ಬ್ಲಾಕ್ ಗ್ರಾಮ, ಪಿರಿಯಾಪಟ್ಟಣ ತಾಲೂಕು ಹಾರನಹಳ್ಳಿ ಹೋಬಳಿಯ ಬೆಣಗಾಲು ಗ್ರಾಮ, ತಿ.ನರಸೀಪುರ ತಾಲೂಕು ಸೋಸಲೆ ಹೋಬಳಿಯ ದೊಡ್ಡ ಬಾಗಿಲು ಹಾಗೂ ಸರಗೂರು ಹೋಬಳಿಯ ಸರಗೂರು ಶಂಕಹಳ್ಳಿಗೆ ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರು ಭೇಟಿ ನೀಡುವರು ಎಂದು ಎಡಿಸಿ ಡಾ.ಮಂಜುನಾಥಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಕ್ರೀನಿಂಗ್ ಕಮಿಟಿ ರಚನೆ

ಮೈಸೂರು, ಅ.13– ಸಾರ್ವತ್ರಿಕ ಚುನಾವಣೆಗಳು, ಉಪ ಚುನಾವಣೆಗಳ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರು ಪರವಾನಗಿ ಪಡೆದಂತಹ ಶಸ್ತ್ರಾಸ್ತಗಳ ಠೇವಣಿ ಮಾಡುವಂತೆ ಸ್ಕ್ರೀನಿಂಗ್ ಕಮಿಟಿ ರಚಿಸಲಾಗಿದೆ. **ಕಮಿಟಿ ಒಳಗೊಂಡ ಅಧಿಕಾರಿಗಳು:** ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಮೈಸೂರು ಜಿಲ್ಲೆಯ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಅಪರ ಜಿಲ್ಲಾ ದಂಡಾಧಿಕಾರಿ, ಮೈಸೂರು ಜಿಲ್ಲೆ, ಜಿಲ್ಲೆಯ ಎಲ್ಲಾ ಪೊಲೀಸ್ ವೃತ್ತ ನಿರೀಕ್ಷಕರು. ಕಮಿಟಿಯು ಮುಂಬರುವ ಸಾರ್ವತ್ರಿಕ ಚುನಾವಣೆಗಳು, ಉಪಚುನಾವಣೆಗಳ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸಾರ್ವಜನಿಕರು ಪರವಾನಗಿಯನ್ನು ಪಡೆದು ಹೊಂದಿರುವ ಆಯುಧಗಳನ್ನು ಠೇವಣಿ ಇಡುವ ಸಂಬಂಧ ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ಪರಿಶೀಲಿಸಿ ಕ್ರಮವಹಿಸುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಅ.13– ಚೆಸ್ಕಾಂ ವತಿಯಿಂದ ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಅಕ್ಟೋಬರ್ 14ರ ಶುಕ್ರವಾರ ಬರಡನಪುರ, ಮಾವಿನಹಳ್ಳಿ, ಗೋಪಾಲಪುರ, ಮುಳ್ಳೂರು, ದಾರಿಪುರ ಭಾಗಶಃ, ರಾಯಲ್ ಇನ್ ಸರ್ಕಲ್, ಜಯದೇವನಗರ, ಭೈರವೇಶ್ವರನಗರ, ಲೋಕನಾಯಕನಗರ, ಆದಿತ್ಯ ಹೋಟೆಲ್ ಹಿಂಭಾಗ, ಸಂಜೀವಿನಿ ಸರ್ಕಲ್, ಮೇಟಗಳ್ಳಿ ಗ್ರಾಮ, ಮಧುರಾನಗರ, ಜಯನಗರ 1ನೇ ಕ್ರಾಸ್‌ನಿಂದ 20ನೇ ಕ್ರಾಸ್‌ವರೆಗೆ, ಆನಂದೂರು, ಚಿಕ್ಕನಹಳ್ಳಿ, ಯಡ್ಡಹಳ್ಳಿ ಭಾಗಶಃ, ಕಲ್ಲೂರು, ಜಯನಗರ ಕೆ–ಬ್ಲಾಕ್, ಚೆನ್ನಗಿರಿಕೊಪ್ಪಲು, ಚಿಕ್ಕಹರದನಹಳ್ಳಿ, ಶಿವರಾಂ ಬಡಾವಣೆ, ಶ್ರೀರಾಂಪುರ 2ನೇ ಹಂತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.


ಶಾಸಕ ಉದಯ್ ಗರುಡಾಚಾರ್‌ಗೆ ಜೈಲು ಶಿಕ್ಷೆ: ಅದೇ ಕೋರ್ಟ್‌ನಿಂದ ಜಾಮೀನು

ಬೆಂಗಳೂರು: ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಪ್ಪು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಬಿಜೆಪಿ ಶಾಸಕ ಉದಯ್ ಗರುಡಾಚಾರ್‌ಗೆ ಬೆಂಗಳೂರಿನ 42ನೇ ಎಸಿಎಂಎಂ ಕೋರ್ಟ್ ಶಿಕ್ಷೆ ವಿಧಿಸಿದೆ. 2 ತಿಂಗಳು ಜೈಲು ಶಿಕ್ಷೆಯ ಜೊತೆಗೆ 10 ಸಾವಿರ ರೂ. ದಂಡ ವಿಧಿಸಿತು. ಆದರೆ 3 ವರ್ಷಕ್ಕಿಂತ ಕಡಿಮೆ ಶಿಕ್ಷೆಯ ಆದೇಶ ಹಿನ್ನೆಲೆಯಲ್ಲಿ ಅದೇ ಕೋರ್ಟ್ ಶಾಸಕ ಉದಯ್ ಗರುಡಾಚಾರ್ ಗೆ ಜಾಮೀನು ಮಂಜೂರು ಮಾಡಿದೆ. ಜೊತೆಗೆ ಈ ಆದೇಶ ಪ್ರಶ್ನಿಸಿ ಮೇಲ್ಮನವಿ ಹೋಗಲು ಅವಕಾಶ ನೀಡಿದೆ. ಇದು ನನಗೆ ಗೊತ್ತಿಲ್ಲದೇ ಆದ ಎಡವಟ್ಟು ಆಗಿದ್ದು, ಈ ಆದೇಶ ಪ್ರಶ್ನಿಸಿ ಮೇಲ್ಮನವಿ ಹೋಗ್ತೀನಿ ಎಂದು ಶಾಸಕರು ಸ್ಪಷ್ಟಪಡಿಸಿದ್ದಾರೆ. ಉದಯ್ ಗರುಡಾಚಾರ್ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಎರಡು ಕ್ರಿಮಿನಲ್ ಪ್ರಕರಣಗಳ ಬಗ್ಗೆ ಮಾಹಿತಿ ಮುಚ್ಚಿಟ್ಟಿದ್ದಾರೆ ಎಂದು ಆರೋಪಿಸಿ ಹೆಚ್.ಜಿ.ಪ್ರಶಾಂತ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಮೈಸೂರಲ್ಲಿ ಇಂದಿನಿಂದ 3 ದಿನ ಗೋವಾ ದರ್ಶನ

- 'ಗೋವಾ@60' ಕಾರ್ಯಕ್ರಮದಡಿ ನಾನಾ ಕಾರ್ಯಕ್ರಮಗಳ ಆಯೋಜನೆ
- ಪೋರ್ಚುಗೀಸರಿಂದ ವಿಮುಕ್ತಿ ಹೊಂದಿ 60 ವರ್ಷ ಪೂರೈಸಿದ ಹಿನ್ನೆಲೆ ಸಂಭ್ರಮಾಚರಣೆ





ಮೈಸೂರು, ಅ.13(ಜಿಎ)–ಮೈಸೂರಿನಲ್ಲಿ ಮೂರು ದಿನಗಳು ಗೋವಾ ಸಂಸ್ಕೃತಿ ಮತ್ತು ಪರಂಪರೆಯನ್ನು ಸಾರುವ 'ಗೋವಾ@60' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಗೋವಾ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಅನಿಲ್ ದಲಾಲ್ ತಿಳಿಸಿದರು.

ಪೋರ್ಚುಗೀಸ್ ಆಳ್ವಿಕೆಯಿಂದ ಗೋವಾ ವಿಮೋಚನೆಗೊಂಡ 60ನೇ ವರ್ಷದ ಆಚರಣೆಯನ್ನು ಮೈಸೂರಿನಲ್ಲಿ ಆಯೋಜಿಸಿರುವ 'ಗೋವಾ @60' ಕಾರ್ಯಕ್ರಮ ಕುರಿತು ನಗರದ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೋರ್ಚುಗೀಸ್ ಆಳ್ವಿಕೆಯಿಂದ ಗೋವಾದ ವಿಮೋಚನೆಯ 60 ವರ್ಷಗಳ ಸಂಭ್ರಮಾಚರಣೆಗೆ ಗೋವಾ ಸರ್ಕಾರ ನಿರ್ಧರಿಸಿದೆ.

ಈ ಹಿನ್ನೆಲೆಯಲ್ಲಿ 2021ರಂದು ಅಂದಿನ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಸಮ್ಮುಖದಲ್ಲಿ ವಜ್ರ ಮಹೋತ್ಸವವನ್ನು ಆಚರಿಸಲಾಯಿತು. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಗಳು ನಡೆದಿದ್ದವು. ಗೋವಾದಲ್ಲಿ ಸಂಭ್ರಮಾಚರಣೆ ನಂತರ, ದೇಶಾದ್ಯಂತ ವರ್ಷಪೂರ್ತಿ ಗೋವಾ ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ವಜ್ರ ಮಹೋತ್ಸವವನ್ನು ಆಚರಿಸಲು ಸರ್ಕಾರ ನಿರ್ಧರಿಸಿದೆ ಅಹಮದಾಬಾದ್‌ನಿಂದ ಆರಂಭಗೊಂಡು, ಉದಯಪುರ, ವಾರಣಾಸಿ, ಮಧುರೈ ಮತ್ತು ತಿರುವನಂತಪುರಂ ನಗರಗಳಲ್ಲೂ ನಾನಾ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅ.14ರಿಂದ 16ರವರೆಗೆ 3 ದಿನಗಳ ಕಾಲ ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್ ಆವರಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಮೂರು ದಿನಗಳು ಗೋವಾ ಎಂದರೆ ಬರೀ ಸಮುದ್ರ ಮಾತ್ರವಲ್ಲ. ಬೆಟ್ಟ, ಗುಡ್ಡ, ವನ್ಯಸಂಕುಲ ಸೇರಿದಂತೆ ನಾನಾ ವೈವಿಧ್ಯತೆಗಳನ್ನು ಅನಾವರಣಗೊಳಿಸಲಾಗುತ್ತದೆ. ಅಂದು ಮಧ್ಯಾಹ್ನ 12ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಮೈಸೂರಿನ ಜನರು ವಿವಿಧ ಲೈವ್ ಇವೆಂಟ್‌ಗಳ ಮೂಲಕ ಗೋವಾದ ಆಹಾರ ಪದ್ಧತಿ, ಸಂಗೀತ, ನೃತ್ಯ, ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಸವಿಯಬಹುದಾಗಿದೆ ಎಂದರು.

ಇವೆಂಟ್‌ನ ಪ್ರಮುಖ ಆಕರ್ಷಣೆಗಳು ಗೋವಾದ ಸ್ಥಳೀಯ ಬ್ಯಾಂಡ್‌ಗಳಾದ ದಿ ಕ್ಲಿಕ್ಸಿ ಬ್ಯಾಂಡ್, ದಿ ಸ್ಟೀಲ್ ಜೊತೆಗೆ ಶಿಗ್ಮೋ ಪರೇಡ್, ಘೋಡೆ ಮೋಡ್ನಿ, ಝಾಗೋರ್, ದಿವ್ಲಿ – ದಿ ಲ್ಯಾಂಪ್ ಡ್ಯಾನ್ಸ್, ಕೊತ್ತಿ ಫುಗ್ಡಿ (ತೆಂಗಿನ ಚಿಪ್ಪಿನ ನೃತ್ಯ), ಪೋರ್ಚುಗೀಸ್ ಕೊರಿಡಿನೋ ಮುಂತಾದ ಸಾಂಸ್ಕೃತಿಕ ನೃತ್ಯಗಳು. ಮತ್ತು ಕಾರ್ನಿವಲ್ ಪರೇಡ್ ಅನ್ನು ಗೋನ್ ಡ್ಯಾನ್ಸ್ ಟ್ರೂಪ್ ಪ್ರದರ್ಶಿಸಲಾಗುತ್ತದೆ ಹಾಗೂ ಗೋವಾ ಕಾರ್ನಿವಲ್‌ನ ಮುಖ್ಯವಾದ ಕಿಂಗ್ ಮೊಮೊ ಅವರ ಮೆರವಣಿಗೆ ಪ್ರಮುಖ ಆಕರ್ಷಣೆಯಾಗಿದೆ ಎಂದರು. ಗೋಷ್ಠಿಯಲ್ಲಿ ಗೋವಾ ವಾರ್ತಾ ಮತ್ತು ಪ್ರಚಾರ ಇಲಾಖೆಯ ವಿಷ್ಣು ಗೌಂಕರ್ ಮತ್ತು ರಸಿಕಾ ನಾಯ್ಕ್ ಸೇರಿದಂತೆ ಗೋವಾದ ಅಧಿಕಾರಿಗಳು ಉಪಸ್ಥಿತರಿದ್ದರು.

ವಸ್ತ್ರ ಸಂಹಿತೆಯಲ್ಲಿ ಬದಲಾವಣೆ ಇಲ್ಲ



ಬೆಂಗಳೂರು, ಅ.13(ಕೆಎಂಶಿ)–ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ಹಿತದೃಷ್ಟಿಯಿಂದ ಕರ್ನಾಟಕ ಸರ್ಕಾರ ಶಾಲೆಗಳಲ್ಲಿ ನಿಗದಿಪಡಿಸಿದ ಸಮವಸ್ತ್ರ ಸಂಹಿತೆಯನ್ನು ಜಾರಿಗೊಳಿಸಿದ್ದು, ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದರ ಬಗ್ಗೆ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಹಿಜಾಬ್ ವಿಷಯಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ದ್ವಿ ಸದಸ್ಯ ಪೀಠದಿಂದ ವಿಭಿನ್ನ ತೀರ್ಪು ಹೊರಬಂದಿದೆ. ವಿವಾದ ವಿಸ್ತೃತ ಪೀಠಕ್ಕೆ ವರ್ಗಾವಣೆಯಾಗುವ ಸಾಧ್ಯತೆ ಇದೆ. ತೀರ್ಪಿನ ಕುರಿತು ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ನಾಳೆ ವಿದ್ಯುತ್ ಅದಾಲತ್

ಮೈಸೂರು,ಅ.13–ಚೆಸ್ಕಾಂ ವತಿಯಿಂದ ನ.ರಾ.ಮೊಹಲ್ಲಾ ವಿಭಾಗ ವ್ಯಾಪ್ತಿಯ ಉಪವಿಭಾಗಗಳಾದ ಕೇಂದ್ರ ಉಪವಿಭಾಗ, ಜ್ಯೋತಿನಗರದ ಜ್ಯೋತಿನಗರ ಉಪವಿಭಾಗ, ನ.ರಾ ಮೊಹಲ್ಲಾದ ಕೆ.ಕೆ ಹುಂಡಿ, ಚಾಮುಂಡಿಪುರಂ ಮುರುಡಗಳ್ಳಿ ಹಾಗೂ ವರುಣಾದ ಮರಿಗೌಡನಹುಂಡಿ ಹಾಗೂ ಕಾಳಿಸಿದ್ದನಹುಂಡಿ ಉಪ ವಿಭಾಗಗಳ ವ್ಯಾಪ್ತಿಯಲ್ಲಿರುವ ಗ್ರಾಹಕರಿಗೆ ಅ.15ರ ಬೆಳಗ್ಗೆ 11 ಗಂಟೆಗೆ ಎಲ್ಲಾ ಉಪ ವಿಭಾಗ ಕಚೇರಿಗಳಲ್ಲಿ ವಿದ್ಯುತ್ ಅದಾಲತ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಆಯಾ ಉಪವಿಭಾಗದ ವ್ಯಾಪ್ತಿಯ ಆಯ್ದ ಗ್ರಾಮಗಳಲ್ಲಿ ನಡೆಯುವ ವಿದ್ಯುತ್ ಅದಾಲತ್ ಕಾರ್ಯಕ್ರಮಕ್ಕೆ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ನ.ರಾ. ಮೊಹಲ್ಲಾ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಮೈಸೂರಲ್ಲಿ ಹೆಚ್‌ಆರ್ ದಸರಾ–2022

ಚರ್ಚಾ ಗೋಷ್ಠಿಯ ಜೊತೆಗೆ ಕಾರ್ಪೊರೇಟ್ ಸಾಂಸ್ಕೃತಿಕ ಸ್ಪರ್ಧೆಗಳು

ಮೈಸೂರು,ಅ.13(ಪಿಎಂ)–ಮೈಸೂರು ಹೆಚ್‌ಆರ್ ಫೋರಮ್ ಹಾಗೂ ಎಡಿನ್ ಬ್ರಿಡ್ಜ್ ಫೌಂಡೇಷನ್ ಸೇರಿದಂತೆ ವಿವಿಧ ಕಂಪನಿಗಳ ಸಂಯುಕ್ತಾಶ್ರಯದಲ್ಲಿ 2ನೇ ವರ್ಷದ ಹೆಚ್‌ಆರ್ ದಸರಾ–2022 ಅನ್ನು ಅ.14ರಿಂದ ವಿವಿಧ ದಿನಗಳಂದು ನ.25ರವರೆಗೆ ಆಯೋಜಿಸಲಾಗಿದೆ ಎಂದು ಎಡಿನ್ ಬ್ರಿಡ್ಜ್ ಫೌಂಡೇಷನ್‌ನ ಎಡಿನ್ ಸಿನರ್ಜಿ ಮುಖ್ಯಸ್ಥ ಎಂ.ಫಣೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲ್ಲರ್ ಟೋನ್ ಟೆಕ್ಸ್‌ಟೈಲ್ಸ್ ಮತ್ತು ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಪ್ರಾಯೋಜಕತ್ವದಲ್ಲಿ ಹೆಚ್‌ಆರ್ (ಮಾನವ ಸಂಪನ್ಮೂಲ) ದಸರಾ ನಡೆಯುತ್ತಿದ್ದು, ಇದರಡಿ 9 ವಿಧದ ಕಾರ್ಯಕ್ರಮಗಳು ನಡೆಯಲಿವೆ. ಅ.14ರಂದು ಸಿಎಸ್‌ಆರ್ ಚಟುವಟಿಕೆಯಡಿ ಮೈಸೂರಿನ ಜಯನಗರದ ಛಾಯಾದೇವಿ ಅನಾಥಾಶ್ರಮದ 22 ಹೆಣ್ಣು ಮಕ್ಕಳಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದು ಮಧ್ಯಾಹ್ನ 12ಕ್ಕೆ ಮೈಸೂರು ಅರಮನೆ ಬಲರಾಮ ದ್ವಾರದಲ್ಲಿ ಈ ಮಕ್ಕಳಿಗೆ ಉಚಿತವಾಗಿ ಹೊಸ ಬಟ್ಟೆಗಳನ್ನು ವಿತರಿಸಲಾಗುವುದು ಎಂದರು.



ಬಳಿಕ ಈ ಮಕ್ಕಳನ್ನು ಮೈಸೂರಿನ ನಾನಾ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದೊಯ್ಯಲಾಗುವುದು. ನಂತರ ಈ ಮಕ್ಕಳಿಗೆ ಪಂಚತಾರಾ ಹೋಟೆಲ್‌ನಲ್ಲಿ ಊಟದ ವ್ಯವಸ್ಥೆ ಮಾಡಲಾಗುವುದು. ಅ.19ರಂದು ಮಧ್ಯಾಹ್ನ 2.30ಕ್ಕೆ ಉದ್ಯಮಗಳ ಮಾನವ ಸಂಪನ್ಮೂಲ ವಿಭಾಗ ಹಾಗೂ ವಹಿವಾಟು ಕುರಿತು ವೆಬಿನಾರ್ ಮೂಲಕ ಚರ್ಚಾ ಕಾರ್ಯಕ್ರಮ ನಡೆಯಲಿದೆ. ಅನೇಕ ಸಂಸ್ಥೆಗಳ ಮಾನವ ಸಂಪನ್ಮೂಲ ಅಧಿಕಾರಿಗಳು, ವಿದ್ಯಾಸಂಸ್ಥೆಗಳ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಚರ್ಚೆಯಲ್ಲಿ ಭಾಗವಹಿಸಬಹುದು. ಅ.21ರಂದು ಬೆಳಗ್ಗೆ 9.30ಕ್ಕೆ ವಿವಿಧ ಕಂಪನಿಗಳ 50 ಮಂದಿ ಹೆಚ್‌ಆರ್ ಅಧಿಕಾರಿಗಳು ಕಡಕೊಳ ಕೈಗಾರಿಕಾ ಪ್ರದೇಶದ ಮೂರು ಕೈಗಾರಿಕೆಗಳಿಗೆ ಭೇಟಿ ನೀಡಲಿದ್ದಾರೆ ಎಂದು ತಿಳಿಸಿದರು.

ಅ.28ರಂದು ಬೆಳಗ್ಗೆ 9.30ಕ್ಕೆ ಮಾನಸಗಂಗೋತ್ರಿಯ ಬೀಮ್ಸ್ ಸಂಸ್ಥೆಯಲ್ಲಿ ಕಾರ್ಪೊರೇಟ್ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿವೆ. ಆಸಕ್ತ ಉದ್ಯೋಗಿಗಳು ನೋಂದಣಿ ಮಾಡಿಕೊಳ್ಳಬೇಕು. ನ.11ರಂದು ಬೆಳಗ್ಗೆ 9.30ಕ್ಕೆ ಮೈಸೂರಿನ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್‌ನಲ್ಲಿ ಐಟಿ ಕಂಪನಿಯ ಹೆಚ್‌ಆರ್ ಅಧಿಕಾರಿಗಳಿಗೆ ಕಾರ್ಮಿಕ ಸಂಹಿತೆ ಕುರಿತು ವಿಚಾರಗೋಷ್ಠಿ ನಡೆಯಲಿದೆ. ನ.14ರಂದು ಬೆಳಗ್ಗೆ 9.30ಕ್ಕೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಹೆಚ್‌ಆರ್ ಮತ್ತು ವಹಿವಾಟು ಕುರಿತಂತೆ ಬಿ.ಕಾಂ, ಬಿಬಿಎ, ಎಂ.ಕಾಂ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿದೆ. ವಿಜೇತ ತಂಡಕ್ಕೆ ನಗದು ಬಹುಮಾನ ನೀಡಲಾಗುವುದು ಎಂದು ವಿವರಿಸಿದರು.

ನ.18ರಂದು ಬೆಳಗ್ಗೆ 9.30ಕ್ಕೆ ಮೈಸೂರಿನ ಹೋಟೆಲ್ ಕಂಟ್ರಿ ಇನ್‌ನಲ್ಲಿ ಹೆಚ್‌ಆರ್ ಅಧಿಕಾರಿಗಳು ಮತ್ತು ತರಬೇತಿ–ಉದ್ಯೋಗ ನಿಯೋಜನಾಧಿಕಾರಿಗಳ (ಟಿಪಿಓ) ಸಮಾವೇಶ ಏರ್ಪಡಿಸಲಾಗಿದೆ. ನ.23ರಂದು ಬೆಳಗ್ಗೆ 9.30ಕ್ಕೆ ಎಸ್‌ಡಿಎಂ–ಐಎಂಡಿ ಕಾಲೇಜಿನಲ್ಲಿ ಹೆಚ್‌ಆರ್ ಮತ್ತು ಕೈಗಾರಿಕಾ ಸಾಮಾಜಿಕ ಜವಾಬ್ದಾರಿ ಕುರಿತು ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. ನ.25ರಂದು ಬೆಳಗ್ಗೆ 9.30ಕ್ಕೆ ಎಸ್‌ಡಿಎಂ–ಐಎಂಡಿ ಕಾಲೇಜಿನಲ್ಲಿ ಮೈಸೂರು ಕೈಗಾರಿಕಾ ಕ್ಷೇತ್ರದ ಬೆಳವಣಿಗೆ, ಉದ್ಯೋಗಾವಕಾಶ ಕುರಿತು ಚರ್ಚೆ ಏರ್ಪಡಿಸಲಾಗಿದೆ. ಇದೇ ವೇಳೆ ಹೆಚ್‌ಆರ್ ದಸರಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಹೆಚ್‌ಆರ್ ದಸರಾ ಮಾಹಿತಿಗೆ ಮೊ.ಸಂ. 70220 36998 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಎಡಿನ್ ಬ್ರಿಡ್ಜ್ ಮುಖ್ಯಸ್ಥ ಪ್ರತಾಪ್ ಹಾಸನ್, ಎನ್‌ಐಇ ಕಾಲೇಜಿನ ಟಿಪಿಓ ಅಧಿಕಾರಿ ಹರ್ಷಿತ್ ದಿವಾಕರ್, ಎಂಐಟಿ ಕಾಲೇಜಿನ ಟಿಪಿಓ ಅಧಿಕಾರಿ ಶಿವಸಾಗರ್ ಗೋಷ್ಠಿಯಲ್ಲಿದ್ದರು.

ಅಪಪ್ರಚಾರಗಳಿಗೆ ಅಭಿವೃದ್ಧಿ ಕಾರ್ಯದ ಮೂಲಕವೇ ಉತ್ತರ

ವಾಟರ್‌ಹೆಡ್ ಟ್ಯಾಂಕ್ ಕಾಮಗಾರಿಗೆ ಶಾಸಕ ಎಂ.ಅಶ್ವಿನ್ ಕುಮಾರ್ ಗುದ್ದಲಿ ಪೂಜೆ

ತಿ.ನರಸೀಪುರ, ಅ.13– ಕ್ಷೇತ್ರದಲ್ಲಿ ಕೆಲವರು ಅಪಪ್ರಚಾರ ನಡೆಸುತ್ತಿದ್ದು, ಇದಕ್ಕೆ ನಾನು ಪ್ರತಿಕ್ರಿಯಿಸುವುದಿಲ್ಲ. ಬದಲಿಗೆ ಅಭಿವೃದ್ಧಿ ಕಾರ್ಯಗಳ ಮೂಲಕವೇ ತಕ್ಕ ಉತ್ತರ ನೀಡುತ್ತೇನೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಕಳ್ಳಿಪುರದಲ್ಲಿ ವಾಟರ್‌ಹೆಡ್ ಟ್ಯಾಂಕ್ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಿ ಹಣ ಬಿಡುಗಡೆ ಮಾಡಿಸಿ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯ ಮಾಡುತ್ತಿದ್ದೇನೆಯೇ ಹೊರತು ಯಾರ ಹಣದಿಂದಲೂ ಅಲ್ಲ ಎಂದರು.

ಕ್ಷೇತ್ರದಲ್ಲಿ 3.65 ಕೋಟಿ ರೂ. ವೆಚ್ಚದಲ್ಲಿ ಚರಂಡಿ, ರಸ್ತೆ, ಅಂಗನವಾಡಿ, ಕನಕ ಭವನ, ಬಸವ ಭವನ, ಡಾ.ಬಿ.ಆರ್.ಅಂಬೇಡ್ಕರ್ ಭವನ ಮತ್ತು ಇನ್ನಿತರ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನಡೆಸಲಾಗಿದೆ. ಇದನ್ನು ಸಹಿಸದ ಕೆಲವರು ಈಗ ನಡೆಸುತ್ತಿರುವ ಕಾಮಗಾರಿಗಳು 2018ಕ್ಕಿಂತ ಹಿಂದಿನವು ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಅವುಗಳಿಗೆ ಅಭಿವೃದ್ಧಿ ಕಾರ್ಯಗಳ ಮೂಲಕ ತಕ್ಕ ಉತ್ತರ ನೀಡುತ್ತೇನೆ. ಯಾವುದೇ ಕಾರಣಕ್ಕೂ ಆರೋಪಕ್ಕೆ ಪ್ರತಿಕ್ರಿಯಿಸುವುದಿಲ್ಲ ಎಂದರು.



ನಾನು ದ್ವೇಷದ ರಾಜಕಾರಣ ಮಾಡುವುದಿಲ್ಲ. ಕ್ಷೇತ್ರದ ಅಭಿವೃದ್ಧಿ ನನ್ನ ಮೊದಲ ಆದ್ಯತೆ. ಒಬ್ಬ ಜಿಪಂ ಸದಸ್ಯನಾಗಿ ಮತ್ತು ಈ ಕ್ಷೇತ್ರದ ಶಾಸಕನಾಗಿ ಕ್ಷೇತ್ರದ ಜನರ ಮನಸ್ಸು ಮುಟ್ಟಿದ್ದೇನೆ. ಕ್ಷೇತ್ರದ ಪ್ರತಿ ಮತದಾರನ ಕಷ್ಟಗಳಿಗೆ ಸ್ಪಂದಿಸುವ ಶಕ್ತಿಯನ್ನು ದೇವರು ನನಗೆ ಕರುಣಿಸಲಿ ಎಂಬ ಆಶಯ ವ್ಯಕ್ತಪಡಿಸಿದರು. ಯಾವುದೇ ಪಕ, ವ್ಯಕ್ತಿ ನನ್ನ ಬಳಿ ಬಂದರೂ ಪಕ್ಷಪಾತ ಮಾಡದೆ ಅವರ ಕೆಲಸ ಮಾಡಿಕೊಡುವುದಾಗಿ ತಿಳಿಸಿದರು.

ಉಕ್ಕಲಗೆರೆ ಗ್ರಾಪಂ ಸದಸ್ಯ ಕುಮಾರ್ ಮಾತನಾಡಿ, ಯುವಕರು, ಸಂವೇದನಾಶೀಲ, ಕ್ರಿಯಾಶೀಲ ಮತ್ತು ಮಿತಭಾಷಿಗಳು ಆದ ಇಂತಹ ಶಾಸಕರನ್ನು ಪಡೆದಿರುವುದು ಕ್ಷೇತ್ರದ ಜನರ ಪುಣ್ಯ. ಅಭಿವೃದ್ಧಿಯನ್ನು ರಾಜಕಾರಣ ಮಾಡಕೂಡದು. ಅಭಿವೃದ್ಧಿಯಲ್ಲಿ ಯಾರಾದರೂ ಮಾಡಲಿ ಅವರನ್ನು ಬೆಂಬಲಿಸೋಣ ಎಂದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ಜಿಪಂ ಮಾಜಿ ಸದಸ್ಯ ಜಯಪಾಲ ಭರಣಿ, ಜೆಡಿಎಸ್ ತಾಲೂಕು ಅಧ್ಯಕ್ಷ ಚಿನ್ನಸ್ವಾಮಿ, ಅಶೋಕ, ಶಂಭುದೇವನಪುರ ರಮೇಶ, ಬಸವರಾಜು, ಸೋಸಲೆ ಧರ್ಮರತ್ನಕುಮಾರ್, ತಾಪಂ ಇಓ ಕೃಷ್ಣ, ಕೆಆರ್‌ಐ ಡಿಎಲ್ ಎಇಇ ತಿಪ್ಪಾರೆಡ್ಡಿ, ನೀರಾವರಿ ಇಲಾಖೆ ಬನ್ನೂರು ಎಇಇ ಶಿವಮಾಧವನ್, ಸಿಡಿಪಿಓ ಭವ್ಯಶ್ರೀ, ಪಿಆರ್‌ಇಡಿ ಜೆಇಗಳಾದ ಮಂಜುನಾಥ್, ರಾಜುನಾಯಕ, ಪಿಡಬ್ಲ್ಯುಡಿ ಇಲಾಖೆ ಜೆಇ ಮೋಹನ್, ನೀರಾವರಿ ಇಲಾಖೆ ಎಇ ರವೀಂದ್ರನಾಥ, ನಿರ್ಮಿತ ಕೇಂದ್ರದ ಜೆಇ ನಿಂಜನ್ ಕುಮಾರ್, ಕೆಆರ್‌ಐಡಿಎಲ್ ಜೆಇ ದಿಲೀಪ್ ಕುಮಾರ್, ಪಿಡಿಓಗಳಾದ ಲಿಂಗರಾಜು, ಆರ್.ನಿರ್ಮಲ, ಆರಾಧ್ಯ, ಕೃಷ್ಣಪ್ಪ ಇತರರಿದ್ದರು.

ಸಮಾಜದ ಒಳಿತಿಗಾಗಿ ಜೀವನ ಮುಡುಪಾಗಿಟ್ಟ ರಾಜೇಂದ್ರ ಶ್ರೀ

ನಂಜನಗೂಡು, ಅ.13– ಸಂಕಷ್ಟದ ಪರಿಸ್ಥಿತಿಯಲ್ಲೂ ತ್ರಿವಿಧ ದಾಸೋಹವನ್ನು ವ್ರತವನ್ನಾಗಿಸಿಕೊಂಡು ಸಮಾಜದ ಒಳಿತಿಗಾಗಿ ಇಡೀ ಜೀವನವನ್ನೇ ಮುಡುಪಾಗಿಟ್ಟ ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳು ಪ್ರಾತಃಸ್ಮರಣೀಯರಾಗಿದ್ದಾರೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣೆ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ತಿಳಿಸಿದರು.



ನಗರದ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ಗುರುವಾರ ಆಯೋಜಿಸಿದ್ದ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 107ನೇ ಜಯಂತಿಯಲ್ಲಿ ಮಾತನಾಡಿದ ಅವರು, ಜಗತ್ತಿನ ಒಳಿತಿಗಾಗಿ ನಾವೇನು ಮಾಡಬೇಕೆಂಬ ಸೂಕ್ಷ್ಮ ಸಂವೇದನೆಯುಳ್ಳ ರಾಜೇಂದ್ರ ಶ್ರೀಗಳು ಸಮಾಜವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಉತ್ತರ ಕಂಡುಕೊಳ್ಳುವ ಪ್ರಯತ್ನಕ್ಕೆ ಮುಂದಾದರು. ಮಕ್ಕಳಿಗೆ ಶಿಕ್ಷಣ, ದಾಸೋಹ, ಆಶ್ರಯ ನೀಡುವ ಮೂಲಕ ಬಡತನ, ಅನಕ್ಷರತೆ ನಿವಾರಣೆ ಮಾಡಬಹುದಾಗಿದೆ ಎಂಬುದನ್ನು ಅರಿತು ತ್ರಿವಿಧ ದಾಸೋಹವನ್ನು ತಮ್ಮ ಜೀವನದುದ್ದಕ್ಕೂ ವ್ರತವನ್ನಾಗಿ ಮಾಡಿಕೊಂಡು ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಶ್ರಯದಾತರಾದರು ಎಂದು ಬಣ್ಣಿಸಿದರು.

ರಾಜೇಂದ್ರ ಶ್ರೀಗಳ ಬಳಿ ಬಡತನ, ಹಸಿವು, ಅನಕ್ಷರತೆ ಬಗ್ಗೆ ಯಾರೂ ಸಮಸ್ಯೆ ಹೇಳಿಕೊಂಡು ಹೋಗಲಿಲ್ಲ. ಸಮಸ್ಯೆಯ ಸುಳಿಯಲ್ಲಿ ಬಳಲಿ ಬೆಂಡಾಗಿದ್ದ ಜನರ ಬಳಿಗೆ ಹೋದ ರಾಜೇಂದ್ರ ಶ್ರೀಗಳು ನೆರವಿಗೆ ನಿಂತರು. ಬಡವರ್ಗದ ಮಕ್ಕಳಿಗೆ ಆಶ್ರಯ ನೀಡಿ, ಹಸಿವು ನೀಗಿಸಿ ಶಿಕ್ಷಣ ಕೊಡಿಸಿ ಉತ್ತಮ ಪ್ರಜೆಯಾಗಿ ರೂಪಿಸುವಲ್ಲಿ ಅವರ ಪಾತ್ರ ಅಪಾರ. ಅವರ ಒಟ್ಟು ಜೀವನವನ್ನು ಒಮ್ಮೆ ಮನನ ಮಾಡಿಕೊಂಡರೆ ನಮ್ಮ ಅರಿವಿಗೆ ಬಾರದೇ ನಮ್ಮಲ್ಲಿ ವಿನಯವಂತಿಕೆ, ಸರಳತೆ, ಸಜ್ಜನಿಕೆ ಮೂಡುವುದರಲ್ಲಿ ಸಂದೇಹವಿಲ್ಲ ಎಂದರು.

ಮೈಸೂರಿನ ಕುಂದೂರು ಮಠದ ಶರತ್‌ಚಂದ್ರ ಸ್ವಾಮೀಜಿ ನುಡಿ ನಮನ ಸಲ್ಲಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಜಶಿರಾ ಹವ್ಯಾಸಿ ಭಜನಾ ತಂಡ ವಚನ ಗಾಯನ ನಡೆಸಿಕೊಟ್ಟರು. ನಗರಸಭೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆರ್.ಶ್ರೀನಿವಾಸ್, ಪ್ರಾಂಶುಪಾಲ ವಿದ್ಯಾಶಂಕರ್, ಉಪನ್ಯಾಸಕರಾದ ಕೆ.ಪಿ.ವಿಜಯಕುಮಾರ್, ಎಂ.ಆರ್.ವಿಶ್ವನಾಥ್, ಸೌಮ್ಯ, ಡಾ.ಜೆ.ಕೆ.ಸದಾಶಿವ ಶೈಲೇಂದ್ರ, ಪ್ರಭುಸ್ವಾಮಿ ಸೇರಿದಂತೆ ಇತರರಿದ್ದರು.

ಆರ್ಯ ಈಡಿಗ ಸಂಘದಿಂದ ನಾರಾಯಣಗುರು ಜಯಂತಿ



ಹುಣಸೂರು, ಅ.13– ಸಾಮಾಜಿಕ ಅಸಮತೋಲನದಿಂದ ತಳ ಸಮುದಾಯ ಎದುರಿಸುತ್ತಿದ್ದ ಯಾತನೆ ವಿರೋಧಿಸಿ, ಬಸವಣ್ಣನವರಿಂದ ಹಿಡಿದು ನಾರಾಯಣ ಗುರುವಿನವರೆಗೂ ನಡೆದ ಹೋರಾಟದ ಫಲದಿಂದ ಇಂದು ಸರ್ವ ಸಮುದಾಯಗಳು ಅಭಿವೃದ್ಧಿ ಪಥದಲ್ಲಿವೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ ತಿಳಿಸಿದರು.

ನಗರದಲ್ಲಿ ಆರ್ಯ ಈಡಿಗ ಸಮುದಾಯದಿಂದ ಹಮ್ಮಿಕೊಂಡಿದ್ದ ನಾರಾಯಣ ಗುರು ಜಯಂತಿಯಲ್ಲಿ ಮಾತನಾಡಿದ ಅವರು, ದೇಶ ಸ್ವಾತಂತ್ರ್ಯ ಪಡೆದು 75 ವರ್ಷ ಕಳೆದಿದ್ದರೂ ಇಂದಿಗೂ ಸಾಮಾಜಿಕ ಅಸಮತೋಲನ ಮತ್ತು ಅಸ್ಪೃಶ್ಯತೆ ತಳ ಸಮುದಾಯದವರಿಗೆ ಶಾಪವಾಗಿದೆ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಸಮಾಜದಲ್ಲಿ ಸಾಮಾಜಿಕ ನ್ಯಾಯ ತರುವ ದಿಕ್ಕಿನಲ್ಲಿ ಅನೇಕ ಮಹನೀಯರು ವಿವಿಧ ಸ್ವರೂಪದಲ್ಲಿ ಹೋರಾಟ ನಡೆಸಿ, ತಮ್ಮದೇ ಮಾರ್ಗದಲ್ಲಿ ಸಾಮಾಜಿಕ ನ್ಯಾಯ ಕಂಡುಕೊಂಡಿದ್ದರು. ಅವರಲ್ಲಿ ನಾರಾಯಣ ಗುರು ಸಹ ಒಬ್ಬರು. ಈ ಎಲ್ಲಾ ಹೋರಾಟಕ್ಕೆ ಕಳಸವಿಟ್ಟಂತೆ ಅಂಬೇಡ್ಕರ್ ಸಂವಿಧಾನದ ಮೂಲಕ ಪ್ರತಿಯೊಂದು ಸಮಾಜಕ್ಕೆ ಸಾಮಾಜಿಕ ನ್ಯಾಯ ಕೊಡಿಸುವ ದಿಕ್ಕಿನಲ್ಲಿ ಸಫಲರಾಗಿದ್ದಾರೆ ಎಂದರು.

ಆರ್ಯ ಈಡಿಗ ಸಮಾಜದ ಮುಖಂಡರಾದ ಶ್ರೀನಿವಾಸ್, ಮಹೇಶ್, ಜಗದೀಶ್, ಸಂತೋಷ್, ರಾಹುಲ್ ಆರ್ಯ, ವಿಶ್ವನಾಥ್, ನಗರಸಭೆ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ಸದಸ್ಯರಾದ ಶ್ರೀನಾಥ್, ಕೃಷ್ಣರಾಜಗುಪ್ತ, ಶರವಣ, ದೇವರಾಜ್, ರಮೇಶ್ ಹಾಗೂ ಮುಖಂಡರು ಹಾಜರಿದ್ದರು.

ಹೆಬ್ಯಾದಲ್ಲಿ ಅಂಬೇಡ್ಕರ್ ಭವನಕ್ಕೆ ಭೂಮಿಪೂಜೆ



ನಂಜನಗೂಡು, ಅ.13– ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಪಾಲಿಸಿದಾಗ ಮಾತ್ರ ಸಮಾನತೆಯ ಆದರ್ಶ ಸಮಾಜ ನಿರ್ಮಾಣ ಸಾಧ್ಯ ಎಂದು ಶಾಸಕ ಡಾ.ಯತೀಂದ್ರ ತಿಳಿಸಿದರು. ತಾಲೂಕಿನ ಹೆಬ್ಯಾ ಗ್ರಾಮದಲ್ಲಿ ಗುರುವಾರ 30 ಲಕ್ಷ ರೂ. ವೆಚ್ಚದ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ಅಂಬೇಡ್ಕರ್ ಸಮುದಾಯ ಭವನ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಹೆಬ್ಯಾ ಗ್ರಾಮದಿಂದ ಅಡಕನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ 1 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಶೀಘ್ರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಈ ವೇಳೆ ತಾಂಡವಪುರ ಗ್ರಾಪಂ ಅಧ್ಯಕ್ಷೆ ಪದ್ಮ, ಮುಖಂಡರಾದ ರಾಜು, ಮಾದಪ್ಪ ಶಿವಕುಮಾರ್, ಬಿ.ಪಿ.ಮಹದೇವು, ಅರ್ಕೇಶ್, ರವಿ, ಶಿವನಂಜು, ಕಾಂಗ್ರೆಸ್ ಯುವ ಘಟಕ ಅಧ್ಯಕ್ಷ ಗಿರೀಶ್ ಮತ್ತಿತರರಿದ್ದರು.

ಕಾಳೇನಹಳ್ಳಿಹೊಸಕೊಪ್ಪಲು ಗ್ರಾಮಸ್ಥರಿಂದ ರಸ್ತೆ ದುರಸ್ತಿ



ಕೆ.ಆರ್.ನಗರ, ಅ.13– ತಾಲೂಕಿನ ಕಾಳೇನಹಳ್ಳಿಹೊಸಕೊಪ್ಪಲು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಹಾಳಾಗಿದ್ದು, ಸಂಬಂಧಪಟ್ಟ ಇಲಾಖೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ದುರಸ್ತಿ ಪಡಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗದ ಹಿನ್ನೆಲೆಯಲ್ಲಿ ಗ್ರಾಮಸ್ಥರೇ ರಸ್ತೆ ದುರಸ್ತಿ ಮಾಡಿಸಿದ್ದಾರೆ.

ಈ ಕಾರ್ಯಕ್ಕೆ ಕಾಳೇನಹಳ್ಳಿಹೊಸಕೊಪ್ಪಲು ಗ್ರಾಪಂ ಸದಸ್ಯ ಮಾರ್ಕ್ ಮಹದೇವ್ 50 ಸಾವಿರ ರೂ. ವೈಯಕ್ತಿಕ ಧನಸಹಾಯ ಮಾಡಿದ್ದು, ಗ್ರಾಮಸ್ಥರು ಮತ್ತು ಯುವ ಮುಖಂಡರ ಸಹಕಾರದೊಂದಿಗೆ ರಸ್ತೆ ಅಭಿವೃದ್ಧಿಪಡಿಸಲಾಗಿದೆ.

ಈ ವೇಳೆ ಮಾತನಾಡಿದ ಗ್ರಾಮಸ್ಥರು, ರಸ್ತೆ ಅಭಿವೃದ್ಧಿಪಡಿಸುವಂತೆ ಲೋಕೋಪಯೋಗಿ ಇಲಾಖೆ ಮತ್ತು ಶಾಸಕರಿಗೂ ಮನವಿ ಸಲ್ಲಿಸಿದ್ದರೂ, ರಸ್ತೆ ಅಭಿವೃದ್ಧಿಪಡಿಸದ ಹಿನ್ನೆಲೆಯಲ್ಲಿ ಗ್ರಾಮಸ್ಥರೆಲ್ಲಾ ಸೇರಿ ರಸ್ತೆ ದುರಸ್ತಿಗೊಳಿಸಿದ್ದೇವೆ ಎಂದರು.

ದೊಡ್ಡಕೊಪ್ಪಲು ಗ್ರಾಪಂ ಅಧ್ಯಕ್ಷ ನಂಜುಂಡ, ಉಪಾಧ್ಯಕ್ಷೆ ಸವಿತಾ, ಸ್ವರಾಜ್ ಇಂಡಿಯಾ ಪಕ್ಷದ ತಾಲೂಕು ಅಧ್ಯಕ್ಷ ಗರುಡಗಂಭಸ್ವಾಮಿ, ಗ್ರಾಮಸ್ಥರಾದ ರೇವಣ್ಣ, ಕರಿಗೌಡ, ಜಯರಾಮು, ಪುಟ್ಟಸ್ವಾಮಿ, ಮಂಜುನಾಥ್, ಮಾದೇಗೌಡ, ಯೋಗೀಶ್, ಮಧು ಕುಮಾರ್, ಪಾಂಡು, ಸತೀಶ್ ಮತ್ತು ಗ್ರಾಮಸ್ಥರು ಹಾಜರಿದ್ದರು.



ತಿ.ನರಸೀಪುರ ತಾಲೂಕು ಕಸಾಪ ವತಿಯಿಂದ ಶ್ರೀವೀರ ಮದಕರಿ ನಾಯಕರ 280ನೇ ಜಯಂತ್ಯುತ್ಸವವನ್ನು ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಕಚೇರಿ ಆವರಣದಲ್ಲಿ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ನೀಲಸೋಗೆ ಮಹೇಶ್, ಉಪನ್ಯಾಸಕ ಕುಮಾರಸ್ವಾಮಿ, ವಿಚಾರವಾದಿ ಪ್ರಭುಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಅಣ್ಣಯ್ಯ ಸ್ವಾಮಿ, ಸೋಮುದಾದಾ, ಮಾದೇಶ, ಕುಮಾರಸ್ವಾಮಿ ಹಾಜರಿದ್ದರು.

ನಾಳೆ ವಿವಿಧೆಡೆ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮ

ಚುಂಚನಕಟ್ಟೆ, ಅ.13– ಸಾಲಿಗ್ರಾಮ ತಾಲೂಕಿನ ಚನ್ನಂಗೆರೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಅ.15ರಂದು ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಮತ್ತು ಶಾಸಕರ ಜನಸಂಪರ್ಕ ಸಭೆಗಳು ನಡೆಯಲಿವೆ.

ಶಾಸಕ ಸಾ.ರಾ.ಮಹೇಶ್ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಚನ್ನಂಗೆರೆ ಗ್ರಾಪಂ ಅಧ್ಯಕ್ಷೆ ಸವಿತಾ, ಉಪಾಧ್ಯಕ್ಷೆ ರತ್ನಮಣಿ ಮತ್ತು ತಾಲೂಕು ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು ಭಾಗವಹಿಸುವರು. ಅಂದು ಬೆಳಗ್ಗೆ 10.30ಕ್ಕೆ ಕೋಳೂರು, 11.30ಕ್ಕೆ ಬಂಡಹಳ್ಳಿ, 12.30ಕ್ಕೆ ಸಣ್ಣೇಗೌಡನಕೊಪ್ಪಲು, 1.30ಕ್ಕೆ ಚಿಕ್ಕಹನಸೋಗೆ, 3 ಗಂಟೆಗೆ ಎರೆಮನುಗನಹಳ್ಳಿ ಮತ್ತು 4 ಗಂಟೆಗೆ ಚನ್ನಂಗೆರೆ ಗ್ರಾಮದಲ್ಲಿ ಸಭೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಲ್ಲಸಲ್ಲದ ಆರೋಪದಿಂದ ನನ್ನ ಗೌರವಕ್ಕೆ ಚ್ಯುತಿ: ಗ್ರಾಪಂ ಅಧ್ಯಕ್ಷೆ

ತಿ.ನರಸೀಪುರ, ಅ.13– ಗ್ರಾಪಂ ಸದಸ್ಯ ಅಡುಗೆ ಕುಮಾರ್ ಇಲ್ಲಸಲ್ಲದ ಆರೋಪದ ಮೂಲಕ ನನ್ನ ಗೌರವಕ್ಕೆ ಚ್ಯುತಿ ತಂದಿದ್ದಾರೆ ಎಂದು ಉಕ್ಕಲಗೆರೆ ಗ್ರಾಪಂ ಅಧ್ಯಕ್ಷೆ ಶಿವಮ್ಮ ಆರೋಪಿಸಿದರು.

ತಾಲೂಕಿನ ಉಕ್ಕಲಗೆರೆ ಗ್ರಾಮದ ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದಸ್ಯ ಕುಮಾರ್ ಗ್ರಾಪಂ ಅಧ್ಯಕ್ಷೆಯಾಗಿರುವ ನನ್ನನ್ನು ಮುಗ್ಧೆ ಎನ್ನುವ ಮೂಲಕ ಅವಮಾನ ಮಾಡಿದ್ದಾರೆ. ನಾನು 2 ಬಾರಿ ಅಧ್ಯಕ್ಷೆಯಾಗಿದ್ದೇನೆ. ನನಗೂ ಸಾಕಷ್ಟು ಅನುಭವವಿದೆ. ನಾನು ಯಾರ ಮಾತನ್ನು ಕೇಳಿ ಅಧಿಕಾರ ನಡೆಸುತ್ತಿಲ್ಲ. ನನ್ನನ್ನು ದಾರಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸದಸ್ಯ ಕುಮಾರ್ ತಾನು ಬೆಳೆಯುವ ಸಲುವಾಗಿ ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಶಾಸಕರು ಯಾವುದೇ ಅಭಿವೃದ್ಧಿ ಕಾರ್ಯದ ಬಗ್ಗೆ ಗಮನ ಹರಿಸದ ಹಿನ್ನೆಲೆಯಲ್ಲಿ ಅವರ ಗಮನ ಸೆಳೆಯಲು ಕನಕ ಭವನಕ್ಕೆ ಭೂಮಿ ಪೂಜೆ ಮಾಡಿದ್ದೇನೆ. ಇದರಿಂದ ಶಾಸಕರು ಅಭಿವೃದ್ಧಿಗೆ ಗಮನ ಹರಿಸಲಿ ಎಂಬುದಷ್ಟೇ ನಮ್ಮ ಉದ್ದೇಶವಾಗಿತ್ತು. ಆದರೆ ಸದಸ್ಯ ಕುಮಾರ್ ಶಾಸಕರ ದಿಕ್ಕು ತಪ್ಪಿಸಿ ನಮ್ಮ ಮೇಲೆ ಆರೋಪ ಹೊರಿಸಿದ್ದಾರೆ. ಸಂಗೊಳ್ಳಿ ರಾಯಣ್ಣ ಭವನ ನಿರ್ಮಿಸುತ್ತೇವೆ ಎಂದು ಹೇಳಲು ಕುಮಾರ್ ಯಾರು ಎಂದು ಅಧ್ಯಕ್ಷರು ಗರಂ ಆದರು. ಅಲ್ಲದೇ ಇವರು ಗ್ರಾಮದಲ್ಲಿ ಒಡಕು ಮೂಡಿಸಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.



ಸದಸ್ಯ ರವಿಶಂಕರ್ ಮಾತನಾಡಿ, ಕುಮಾರ್ ರಾಜಕೀಯವಾಗಿ ಬೆಳೆಯಲು ಕಾರಣ ಬಸವಣ್ಣನವರು. ಈಗ ಕುಮಾರ್ ಇಲ್ಲಸಲ್ಲದ ಸುಳ್ಳು ಹೇಳಿಕೆ ನೀಡುತ್ತಾ 15 ವರ್ಷಗಳಿಂದ ಜೆಡಿಎಸ್ ಪಕ್ಷದಲ್ಲಿದ್ದೆ ಎನ್ನುವ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿದ್ದ ಅವರನ್ನು ಬಸವಣ್ಣ ರಾಜಕೀಯವಾಗಿ ಬೆಳೆಸುತ್ತಾ ಬಂದರಾದರೂ ಈಗ ಅವರಿಗೆ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್‌ನಲ್ಲಿದ್ದ ಕುಮಾರ್ ಗ್ರಾಮಕ್ಕೆ ಕೋಟ್ಯಾಂತರ ರೂ. ಅನುದಾನವನ್ನು ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಿಸಿದ್ದಾರೆ ಎಂದು ಹೇಳುತ್ತಿದ್ದರು. ಆದರೆ ಈಗ ಉಲ್ಟಾ ಹೊಡೆದು ಶಾಸಕ ಅಶ್ವಿನ್ ಕುಮಾರ್ ಹೆಸರು ಹೇಳುತ್ತಿದ್ದಾರೆ. ಈಗ ಅಶ್ವಿನ್ ಕುಮಾರ್ ಅಧಿಕಾರದಲ್ಲಿರುವ ಕಾರಣ ಅವರನ್ನು ಹಾಡಿ ಹೊಗಳುತ್ತಿರುವ ಇವರು ಶಾಸಕರು ಅಧಿಕಾರ ಕಳೆದುಕೊಂಡರೆ ಅಂದೇ ಪಕ್ಷ ಬದಲಾವಣೆ ಮಾಡಿ ಅಧಿಕಾರ ಇರುವವರ ಮನೆ ಬಾಗಿಲು ತಟ್ಟುವ ನೀತಿಗೆಟ್ಟ ರಾಜಕಾರಣ ಮಾಡುವುದರಲ್ಲಿ ಸಂಶಯವಿಲ್ಲ ಎಂದು ವ್ಯಂಗ್ಯವಾಡಿದರು.

ಸದಸ್ಯರಾದ ಮಹದೇವ್, ನಿಂಗರಾಜ್, ಮಾಜಿ ಅಧ್ಯಕ್ಷ ನಾಗಣ್ಣ, ಡೈರಿ ಉಪಾಧ್ಯಕ್ಷ ನಾಗೇಂದ್ರ, ಗ್ರಾಪಂ ಮಾಜಿ ಉಪಾಧ್ಯಕ್ಷ ನಂಜುಂಡಯ್ಯ, ಮುಖಂಡರಾದ ಎಂ.ಎಲ್.ಹುಂಡಿ ಪ್ರಭುಸ್ವಾಮಿ, ರವಿಕಿರಣ್, ಶ್ರೀಕಂಠಸ್ವಾಮಿ, ಮಂಜುನಾಥ, ನಾಗೇಂದ್ರ, ಕಳ್ಳಿಪುರ ನಾರಾಯಣ್, ಮಾಯಿಗಯ್ಯ ಗೋಷ್ಠಿಯಲ್ಲಿದ್ದರು.

ನಾಗಾಪುರ ಗಿರಿಜನ ಪುನರ್ವಸತಿ ಕೇಂದ್ರದಲ್ಲಿ ಮನೆ ನಿರ್ಮಾಣ ಕಾಮಗಾರಿಗೆ ಚಾಲನೆ

ಹುಣಸೂರು, ಅ.13– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ತಾಲೂಕಿನ 28 ಹಾಡಿಗಳ 530 ಕುಟುಂಬಗಳಿಗೆ ಮನೆ ನಿರ್ಮಿಸಿ ಕೊಡಲಾಗುತ್ತಿದ್ದು, ಉಳಿದವರೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದಲ್ಲಿ ಮಂಜೂರು ಮಾಡಲಾಗುವುದು ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ತಾಲೂಕಿನ ನಾಗಾಪುರ ಗಿರಿಜನ ಪುನರ್ವಸತಿ ಕೇಂದ್ರದ 4ನೇ ಬ್ಲಾಕ್‌ನಲ್ಲಿ ಮನೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ರಾಜೀವ್ ಗಾಂಧಿ ವಸತಿ ನಿಗಮದಿಂದ ಪ್ರತಿ ಮನೆಗೆ 3.75 ಲಕ್ಷ ರೂ. ನೀಡುತ್ತಿದ್ದು, ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲೀವಿಂಗ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಮನೆ ನಿರ್ಮಾಣ ಮಾಡಲಾಗುತ್ತಿದೆ ಎಂದರು.



ಮೊದಲಿಗೆ ನಾಗಾಪುರದಲ್ಲಿ ಪ್ರಾಯೋಗಿಕವಾಗಿ 4 ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಈ ಮನೆಗಳು ಒಪ್ಪಿಗೆ ಆದಲ್ಲಿ ಮಾತ್ರ ಎಲ್ಲಾ ಮನೆಗಳನ್ನು ಕಂಪನಿಯವರೊಂದಿಗೆ ಒಡಂಬಡಿಕೆ ಮಾಡಿಕೊಂಡು ನಿರ್ಮಾಣ ಮಾಡಲಾಗುತ್ತದೆ. ಯೋಜನೆಯಡಿ 4 ಹಂತದಲ್ಲಿ ಅನುದಾನ ಬಿಡುಗಡೆಯಾಗಲಿದ್ದು, ಗಿರಿಜನರು ತಾವೇ ಮುಂದೆ ನಿಂತು ಮನೆ ನಿರ್ಮಾಣಕ್ಕೆ ಮುಂದಾದಲ್ಲಿ ಅಧಿಕಾರಿಗಳು ಸಹಕಾರ ನೀಡಲಿದ್ದಾರೆ ಎಂದರು. ಮೊದಲ ಹಂತದಲ್ಲಿ 532 ಮನೆಗಳನ್ನು ಕಟ್ಟಿಸಿಕೊಡಲಾಗುತ್ತಿದ್ದು, ಹೆಚ್ಚಿನ ಫಲಾನುಭವಿಗಳಿದ್ದಲ್ಲಿ ಅವರಿಗೂ ಮನೆ ನಿರ್ಮಿಸಿ ಕೊಡಲು ಇಲಾಖೆ ಬದ್ಧವಾಗಿದೆ. ಇದೆಲ್ಲವೂ ಹಿಂದಿನ ಸಿದ್ದರಾಮಯ್ಯರ ಸರ್ಕಾರದಲ್ಲಿ ಮಂಜೂರಾಗಿದ್ದ ಮನೆಗಳಾಗಿದ್ದು, 6 ತಿಂಗಳಲ್ಲಿ ಸುಸಜ್ಜಿತ ಮನೆಗಳು ನಿರ್ಮಾಣವಾಗಲಿವೆ ಎಂದರು.

ಚೆಸ್ಕಾಂಗೆ 54 ಲಕ್ಷ ಪಾವತಿ: ತಾಲೂಕಿನ 28 ಹಾಡಿ ನಿವಾಸಿಗಳ ಮನೆಗಳ ಬಾಕಿ 54 ಲಕ್ಷ ವಿದ್ಯುತ್ ಬಿಲ್ ಸರ್ಕಾರದಿಂದ ಮಂಜೂರಾಗಿದ್ದು, ಚೆಸ್ಕಾಂನವರಿಗೆ ಹಸ್ತಾಂತರಿಸಲಾಗಿದೆ. ಇದೀಗ ಸರ್ಕಾರ ಎಸ್‌ಸಿ, ಎಸ್‌ಟಿ ಕುಟುಂಬಗಳಿಗಾಗಿ 75 ಯೂನಿಟ್‌ವರೆಗೆ ಉಚಿತ ವಿದ್ಯುತ್ ಸೌಲಭ್ಯ ಕಲ್ಪಿಸಿದೆ. ಹೆಚ್ಚಿನ ಬಿಲ್ ಬಂದಲ್ಲಿ ನಿಗದಿತ ವೇಳೆಯಲ್ಲಿ ಪಾವತಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ತಾಪಂ ಇಓ ಮನು ಬಿ.ಕೆ., ಎಸ್‌ಟಿ ವರ್ಗಗಳ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಪ್ರಭಾಅರಸ್, ತಾಲೂಕು ಅಭಿವೃದ್ಧಿ ಅಧಿಕಾರಿ ಬಸವರಾಜು, ಗುರುಪುರ ಗ್ರಾಪಂ ಅಧ್ಯಕ್ಷೆ ರಾಧ, ಉಪಾಧ್ಯಕ್ಷ ಲೋಕೇಶ್, ಮಾಜಿ ಅಧ್ಯಕ್ಷ ಪ್ರಶಾಂತ್, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ಆದಿವಾಸಿ ಮುಖಂಡರಾದ ಜೆ.ಟಿ.ರಾಜಪ್ಪ, ಚಂದ್ರು, ಶಿವಣ್ಣ, ವಸಂತ, ಬೀರೇಗೌಡ, ಕಸ್ತೂರಿಗೌಡ, ಹೆಚ್.ವಿ.ಗಣೇಶ್, ಬಸವಣ್ಣ, ನಾಗೇಶ್, ರಾಘು, ಎಚ್.ಎಸ್.ಕುಮಾರ್ ಮತ್ತಿತರರಿದ್ದರು.

ಮೈಸೂರು ರೇಸುಗಳು–2022



15ನೇ ದಿನ, ಶುಕ್ರವಾರ 14–10–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. **ಬೆಳಗಾಂ ಪ್ಲೇಟ್–1600** ಮೀ. ರೇಟೆಡ್ 40 ರಿಂದ 65. ಮೈಸೂರ್ ಬೇಸ್ಡ್ ಹಾರ್ಸ್. ಮ.2.00ಕ್ಕೆ
1. ಥಿಯಾಮಾರಿಯಾ 2. ಗಿನ್ ಟೋಕಿ 3. ಅರೇಲಿ

II. **ನೈವೇಲಿ ಪ್ಲೇಟ್–1200** ಮೀ. ಡಿ2. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಥಿಯಾಸ್ ಗಿಫ್ಟ್ 2. ಆಕಾಶಿ 3. ಕಪ್ಪದೋಸಿಯಾ

III. **ಡೆಲ್ಲಿ ಪ್ಲೇಟ್–1600** ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಲೈಕೂರ್ಗಸ್ 2 ವರ್ಲ್ಡ್‌ಲಿ ವೈಸ್ 3. ತರೇಕ್

IV. **A.R.ಸುಬ್ರಮಣ್ಯ ರಾಜೇ ಅರಸ್ ಮೆಮೋರಿಯಲ್ ಟ್ರೋಫಿ–1200** ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಲೌಟರ್ ಬ್ರೂನೇನ್ 2. ಪರ್‌ನೆಟ್ ಬ್ರಾಂಕ್ 3. ಮಾರ್ಕ್ ಒನ್

V. **ಗವರ್ನರ್ಸ್ ಕಪ್–2022 –2000** ಮೀ. 4 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಟ್ರಫಾಲ್‌ಗರ್ 2. ಸ್ಪೀಡ್‌ಸ್ಟರ್

VI. **ಪಾಪನಾಸಿನಿ ಪ್ಲೇಟ್–1200** ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಸಿಲ್ವರ್ ಡೇಸ್ ಅಗೈನ್ 2. ಕೋಸ್ಟಲ್ ಕ್ರೂಸಿ 3. ವಿಂಡ್ ಪವರ್

VII. **ನೈವೇಲಿ ಪ್ಲೇಟ್ –1200** ಮೀ. ರೇಟೆಡ್ 00 ರಿಂದ 25. ಡಿ1 ಸಂ.5.00ಕ್ಕೆ
1 ಜರ್ಸಿ ಲೆಜಂಡ್ 2. ಕಮ್ ಅಲೈವ್ 3. ರ್‍ಯಾಪ್‌ಟರ್

ದಿನದ ಅತ್ಯುತ್ತಮ	: ಟ್ರಫಾಲಗರ್
ಡಬ್ಬಲ್	: ಲೌಟರ್ ಬ್ರೂನೇನ್, ಸಿಲ್ವರ್ ಡೇಸ್ ಅಗೈನ್
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್‌ಸ್ಟರ್ ಪಿಜಿಸಿ



ಬನ್ನೂರಿನಲ್ಲಿ ಎಸ್‌ಬಿಐ ವತಿಯಿಂದ ಗೃಹಸಾಲ ಮೇಳ ಹಮ್ಮಿಕೊಳ್ಳಲಾಗಿತ್ತು. ಬ್ಯಾಂಕ್ ವ್ಯವಸ್ಥಾಪಕ ಬಾದುಸಿಂಗ್, ಪ್ರಾದೇಶಿಕ ವ್ಯವಸ್ಥಾಪಕ ವೆಂಕಟೇಶಲು, ಪಲ್ಲವಿ, ಪ್ರಸನ್ನ, ಪ್ರವೀಣ್, ನಟೇಶ್, ವಾಸೀಮ್ ಸೇರಿದಂತೆ ಹಲವರಿದ್ದರು.

ಇಲವಾಲ ಬಳಿ ಕಿದ್ವಾಯಿ ಘಟಕಕ್ಕೆ ಜಾಗ

● ವೈದ್ಯಕೀಯ ಶಿಕ್ಷಣ ಇಲಾಖೆ ಹೆಸರಲ್ಲಿ 18 ಎಕರೆ ಕಾಯ್ದಿರಿಸಲು ಸೂಚನೆ
● ಸಂಸದ ಪ್ರತಾಪ್ ಸಿಂಹ ಮನವಿಗೆ ಮುಖ್ಯಮಂತ್ರಿಗಳಿಂದ ಭೂಮಿ ಮಂಜೂರು

ಮೈಸೂರು, ಅ.13(ಎಸ್‌ಬಿಡಿ)– ಬಹುಬೇಡಿಕೆಯ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸಂಶೋಧನಾ ಘಟಕ(ಕ್ಯಾನ್ಸರ್ ಚಿಕಿತ್ಸಾ ಘಟಕ) ನಿರ್ಮಾಣಕ್ಕೆ ಇಲವಾಲದ ಬಳಿ ಸ್ಥಳ ಕಾಯ್ದಿರಿಸಲು ಮೈಸೂರು ಜಿಲ್ಲಾಧಿಕಾರಿಗಳಿಗೆ ಸರ್ಕಾರ ತಿಳಿಸಿದೆ.





ಮೈಸೂರು ತಾಲೂಕು ಇಲವಾಲ ಹೋಬಳಿ, ದಡದಕಲ್ಲಹಳ್ಳಿ ಗ್ರಾಮದ ಸ.ನಂ.125ರಲ್ಲಿರುವ 18 ಎಕರೆ 'ಗೋಮಾಳ' ಜಮೀನನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಹೆಸರಿನಲ್ಲಿ ಕಾಯ್ದಿರಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಕಂದಾಯ ಇಲಾಖೆ), ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರಿಗೆ ಗುರುವಾರ ಪತ್ರ ಬರೆದಿದ್ದಾರೆ.

ದಡದಕಲ್ಲಹಳ್ಳಿ ಗ್ರಾಮದ ಸ.ನಂ.125ರ 18 ಎಕರೆ ಗೋಮಾಳ ಜಮೀನನ್ನು, ಕರ್ನಾಟಕ ಭೂ ಕಂದಾಯ ನಿಯಮಗಳು, 1999ರ ನಿಯಮ 97(4) ರನ್ವಯ 'ಗೋಮಾಳ' ಶೀರ್ಷಿಕೆಯಿಂದ ತಗ್ಗಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20(1)(ಸಿ)ರನ್ವಯ ಮಾರುಕಟ್ಟೆ ಮೌಲ್ಯದ ಶೇ.50 ರಷ್ಟು ವಿಧಿಸಿ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಮಂಜೂರು ಮಾಡಲು ಸರ್ಕಾರ ಅನುಮತಿಸಿದ್ದನ್ನು ಮಾರ್ಪಡಿಸಿ, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರನ್ವಯ ವೈದ್ಯಕೀಯ ಶಿಕ್ಷಣ ಇಲಾಖೆ ಹೆಸರಿನಲ್ಲಿ ಸದರಿ ಜಮೀನು ಕಾಯ್ದಿರಿಸಲು ಸರ್ಕಾರ ಪೂರ್ವಾನುಮೋದನೆ ನೀಡಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಈ ಸಂಬಂಧ ಸಂಸದ ಪ್ರತಾಪ್ ಸಿಂಹ ಪತ್ರಿಕಾ ಹೇಳಿಕೆ ನೀಡಿದ್ದು, 'ನನ್ನ ಮನವಿಗೆ ಓಗೊಟ್ಟು ಮೈಸೂರಿನಲ್ಲಿ ಕಿದ್ವಾಯಿ ಪ್ಯಾಲಿಯೇಟಿವ್ ಕೇರ್ ಮತ್ತು ರಿಸರ್ಚ್ ಸೆಂಟರ್ ತೆರೆಯಲು ದಡದಕಲ್ಲಹಳ್ಳಿ ಬಳಿ 18 ಎಕರೆ ಭೂಮಿಯನ್ನು ಉಚಿತವಾಗಿ ಮಂಜೂರು ಮಾಡಿಕೊಟ್ಟ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್.ಅಶೋಕ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್, ಸಹಕರಿಸಿದ ಮಾಜಿ ಸಚಿವ ಮತ್ತು ಹಾಲಿ ಶಾಸಕರಾದ ಜಿ.ಟಿ.ದೇವೇಗೌಡರು ಮತ್ತು ಡಿಸಿ ಡಾ.ಬಗಾದಿ ಗೌತಮ್ ಅವರಿಗೆ ಧನ್ಯವಾದಗಳು' ಎಂದು ತಿಳಿಸಿದ್ದಾರೆ. ಇವರು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸಂಶೋಧನಾ ಘಟಕ ಮತ್ತು ಪ್ಯಾಲಿಯೇಟೀವ್ ಕೇರ್ ಸೆಂಟರ್ ಸ್ಥಾಪನೆಗೆ ಮೈಸೂರು ಹೊರವಲಯದಲ್ಲಿ ಕನಿಷ್ಠ 25 ಎಕರೆ ಜಮೀನು ಮಂಜೂರು ಮಾಡಲು ಕೋರಿ ಮಾ.31ರಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು.

ಪಿಸ್ತೂಲ್ ತೋರಿಸಿ ಬೆದರಿಕೆ

● ಕೆ.ಸಿ.ನಗರದ ಪೀಟರ್ ಫಾರಂ ವಾಚ್‌ಮನ್ ದೂರು
● ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಅ.13–ಮೈಸೂರಿನ ಕೆ.ಸಿ.ನಗರದಲ್ಲಿರುವ ಪೀಟರ್ ಫಾರಂಗೆ ಅತಿಕ್ರಮವಾಗಿ ಪ್ರವೇಶಿಸಿದ ಮೂವರು ಅಪರಿಚಿತರು ವಾಚ್‌ಮನ್‌ಗೆ ಪಿಸ್ತೂಲು ತೋರಿಸಿ ಬೆದರಿಕೆ ಹಾಕಿದ ಬಗ್ಗೆ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಬಗ್ಗೆ ದೂರು ನೀಡಿರುವ ವಾಚ್‌ಮನ್ ನಾಗರಾಜು, ಬುಧವಾರ ಸಂಜೆ 5.30ರ ಸುಮಾರಿನಲ್ಲಿ ಫಾರಂಗೆ ಕಪ್ಪು ಬಣ್ಣದ ಕಾರಿನಲ್ಲಿ ಬಂದ ಮೂವರು ತನಗೆ ಪಿಸ್ತೂಲು ತೋರಿಸಿ ಬೆದರಿಸಿದರು. ಅವರಲ್ಲಿ ಒಬ್ಬಾತ ತನ್ನನ್ನು ಗಿರೀಶ ಅಲಿಯಾಸ್ ಬೇಬಿ ಎಂದು ಹೇಳಿಕೊಂಡು ಈ ತೋಟವನ್ನು ತಾನು ಲೀಸ್‌ಗೆ ಪಡೆದಿರುವುದಾಗಿಯೂ, ನೀನು(ವಾಚ್‌ಮನ್) ಇಲ್ಲೇ ಇದ್ದರೆ ಶೂಟ್ ಮಾಡಿ ಕೇರಳಕ್ಕೆ ಹೋಗುತ್ತೇನೆ ಎಂದು ಬೆದರಿಸಿದ.

ಆತನ ಜೊತೆ ಬಂದಿದ್ದವರು ತನಗೆ ಕೆಲಸ ನೀಡಿದ್ದ ಫಾರಂ ಮಾಲೀಕರನ್ನು ಅವಾಚ್ಯ ಶಬ್ದಗಳಿಂದ ಬೈದು ತಾವು ಇನ್ನು ಅರ್ಧ ಗಂಟೆ ಬಿಟ್ಟು ಬರುತ್ತೇವೆ. ಆಗಲೂ ನೀನು ಇಲ್ಲೇ ಇದ್ದರೆ ಶೂಟ್ ಮಾಡುತ್ತೇವೆ ಎಂದು ಬೆದರಿಸಿದರು. ಈ ವೇಳೆ ತನ್ನ ಸ್ನೇಹಿತರಾದ ರೋಹಿತ್ ಮತ್ತು ರಮೇಶ್ ಅವರುಗಳು ಸ್ಥಳಕ್ಕೆ ಬಂದಾಗ ಸದರಿ ವ್ಯಕ್ತಿಗಳು ಕಾರಿನಲ್ಲಿ ಹೋದವರು ಮತ್ತೆ ವಾಪಸ್ ಬಂದಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಪೊಲೀಸರು ಭಾರತೀಯ ದಂಡ ಸಂಹಿತೆ 447, 504, 506 ಮತ್ತು ಶಸ್ತ್ರಾಸ್ತ್ರ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ರಾಜ್ಯದ ವಿವಿಧ ಭಾಗದಲ್ಲಿ ಭಾರೀ ಮಳೆ

ಕಟ್ಟೆಚ್ಚರ ವಹಿಸಲು ಡಿಸಿಗಳಿಗೆ ಸಿಎಂ ಎಚ್ಚರಿಕೆ

ಬೆಂಗಳೂರು, ಅ.13(ಕೆಎಂಶಿ)–ರಾಜ್ಯದ ವಿವಿಧ ಭಾಗಗಳಲ್ಲಿ ಭಾರೀ ಮಳೆ ಬೀಳುತ್ತಿದ್ದು, ಜಿಲ್ಲಾಡಳಿತ ಕಟ್ಟೆಚ್ಚರಿಕೆ ವಹಿಸಬೇಕೆಂದು ಸಿಎಂ ಬಸವರಾಜ ಬೊಮ್ಮಾಯಿ ಜಿಲ್ಲಾಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಸಂಕಲ್ಪ ಯಾತ್ರೆ ಪ್ರವಾಸ ಸಂದರ್ಭದಲ್ಲೇ ಎಲ್ಲಾ ಡಿಸಿಗಳ ಜೊತೆ ವಿಡಿಯೋ ಸಂವಾದ ನಡೆಸಿ, ಮಳೆಯ ಪರಿಸ್ಥಿತಿಯ ಮಾಹಿತಿ ಪಡೆದಿದ್ದಲ್ಲದೆ, ಮಳೆಯಿಂದ ಯಾವುದೇ ರೀತಿ ಹಾನಿಯಾದಲ್ಲಿ ತಕ್ಷಣವೇ ಪರಿಹಾರ ಕಲ್ಪಿಸಿ ಎಂದು ಆದೇಶಿಸಿದ್ದಾರೆ. ಈ ಸಂದರ್ಭದಲ್ಲಿ ಪರಿಹಾರ ಕ್ರಮಗಳ ಪರಿಶೀಲನೆ ನಡೆಸಿದರು. ಮನೆಗಳಿಗೆ ಸಂಬಂಧಿಸಿದ ಹಾನಿಯನ್ನು ದಾಖಲಿಸುವ ಹಂತದಲ್ಲಿಯೇ ಕೆಲವೆಡೆ ಲೋಪ ಗಳಾಗುತ್ತಿರುವುದು ಗಮನಕ್ಕೆ ಬಂದಿದೆ. ಇಂತಹ ಲೋಪವಾಗದಂತೆ ಜಿಲ್ಲಾಧಿಕಾರಿಗಳು ಖುದ್ದು ಮೇಲ್ವಿಚಾರಣೆ ವಹಿಸಬೇಕು. ವಸ್ತುಸ್ಥಿತಿ ಆಧರಿಸಿ, ಪರಿಹಾರ ಕೋರಿ ಬಂದ ಮನವಿಗಳನ್ನು ದಾಖಲಿಸಬೇಕು. ಕರ್ತವ್ಯ ಲೋಪ ಎಸಗಿದ ಸಿಬ್ಬಂದಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ತಂದೆಯ ಅರೆ ಸರ್ಕಾರಿ ಹುದ್ದೆಯನ್ನು ಅಕ್ರಮವಾಗಿ ಮತ್ತೊಬ್ಬರು ಪಡೆದ ಆರೋಪ; ಪ್ರತಿಭಟನೆ

ಮೈಸೂರು, ಅ.13(ಪಿಎಂ)– ತಮ್ಮ ತಂದೆ ನಿರ್ವಹಿಸುತ್ತಿದ್ದ ಗ್ರಾಮ ಸಹಾಯಕ ಹುದ್ದೆಯನ್ನು ತನಗೆ ನೀಡಬೇಕೆಂದು ವರುಣಾ ಹೋಬಳಿ ಆಯರಹಳ್ಳಿ ಗ್ರಾಮದ ನಿವಾಸಿ ದೇವಮ್ಮ, ತಮ್ಮ ಕುಟುಂಬ ಸದಸ್ಯರೊಂದಿಗೆ ಗುರುವಾರ ಪ್ರತಿಭಟನೆ ನಡೆಸಿದರು.



ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ತಿಮ್ಮಯ್ಯ ಕುಟುಂಬದವರು, ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಆಯರಹಳ್ಳಿ ಗ್ರಾಮದ ಗ್ರಾಮ ಸಹಾಯಕ ಹುದ್ದೆಗೆ ಇದೇ ಗ್ರಾಮದವರಾದ ತಿಮ್ಮಯ್ಯ 1978ರಲ್ಲಿ ಆಯ್ಕೆಯಾಗಿದ್ದರು. ಆದರೆ ರಾಜಕೀಯ ಕುತಂತ್ರದಿಂದ ಮತ್ತು ಅಧಿಕಾರಿಗಳ ಕೈವಾಡದಿಂದ 2000ರಲ್ಲಿ ಏಕಾಏಕಿ ಗ್ರಾಮ ಸಹಾಯಕ ಹುದ್ದೆಯಿಂದ ತಿಮ್ಮಯ್ಯ ಅವರನ್ನು ತೆಗೆದು ಹಾಕಿ, ಈ ಹುದ್ದೆಯನ್ನು ಬೇರೊಬ್ಬರಿಗೆ ನೀಡಲಾಗಿದೆ ಎಂದು ಆರೋಪಿಸಿದರು.

ತಿಮ್ಮಯ್ಯ ಅವರ ಸಂಬಂಧಿಕ ಎಂದು ಸುಳ್ಳು ದಾಖಲೆ ಸೃಷ್ಟಿಸಿ ವ್ಯಕ್ತಿಯೊಬ್ಬರು ಅಕ್ರಮವಾಗಿ ಈ ಹುದ್ದೆ ಪಡೆದಿದ್ದಾರೆ. ಗ್ರಾಮ ಸಹಾಯಕ ಹುದ್ದೆಯು ಅರೆ ಸರ್ಕಾರಿ ಹುದ್ದೆಯಾಗಿದ್ದು, ಜಿಲ್ಲಾಧಿಕಾರಿಗಳ ಮೂಲಕ ತಿಮ್ಮಯ್ಯನವರು ಈ ಹುದ್ದೆಗೆ ಆಯ್ಕೆಯಾಗಿದ್ದರು. ತಿಮ್ಮಯ್ಯನವರು ನಿರ್ವಹಿಸುತ್ತಿದ್ದ ಹುದ್ದೆಯನ್ನು ತಿಮ್ಮಯ್ಯರ ಪುತ್ರಿ ದೇವಮ್ಮರಿಗೆ ನೀಡಬೇಕೆಂದು ಕುಟುಂಬದವರು ಒತ್ತಾಯಿಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಕೈಬಿಟ್ಟರು. ದೇವಮ್ಮ ಕುಟುಂಬದವರಾದ ಬಾಲರಾಜ್, ಜಯಲಕ್ಷ್ಮಿ, ಭಾಸ್ಕರ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪಿಎಚ್‌ಡಿ ಪದವಿ

ಮೈಸೂರು,ಅ.13–ನಿರ್ವಹಣೆ ವಿಷಯದಲ್ಲಿ ಪ್ರವೀಣ್ ಕೆ.ಎಸ್. ನಾಯಕ್ ಸಂಶೋಧನೆ ನಡೆಸಿ, ಮಂಡಿಸಿದ ಮಹಾಪ್ರಬಂಧವನ್ನು ಪಿಎಚ್‌ಡಿ ಪದವಿಗೆ ಮೈಸೂರು ವಿಶ್ವವಿದ್ಯಾನಿಲಯ ಅಂಗೀಕರಿಸಿದೆ. ಡಾ.ಎಂ. ಶಿವಲಿಂಗೇಗೌಡರ ಮಾರ್ಗದರ್ಶನದಲ್ಲಿ ಪ್ರವೀಣ್ ಈ ಪ್ರಬಂಧ ಸಿದ್ಧಪಡಿಸಿದ್ದರು.



ಸಾರ್ವಜನಿಕ ಪ್ರಕಟಣೆ

ಕಾವೇರಿ ಗೃಹ ನಿರ್ಮಾಣ ಸಹಕಾರ ಸಂಘ, ಮೈಸೂರು ರವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಹರದನಹಳ್ಳಿ ಗ್ರಾಮದ ಸರ್ವೆ ನಂ. 16/3 ಮತ್ತು ಸರ್ವೆ ನಂ. 16/4 ರ ಜಮೀನುಗಳಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡಿದ್ದು, ಸದರಿ ಸ್ವತ್ತುಗಳನ್ನು ಅದರ ಕಾನೂನಬದ್ಧ ಮಾಲೀಕರುಗಳಿಂದ ಖರೀದಿ ಮಾಡಿದ್ದು, ಸದರಿ ಜಮೀನುಗಳಿಗೆ ಈ ಮೇಲೆ ತಿಳಿಸಿದ ಸ್ವತ್ತಿನ ಮಾಲೀಕರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ನಮ್ಮ ಸಂಘವು ಚಿಕ್ಕಹರದನಹಳ್ಳಿ ಗ್ರಾಮದ ಸರ್ವೆ ನಂ. 16/2 ರಲ್ಲಿನ 0 ಎಕರೆ 19 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ನಿರ್ದಿಷ್ಟ ಪರಿಹಾರ ಕಾಯ್ದೆಯಡಿ ದಾವೆಯನ್ನು ಸದರಿ ಸ್ವತ್ತಿನ ಮಾಲೀಕರಾದ ಬಿ. ಕೃಷ್ಣಪ್ಪ ರವರ ವಿರುದ್ಧ ಅಸಲು ದಾವಾ ಸಂಖ್ಯೆ: 464/2014 ರಂತೆ ಮಾನ್ಯ 6ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಮೈಸೂರಿನಲ್ಲಿ ಸಲ್ಲಿಸಿದ್ದು, ಸದರಿ ದಾವೆಯು ವಿಚಾರಣೆಗೆ ಬಾಕಿ ಇರುತ್ತದೆ. ಸದರಿ ದಾವೆಯನ್ನು ನಾವು ಕೃಷ್ಣಪ್ಪರ ವಿರುದ್ಧ ಸಲ್ಲಿಸಿರುವುದರಿಂದ ಸದರಿ ಕೃಷ್ಣಪ್ಪ ಅಸಲು ದಾವಾ ಸಂಖ್ಯೆ: 716/2019 ಅನ್ನು ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿ ಅದರಲ್ಲಿ ಮಧ್ಯಂತರ ನಿರ್ಬಂಧಕಾಜ್ಞೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ನಮ್ಮ ಸಂಘದ ಪರವಾಗಿ ತೀರ್ಮಾನವಾಗಿದ್ದು, ಸದರಿ ಆದೇಶದ ವಿರುದ್ಧ ಬಿ. ಕೃಷ್ಣಪ್ಪ ಎಂ.ಎ. ಸಂಖ್ಯೆ: 13/2020 ರಂತೆ ಮಾನ್ಯ 2ನೇ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯು ಸಹ ದಿನಾಂಕ: 29–03–2022 ರಂದು ವಜಾಗೊಂಡು ನಮ್ಮ ಸಂಘದ ಪರವಾಗಿ ತೀರ್ಪು ನೀಡಿರುತ್ತಾರೆ.

ಸದರಿ ಬಿ. ಕೃಷ್ಣಪ್ಪ ರವರು ನಮ್ಮ ಸಂಘದ ಸದಸ್ಯರಲ್ಲಿ ಆತಂಕವನ್ನು ಉಂಟುಮಾಡಲು ದಿನಾಂಕ: 10–10–2022 ರ ಮೈಸೂರು ಮಿತ್ರ ದಿನಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿರುವುದು ಕೇವಲ ಸಂಘದ ಸದಸ್ಯರಲ್ಲಿ ಗೊಂದಲವನ್ನು ಸೃಷ್ಟಿಸಲು ಆಗಿರುತ್ತದೆ. ಆದ್ದರಿಂದ ಸಂಘ ಸದಸ್ಯರು ಸದರಿ ಪ್ರಕಟಣೆಯಿಂದ ವಿಚಲಿತರಾಗಬಾರದೆಂದು ಹಾಗೂ ನಮ್ಮ ಸಂಘವು ಕಾನೂನುಬದ್ಧವಾಗಿ ಸಂಘದ ಸದಸ್ಯರ ಹಿತವನ್ನು ಕಾಪಾಡಲು ಸದಾ ಸಿದ್ಧರಿರುವುದಾಗಿ ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಕೆ.ಎಸ್. ಮಹದೇವ ಪ್ರಸಾದ್, ವಕೀಲರು,
ನಂ. 1028, ಸಿ.ಹೆಚ್. 20/ಡಿ, ಮಳಿಗೆ ಸಂಖ್ಯೆ 2 ಮತ್ತು 3,
1ನೇ ಮಹಡಿ, ಜಯಲಕ್ಷ್ಮೀ ವಿಲಾಸ ರಸ್ತೆ, ಚಾಮರಾಜಪುರಂ,
ಮೈಸೂರು–570 005. ಮೊ: 9164277766

ಕರ್ನಾಟಕ ಸರ್ಕಾರ

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ

CADA

ಕಾವೇರಿ ಜಲಾನಯನ ಯೋಜನೆಗಳು – ಮೈಸೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ, ನಂ. 2 ವಿಭಾಗ, ಕಾಜಯೋ ವಿಜಯನಗರ 1ನೇ ಹಂತ, ಮೈಸೂರು – 17, ಇ–ಮೇಲ್ : eecada2mysore@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 05/2022–23 ದಿ : 11.10.2022

ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ ಹಾಗೂ ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಆಯಕಟ್ಟು ರಸ್ತೆ – 22, ಬಸಿಗಾಲುವೆ – 03 ಮತ್ತು ಭೂಕ್ಷಾರ – 03 ಒಟ್ಟು 28 ಕಾಮಗಾರಿಗಳಿಗೆ K/W-1 ರ ಪ್ರಕಾರ e-portal ಮೂಲಕ ಐಟಂವಾರು ಟೆಂಡರ್ ಅನ್ನು ಏಕಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು http://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ : 17.10.2022** ರಿಂದ ಟೆಂಡರ್‌ದಾರರು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **02.11.2022 ಸಂಜೆ 4.00 ಗಂಟೆಯವರೆಗೆ,** ಟೆಂಡರ್ ತೆರೆಯುವ ದಿನಾಂಕ : **03.11.2022 ಸಂಜೆ 4.30 ಗಂಟೆಯ ನಂತರ.**

ಸಹಿ/–
ಕಾರ್ಯಪಾಲಕ ಅಭಿಯಂತರು,
ನಂ.2 ವಿಭಾಗ, ಕಾಡಾ, ಕಾಜಯೋ,
ಮೈಸೂರು.

ವಾಸಾಸಂಇ/ಮೈಸೂರು/ಶಿರಡಿಸಾಯಿ/561/2022–23

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ವಾವಿನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಸಂಖ್ಯೆ: ಮೈನಪಾ/ಕಾಇಂ/ವಾವಿನೀಸ&ಒಚ(ಪೂರ್ವ)/ಟಿಎನ್–07/2022–23 ದಿನಾಂಕ: 13–10–2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಹಾಗೂ 15ನೇ ಹಣಕಾಸು ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5.30 ಗಂಟೆಗೆ		
				ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ಕಾರ್ಯಪಾಲಕ ಅಭಿಯಂತರರು (ವಾ.ವಿ.ನೀ.ಸ & ಒಚ (ಪೂರ್ವ) ವಿಭಾಗ)	6	64.00	15.10.2022	31.10.2022	02.11.2022
		2	41.00	14.10.2022	21.10.2022	25.10.2022
2	ಕಾರ್ಯಪಾಲಕ ಅಭಿಯಂತರರು (ವಾ.ವಿ.ನೀ.ಸ & ಒಚ (ಪಶ್ಚಿಮ) ವಿಭಾಗ)	4	55.55	15.10.2022	21.10.2022	25.10.2022

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ವಾವಿನೀಸ&ಒಚ(ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

3ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀ ಸುನಿಲ್ ಜೆ. (ಕಾಫಿ)

ದುಃಖತಪ್ತರು:
ಶ್ರೀ ಜೆ.ಸುರೇಶ್, ಶ್ರೀಮತಿ ನಿಂಗಮ್ಮ, ಶ್ರೀ ಕೆ.ಆಂದಾನಯ್ಯ, ಶ್ರೀ ನಾಗರಾಜು
ಹಾಗೂ ಸ್ನೇಹಿತರು, ಕುಕ್ಕರಹಳ್ಳಿ, ಸರಸ್ವತಿಪುರಂ, ಮೈಸೂರು

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ಪಾನೀಯ ವಿಭಾಗ

ನಂ.36, ಎಂಎಸ್‌ಐಎಲ್ ಹೌಸ್, ಕನ್ನಿಂಗ್‌ಹ್ಯಾಂ ರಸ್ತೆ , ಬೆಂಗಳೂರು – 560 052. ದೂರವಾಣಿ : 22264021/25
ಇ–ಮೇಲ್: msil.liquor@msilonline.com ವೆಬ್‌ಸೈಟ್: www.msilonline.com

ಪತ್ರಿಕಾ ಪ್ರಕಟಣೆ

ಕೆಳಕಂಡ ಜಿಲ್ಲೆಗಳಲ್ಲಿ ಎಂಎಸ್‌ಐಎಲ್ ಮಳಿಗೆಗಳನ್ನು ಪ್ರಾರಂಭಿಸಲು ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಠ 250 ರಿಂದ 500 Sq.Ft ಕಾರ್ಪೋರೇಷನ್ ಸಿಟಿ (ಬೆಳಗಾವಿ, ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಮೈಸೂರು, ಕಲಬುರಗಿ, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ) ವ್ಯಾಪ್ತಿಯಲ್ಲಿ 500 ರಿಂದ 1000 Sq.Ft ಮತ್ತು ಬೆಂಗಳೂರು ನಗರ ಬಿಬಿಎಂಪಿ ವ್ಯಾಪ್ತಿಯಲ್ಲಿ 1000 ರಿಂದ 1500 Sq.Ft ವರೆಗೆ ಜಾಗ ಹೊಂದಿರುವ ಮಳಿಗೆಗಳು ಬಾಡಿಗೆಗೆ ಬೇಕಾಗಿರುತ್ತವೆ. ಮಳಿಗೆಗಳು ಕಾಂಕ್ರೀಟ್ ಚಾವಣಿ ಹಾಗೂ ಶಟರ್ಸ್‌ನೊಂದಿಗೆ ವ್ಯಾಪಾರವಾಗುವಂತಹ ಸ್ಥಳಗಳಲ್ಲಿ ಇದ್ದು, ಅಬಕಾರಿ ನಿಯಮ (5) ರಡಿಯಲ್ಲಿ (100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಶಾಲಾ ಕಾಲೇಜು, ಆಸ್ಪತ್ರೆ, ಸರ್ಕಾರಿ ಕಛೇರಿ ಹಾಗೂ ಹರಿಜನ & ಗಿರಿಜನಗಳ ಕಾಲೋನಿ/ವಾಸಸ್ಥಳ ಇರಬಾರದು ಹಾಗೂ ರಾಜ್ಯ ಮತ್ತು ರಾಷ್ಟ್ರ ಹೆದ್ದಾರಿಯಿಂದ 220 ಮೀಟರ್ ಅಂತರ ಇರಬೇಕು) ಮುಕ್ತಿ ಹೊಂದಿರಬೇಕು ಮತ್ತು ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆಯಾಗಿರಬೇಕು. ಆಸಕ್ತಿಯುಳ್ಳ ಮಳಿಗೆ ಮಾಲೀಕರು ಈ ಪ್ರಕಟಣೆಯ ದಿನಾಂಕದಿಂದ 10 ದಿನಗಳೊಳಗೆ ಈ ಕೆಳಕಂಡವರನ್ನು ಸಂಪರ್ಕಿಸಬಹುದಾಗಿರುತ್ತದೆ. ಈ ಕುರಿತು ಎಂಎಸ್‌ಐಎಲ್ ಸಂಸ್ಥೆಯು ತೆಗೆದುಕೊಳ್ಳುವ ತೀರ್ಮಾನ ಅಂತಿಮವಾಗಿರುತ್ತದೆ.

ಕ್ರ ಸಂ.	ಜಿಲ್ಲೆಯ ಹೆಸರು	ಬೇಕಾಗಿರುವ ಮಳಿಗೆಗಳ ಸಂಖ್ಯೆ	ಸಂಪರ್ಕಿಸಬೇಕಾದವರ ವಿವರ
1	ಬೆಂಗಳೂರು	61	ಸಮಾಲೋಚಕರು
2	ಚಿಕ್ಕಬಳ್ಳಾಪುರ	6	(ಬೆಂಗಳೂರು ನಗರ & ಗ್ರಾಮಾಂತರ ವಲಯ)
3	ಕೋಲಾರ	13	ದೂರವಾಣಿ ಸಂಖ್ಯೆ: 9663225533
4	ಬೆಂಗಳೂರು ಗ್ರಾಮಾಂತರ	13	ವಿಳಾಸ: ಎಂಎಸ್‌ಐಎಲ್ ಕೇಂದ್ರ ಕಛೇರಿ, ನಂ.36, ಕನ್ನಿಂಗ್‌ಹ್ಯಾಂ
5	ರಾಮನಗರ	9	ರೋಡ್, ಬೆಂಗಳೂರು–52
6	ತುಮಕೂರು	8	
7	ಮೈಸೂರು	18	ಶಾಖಾ ಮುಖ್ಯಸ್ಥರು, ಮೈಸೂರು ಶಾಖೆ
8	ಮಂಡ್ಯ	8	ದೂರವಾಣಿ ಸಂಖ್ಯೆ: 9448878199
9	ಹಾಸನ	10	ವಿಳಾಸ: ಎಂಎಸ್‌ಐಎಲ್, ಮೈಸೂರು ಟ್ರೇಡ್ ಸೆಂಟರ್, 3ನೇ ಮಹಡಿ,
10	ಚಾಮರಾಜನಗರ	12	ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಮೈಸೂರು–570001
11	ಬೆಳಗಾವಿ	19	ಶಾಖಾ ಮುಖ್ಯಸ್ಥರು, ಬೆಳಗಾವಿ ಶಾಖೆ
12	ವಿಜಯಪುರ	4	ದೂರವಾಣಿ ಸಂಖ್ಯೆ: 9480812991
13	ಧಾರವಾಡ	12	ವಿಳಾಸ: ಎಂಎಸ್‌ಐಎಲ್, ಮೊದಲನೇ ಮಹಡಿ, ಮುಜಾವರ್ ಆರ್ಕೇಡ್,
14	ಗದಗ	13	ಮುಜಾವರ್ ಕಾಂಪೌಂಡ್, ಬೆಳಗಾವಿ
15	ಉತ್ತರ ಕನ್ನಡ	22	
16	ಬಳ್ಳಾರಿ	11	ಶಾಖಾ ಮುಖ್ಯಸ್ಥರು, ದಾವಣಗೆರೆ ಶಾಖೆ
17	ಚಿತ್ರದುರ್ಗ	9	ದೂರವಾಣಿ ಸಂಖ್ಯೆ: 9480812960
18	ದಾವಣಗೆರೆ	1	ವಿಳಾಸ: ಎಂಎಸ್‌ಐಎಲ್ ನಂ.262/1, ನೆಲಮಹಡಿ, ಬಿಜೆ ಆರ್ಕೇಡ್,
19	ಹಾವೇರಿ	12	ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ, ಪಿಬಿ ರೋಡ್,
20	ಶಿವಮೊಗ್ಗ	8	ದಾವಣಗೆರೆ–577002
21	ಬೀದರ್	4	ಶಾಖಾ ಮುಖ್ಯಸ್ಥರು, ಕಲಬುರಗಿ ಶಾಖೆ
22	ಕಲಬುರಗಿ	6	ದೂರವಾಣಿ ಸಂಖ್ಯೆ: 9845397282
23	ಕೊಪ್ಪಳ	5	ವಿಳಾಸ: ಎಂಎಸ್‌ಐಎಲ್, ಏಷ್ಯನ್ ಪ್ಲಾಜಾ, 3ನೇ ಮಹಡಿ,
24	ರಾಯಚೂರು	7	ತಿಮ್ಮಾಪುರಿ ಸರ್ಕಲ್, ಮುಖ್ಯ ರಸ್ತೆ, ಕಲಬುರಗಿ–585101
25	ಯಾದಗಿರಿ	7	
26	ಚಿಕ್ಕಮಗಳೂರು	12	ಶಾಖಾ ಮುಖ್ಯಸ್ಥರು, ಮಂಗಳೂರು ಶಾಖೆ
27	ದಕ್ಷಿಣ ಕನ್ನಡ	17	ದೂರವಾಣಿ ಸಂಖ್ಯೆ: 9611675383
28	ಕೊಡಗು	6	ವಿಳಾಸ: ಎಂಎಸ್‌ಐಎಲ್, ನಂ.408, ಮಹೇಂದ್ರ ಆರ್ಕೇಡ್,
29	ಉಡುಪಿ	14	3ನೇ ಮಹಡಿ, ಕುದುಮಲ್ ರಂಗರಾವ್ ರೋಡ್, ಮಂಗಳೂರು–575003.

ಸಹಿ/– ಪ್ರಧಾನ ವ್ಯವಸ್ಥಾಪಕರು (ಪಾನೀಯ)